بِسۡمِ اللّٰہِ الرَّحۡمٰنِ الرَّحِیۡمِ    نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ    وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.

## ಅಲ್ಲಾಹನ ಉಪದೇಶ

**ಒಳಿತಿನ ಕಡೆಗೆ ಕರೆಯುವ, ಒಳಿತನ್ನು ಉಪದೇಶಿಸಿ ಕೆಡುಕನ್ನು ವಿರೋಧಿಸುವ ಒಂದು ಪಂಗಡ ನಿಮ್ಮಲ್ಲಿ ಇರಬೇಕಾಗಿದೆ.**

وَلۡتَکُنۡ مِّنۡکُمۡ اُمَّۃٌ یَّدۡعُوۡنَ اِلَی الۡخَیۡرِ وَیَاۡمُرُوۡنَ بِالۡمَعۡرُوۡفِ وَیَنۡہَوۡنَ عَنِ الۡمُنۡکَرِ ؕ وَاُولٰٓئِکَ ہُمُ الۡمُفۡلِحُوۡنَ ﴿۱۰۵﴾ (ಅಲಿ ಇಮ್ರಾನ್ : 105)

ಅಂದರೆ: ಒಳಿತಿನ ಕಡೆಗೆ ಕರೆಯುವ, ಒಳಿತನ್ನು ಉಪದೇಶಿಸಿ ಕೆಡುಕನ್ನು ವಿರೋಧಿಸುವ ಒಂದು ಪಂಗಡ ನಿಮ್ಮಲ್ಲಿ ಇರಬೇಕಾಗಿದೆ. ಅವರೇ ವಿಜಯಶಾಲಿಗಳಾಗುವರು.

**ಸಂಪುಟ: 07, ಸಂಚಿಕೆ: 37-38, 10-17 ಸೆಪ್ಟೆಂಬರ್ 2026, 10-17 ತಬೂಕ್ 1405 ಹಿಜರಿ ಶಮ್ಸಿ, 27 ರಬೀಉಲ್ ಅವ್ವಲ್, 05 ರಬಿಉಸ್ಸಾನಿ 1448 ಹಿಜರಿ ಖಮರಿ. (www.akhbarbadr.in)**



## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಯಾರು ಸನ್ಮಾರ್ಗದ ಕಡೆಗೆ ಜನರನ್ನು ಆಹ್ವಾನಿಸುತ್ತಾರೋ, ಅವರಿಗೆ ಆ ಸನ್ಮಾರ್ಗವನ್ನು ಅನುಸರಿಸಿದವರ ಪ್ರತಿಫಲದಷ್ಟೇ ಪ್ರತಿಫಲ ದೊರೆಯುತ್ತದೆ**

عَنۡ حُذَیۡفَۃَ بۡنِ الۡیَمَانِ، عَنِ النَّبِیِّ صَلَّی اللّٰہُ عَلَیۡہِ وَسَلَّمَ قَالَ وَالَّذِیۡ نَفۡسِیۡ بِیَدِہٖ لَتَاۡمُرُنَّ بِالۡمَعۡرُوۡفِ، وَلَتَنۡہَوُنَّ عَنِ الۡمُنۡکَرِ، اَوۡ لَیُوۡشِکَنَّ اللّٰہُ اَنۡ یَّبۡعَثَ عَلَیۡکُمۡ عِقَابًا مِّنۡہُ، ثُمَّ تَدۡعُوۡنَہٗ فَلَا یُسۡتَجَابُ لَکُمۡ۔

ಹಝ್ರತ್ ಹುಝೈಫಾ (ರ.ಅ) ಅವರು ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅವರು ಹೀಗೆ ಹೇಳಿದರು: "ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಆ ಪರಮಾತ್ಮನ ಮೇಲೆ ಆಣೆ! ನೀವು ಖಂಡಿತವಾಗಿಯೂ ಒಳಿತನ್ನು ಮಾಡಲು ಆಜ್ಞಾಪಿಸುತ್ತಿರಬೇಕು ಮತ್ತು ಕೆಡುಕಿನಿಂದ ತಡೆಯುತ್ತಿರಬೇಕು. ಇಲ್ಲವಾದಲ್ಲಿ, ಅಲ್ಲಾಹನು ತನ್ನ ಕಡೆಯಿಂದ ನಿಮ್ಮ ಮೇಲೆ ಕಠಿಣ ಶಿಕ್ಷೆಯನ್ನು ವಿಧಿಸುವುದು ಸನ್ನಿಹಿತವಾಗಿದೆ. ಆಗ ನೀವು ಅವನಲ್ಲಿ ಪ್ರಾರ್ಥಿಸುವಿರಿ; ಆದರೆ ನಿಮ್ಮ ಪ್ರಾರ್ಥನೆಗಳು ಸ್ವೀಕರಿಸಲ್ಪಡಲಾರವು." **(ತಿಮಿರ್ಧೀ ಕಿತಾಬುಲ್ ಫಿತ್ನ್ ಬಾಬ್ ಅಲ್‌ಅಮ್ರು ಬಿಲ್ ಮಾರುಫ಼್ ವನ್ನಹಿ ಅನಿಲ್ ಮುನ್‌ಕರ್ 2169)**

عَنۡ اَبِیۡ ہُرَیۡرَۃَ، اَنَّ رَسُوۡلَ اللّٰہِ صَلَّی اللّٰہُ عَلَیۡہِ وَسَلَّمَ، قَالَ مَنۡ دَعَا اِلٰی ہُدًی کَانَ لَہٗ مِنَ الۡاَجۡرِ مِثۡلُ اُجُوۡرِ مَنۡ تَبِعَہٗ، لَا یَنۡقُصُ ذٰلِکَ مِنۡ اُجُوۡرِہِمۡ شَیۡئًا، وَمَنۡ دَعَا اِلٰی ضَلَالَۃٍ کَانَ عَلَیۡہِ مِنَ الۡاِثۡمِ مِثۡلُ آثَامِ مَنۡ تَبِعَہٗ، لَا یَنۡقُصُ ذٰلِکَ مِنۡ آثَامِہِمۡ شَیۡئًا"۔ (صحیح مسلم کتاب العلم/حدیث:6804)

ಹಝ್ರತ್ ಅಬೂ ಹುರೈರಾ(ರ.ಅ) ಅವರು ವರದಿ ಮಾಡುತ್ತಾರೆ: ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಹೀಗೆ ಹೇಳಿದರು: "ಯಾರು ಸನ್ಮಾರ್ಗದ ಕಡೆಗೆ ಜನರನ್ನು ಆಹ್ವಾನಿಸುತ್ತಾರೋ, ಅವರಿಗೆ ಆ ಸನ್ಮಾರ್ಗವನ್ನು ಅನುಸರಿಸಿದವರ ಪ್ರತಿಫಲದಷ್ಟೇ ಪ್ರತಿಫಲ ದೊರೆಯುತ್ತದೆ. ಇದರಿಂದ ಸನ್ಮಾರ್ಗವನ್ನು ಅನುಸರಿಸಿದವರ ಪ್ರತಿಫಲದಲ್ಲಿ ಯಾವುದೇ ಕೊರತೆಯಾಗುವುದಿಲ್ಲ. ಅದೇ ರೀತಿ, ಯಾರು ಜನರನ್ನು ದಾರಿತಪ್ಪುವಿಕೆಯ ಕಡೆಗೆ ಆಹ್ವಾನಿಸುತ್ತಾರೋ, ಅವರಿಗೆ ಅವರನ್ನು ಅನುಸರಿಸಿದವರ ಪಾಪದಷ್ಟೇ ಪಾಪವುಂಟಾಗುತ್ತದೆ. ಇದರಿಂದ ಅವರನ್ನು ಅನುಸರಿಸಿದವರ ಪಾಪಗಳಲ್ಲಿ ಯಾವುದೇ ಕಡಿತವಾಗುವುದಿಲ್ಲ."



## ಹಝ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ

**ಸಾಧ್ಯವಾದಷ್ಟು ಎಲ್ಲ ಸ್ನೇಹಿತರೂ ಕೇವಲ ಅಲ್ಲಾಹನಿಗಾಗಿ ದೈವಿಕ ಮಾತುಗಳನ್ನು ಆಲಿಸುವುದಕ್ಕಾಗಿ ಮತ್ತು ದುಆದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಜಲ್ಸದಲ್ಲಿ ಭಾಗವಹಿಸಬೇಕು**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಈ ಜಲ್ಸಾವು ಪ್ರಾಪಂಚಿಕ ಮೇಳಗಳಂತೆ ಕಡ್ಡಾಯವಾಗಿ ನಡೆಸಲೇಬೇಕಾದಂತಹ ಕಾರ್ಯಕ್ರಮವಲ್ಲ. ಬದಲಾಗಿ, ಇದರ ಆಯೋಜನೆಯು ಸದುದ್ದೇಶದ ಶುದ್ಧತೆ ಮತ್ತು ಉತ್ತಮ ಫಲಿತಾಂಶಗಳ ಮೇಲೆ ಅವಲಂಬಿತವಾಗಿದೆ." (ಮಜ್‌ಮುಅ ಇಶ್ತಿಹಾರಾತ್, ಸಂಪುಟ-1ವ, ಪುಟ-440)

ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಕಡೆ ಹೇಳುತ್ತಾರೆ:

"ಸಾಧ್ಯವಾದಷ್ಟು ಎಲ್ಲ ಸ್ನೇಹಿತರೂ ಕೇವಲ ಅಲ್ಲಾಹನಿಗಾಗಿ ದೈವಿಕ ಮಾತುಗಳನ್ನು ಆಲಿಸುವುದಕ್ಕಾಗಿ ಮತ್ತು ದುಆದಲ್ಲಿ ಪಾಲ್ಗೊಳ್ಳುವುದಕ್ಕಾಗಿ ನಿಗದಿತ ದಿನಾಂಕದಂದು ಇಲ್ಲಿಗೆ ಆಗಮಿಸಬೇಕು. ಈ ಜಲ್ಸಾದಲ್ಲಿ ಈಮಾನ್, ಯಕೀನ್ ಮತ್ತು ಮಾರಿಫತ್ (ಆಧ್ಯಾತ್ಮಿಕ ಜ್ಞಾನ)ವನ್ನು ವೃದ್ಧಿಪಡಿಸಲು ಅಗತ್ಯವಾದ ಹಕಾಯಿಕ್ (ಸತ್ಯಾಂಶಗಳು) ಮತ್ತು ಮಆರಿಫ್ (ಆಧ್ಯಾತ್ಮಿಕ ಜ್ಞಾನ)ಗಳನ್ನು ವಿವರಿಸುವ ಕಾರ್ಯ ನಡೆಯಲಿದೆ. ಇದಲ್ಲದೆ, ಈ ಸ್ನೇಹಿತರಿಗಾಗಿ ವಿಶೇಷ ದುಆಗಳು ಮತ್ತು ವಿಶೇಷ ಗಮನವೂ ಇರುತ್ತದೆ. ಸಾಧ್ಯವಾದಷ್ಟು ಅರ್ಹಮುರ್ರಾಹಿಮೀನ್ ಆದ ಅಲ್ಲಾಹನ ಸನ್ನಿಧಿಯಲ್ಲಿ ಈ ಪ್ರಯತ್ನ ಮಾಡಲಾಗುವುದು: ಸರ್ವಶಕ್ತನಾದ ಅಲ್ಲಾಹನು ಅವರನ್ನು ತನ್ನ ಕಡೆಗೆ ಆಕರ್ಷಿಸಲಿ, ಅವರನ್ನು ತನ್ನವರಾಗಿ ಸ್ವೀಕರಿಸಲಿ ಮತ್ತು ಅವರಲ್ಲಿ ಪವಿತ್ರ ಪರಿವರ್ತನೆಯನ್ನು ಉಂಟುಮಾಡಲಿ. ಮತ್ತು ಈ ಜಲ್ಸಾಗಳಲ್ಲಿರುವ ಒಂದು ತಾತ್ಕಾಲಿಕ ಪ್ರಯೋಜನವೆಂದರೆ, ಪ್ರತಿಯೊಂದು ಹೊಸ ವರ್ಷದಲ್ಲಿ ಈ ಜಮಾಅತ್‌ಗೆ ಎಷ್ಟು ಹೊಸ ಸಹೋದರರು ಸೇರ್ಪಡೆಯಾಗುತ್ತಾರೋ, ಅವರು ನಿಗದಿತ ದಿನಾಂಕದಂದು ಇಲ್ಲಿಗೆ ಆಗಮಿಸಿ ತಮ್ಮ ಹಿಂದಿನ ಸಹೋದರರನ್ನು ಭೇಟಿಯಾಗುವರು. ಪರಸ್ಪರ ಪರಿಚಯ ಬೆಳೆದು, ಒಬ್ಬರೊಂದಿಗೊಬ್ಬರ ಸ್ನೇಹ, ಪ್ರೀತಿ ಮತ್ತು ಆತ್ಮೀಯತೆಯ ಸಂಬಂಧವು ಕ್ರಮೇಣ ಅಭಿವೃದ್ಧಿ ಹೊಂದುತ್ತಾ ಹೋಗುವುದು. ಮತ್ತು ಈ ಆಧ್ಯಾತ್ಮಿಕ ಜಲ್ಸಾದಲ್ಲಿ ಇನ್ನೂ ಅನೇಕ ಆಧ್ಯಾತ್ಮಿಕ ಪ್ರಯೋಜನಗಳು ಮತ್ತು ಲಾಭಗಳಿವೆ. ಇನ್ಶಾ ಅಲ್ಲಾಹ್, ಸರ್ವಶಕ್ತನಾದ ಅಲ್ಲಾಹನ ಕೃಪೆಯಿಂದ ಅವು ಕಾಲಕಾಲಕ್ಕೆ ಪ್ರಕಟವಾಗುತ್ತಲೇ ಇರುತ್ತವೆ." (ಆಸ್ಮಾನೀ ಫೈಸಲಾ, ಪ್ರಕಟಣೆ 30 ಡಿಸೆಂಬರ್ 1891, ರೂಹಾನೀ ಖಝಾಯಿನ್, ಸಂಪುಟ 4, ಪುಟ 351-352)

---------------*****--------------



## ತಫ಼್ಸೀರ್ ಕಬೀರ್‌ನಿಂದ ಉಲ್ಲೇಖ

**ಜಲ್ಸ ಸಾಲಾನವು ಅಲ್ಲಾಹನ ದೃಷ್ಟಾಂತಗಳಲ್ಲಿ (ನಿಶಾನೆಗಳಲ್ಲಿ) ಒಂದಾಗಿದೆ**

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

"ಈ ಜಲ್ಸಾ, ನಾನು ಇದಕ್ಕೂ ಮೊದಲು ಅನೇಕ ಬಾರಿ ವಿವರಿಸಿರುವಂತೆ, ಅಲ್ಲಾಹ್ ತಆಲಾನ ಸೂಚನೆಗಳಲ್ಲಿ (ನಿಶಾನೆಗಳಲ್ಲಿ) ಒಂದಾಗಿದೆ. ಖಾದಿಯಾನ್ ಎಂದರೆ ಒಂದು ಕಾಲದಲ್ಲಿ ಯಾರೂ ಅದರ ಕಡೆಗೆ ಮುಖಮಾಡಿಯೂ ನೋಡದ ಸ್ಥಳವಾಗಿತ್ತು. ಅನೇಕ ಜನರು ಇಂತಹವರಾಗಿದ್ದರು; ಅವರು ಖಾದಿಯಾನ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಹೆಸರು ಕೇಳಿ, ಬಹುದೂರದಿಂದ ಖಾದಿಯಾನ್‌ಗೆ ತಲುಪುವ ಆಸೆಯಿಂದ ಪ್ರಯಾಣ ಆರಂಭಿಸುತ್ತಿದ್ದರು. ಆದರೆ ಬಟಾಲಾ ಅಥವಾ ಅಮೃತಸರ ತಲುಪಿದ ನಂತರವೇ ಹಿಂದಿರುಗುತ್ತಿದ್ದರು. ಏಕೆಂದರೆ ಅವರಿಗೆ 'ಖಾದಿಯಾನ್‌ನಲ್ಲಿ ಬಹಳ ದೊಡ್ಡ ದಜ್ಜಾಲೀ ಫಿತ್ನಾ ಇದೆ' ಎಂದು ಹೇಳಲಾಗುತ್ತಿತ್ತು."

"ಇಂದಿಗೂ ನಮ್ಮ ಜಮಾಅತ್‌ನಲ್ಲಿ ಅನೇಕ ಮಂದಿ ಇಂತಹವರಿದ್ದಾರೆ. ಅವರು ತಮ್ಮ ಕೈಗಳನ್ನು ವಿಷಾದದಿಂದ ಮಸೆಯುತ್ತಾ, 'ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಲ್ಲಿ ನಾವು ಖಾದಿಯಾನ್‌ಗೆ ಏಕೆ

*(ಪುಟ ಸಂಖ್ಯೆ-08 ರಲ್ಲಿ ಮುಂದುವರಿಸಲಾಗಿದೆ)*

**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**



# ಖುತ್‌ಬ ಜುಮುಅ

## ಕೃತಜ್ಞತೆಯ ಕುರಿತು ಹಝ್ರತ್ ಪೈಗಂಬರ್(ಸ)ರ ಉತ್ತಮ ಆದರ್ಶ, ದುಆಗಳು ಮತ್ತು ತಮ್ಮ ಉಮ್ಮತ್ತಿಗೆ ಉಪದೇಶಗಳು ಅದೇ ರೀತಿ ಜಲ್ಸ ಸಾಲಾನ ಯು.ಕೆಯ ಕುರಿತು ದುಆ ಮಾಡುವಂತೆ ಮನವಿ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **17–07–2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಅಲ್ಲಾಹನು ಮನುಷ್ಯನನ್ನು ಸೃಷ್ಟಿಸುವುದಕ್ಕೂ ಮುನ್ನವೇ ಅವನ ಪ್ರಯೋಜನಕ್ಕಾಗಿ ಅಸಂಖ್ಯಾತ ಅನುಗ್ರಹಗಳನ್ನು ಉಂಟುಮಾಡಿದನು. ಅಲ್ಲಾಹನ ಈ ಕೃಪೆ ಮತ್ತು ತನ್ನ ದಾಸರ ಮೇಲಿನ ಈ ಉಪಕಾರವು ಖಂಡಿತವಾಗಿಯೂ ದಾಸನು ಅವನಿಗೆ ಕೃತಜ್ಞನಾಗಿರಬೇಕು ಎಂದು ಆಗ್ರಹಿಸುತ್ತದೆ. 'ಅಲ್ಲಾಹನ ಕೃತಜ್ಞ ದಾಸರಾಗಿರಿ' ಎಂದು ಪ್ರತಿಯೊಬ್ಬ ಪ್ರವಾದಿಯೂ ತಮ್ಮ ಅನುಯಾಯಿಗಳಿಗೆ ಉಪದೇಶಿಸಿದ್ದರು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಕೃತಜ್ಞತೆಯ ಮಾದರಿಯನ್ನು ನಮ್ಮ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ತೋರಿಸಿಕೊಟ್ಟರು. ತಮ್ಮ ಪ್ರತಿಯೊಂದು ಕಾರ್ಯದಲ್ಲೂ ಅವರು ಅಲ್ಲಾಹನಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಿದ್ದರು. ಅವರ ಬಿಕ್ಕಳಿಕೆ, ಅವರ ಕಣ್ಣೀರು ಮತ್ತು ಅಲ್ಲಾಹನ ಸನ್ನಿಧಿಯಲ್ಲಿ ಅತ್ಯಂತ ವಿನಯದಿಂದ ಬೇಡಿಕೊಳ್ಳುವುದನ್ನು ಕಂಡು, 'ಅಲ್ಲಾಹನು ಅವರಿಗೆ ಎಲ್ಲ ರೀತಿಯ ಯಶಸ್ಸುಗಳ ವಾಗ್ದಾನಗಳನ್ನು ಮಾಡಿದ್ದಾನೆ ಮತ್ತು ಅವರಿಗೆ ಯಶಸ್ಸನ್ನು ಕರುಣಿಸುತ್ತಲೂ ಇದ್ದಾನೆ, ಹಾಗಿದ್ದರೂ ಇಷ್ಟೊಂದು ಕಣ್ಣೀರು ಮತ್ತು ಬೇಡುವಿಕೆ ಏತಕ್ಕಾಗಿ?' ಎಂದು ಅವರೊಡನೆ ಕೇಳಲಾದಾಗ, ಅವರು ಹೀಗೆ ಉತ್ತರಿಸಿದ್ದರು: 'ಈ ಅನುಗ್ರಹಗಳಿಗಾಗಿ ನಾನು ಅಲ್ಲಾಹನ ಕೃತಜ್ಞ ದಾಸನಾಗಬಾರದೇ? ಅವನ ಮುಂದೆ ವಿನಯದಿಂದ ತಲೆಬಾಗಿ ಅವನಿಗೆ ಕೃತಜ್ಞತೆ ಸಲ್ಲಿಸಬಾರದೇ?' (ಸಹೀಹ್ ಅಲ್–ಬುಖಾರಿ, ಕಿತಾಬುತ್ತಫ್ಸೀರ್, ಬಾಬು ಕೌಲಿಹೀ 'ಲಿಯಘ್ಫಿರ ಲಕಲ್ಲಾಹು ಮಾದಕ್ಕದಮ ಮಿಂ ಧಂಬಿಕ', ಹದೀಸ್ 4837, ಅನುವಾದಿತ ಆವೃತ್ತಿ, ಸಂಪುಟ 12, ಪುಟ 83)

ಪ್ರತಿಯೊಂದು ಸಂದರ್ಭದಲ್ಲೂ ಅವರು ಅವರ ಕೃತಜ್ಞತೆಯ ಪ್ರಾಯೋಗಿಕ ಮಾದರಿಯನ್ನು ತೋರಿಸಿದಂತೆಯೇ, ಅವರು ಅವರ ಉಮ್ಮತ್‌ಗೂ ಕೃತಜ್ಞರಾಗಿರಲು ಉಪದೇಶಿಸಿದ್ದರು. ಅದರ ವಿಧಾನಗಳನ್ನು ಕಲಿಸಿದ್ದರು. ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಲು ಪ್ರಾರ್ಥನೆಗಳನ್ನು ಕಲಿಸಿದ್ದರು. ಇಂದು ಹಝ್ರತ್ ಪೈಗಂಬರ್(ಸ)ರ ಇದೇ ಮಾದರಿ, ಪ್ರಾರ್ಥನೆಗಳು ಮತ್ತು ಉಪದೇಶಗಳ ಕುರಿತು ನಾನು ಪ್ರಸ್ತಾಪಿಸಲಿದ್ದೇನೆ.

ಒಂದು ವರದಿಯಲ್ಲಿ ಬರುವಂತೆ, ಹಝ್ರತ್ ಅನಸ್(ರ) ವಿವರಿಸುತ್ತಾರೆ, ರಸೂಲುಲ್ಲಾಹ್(ಸ) ಹೀಗೆ ಹೇಳಿದರು: ಸತ್ಯವಿಶ್ವಾಸವು ಎರಡು ಭಾಗಗಳನ್ನು ಹೊಂದಿದೆ, ಅರ್ಧದಷ್ಟು ತಾಳ್ಮೆಯಲ್ಲಿದೆ ಮತ್ತು ಉಳಿದರ್ಧ ಕೃತಜ್ಞತೆಯಲ್ಲಿದೆ. (ಅಲ್–ಜಾಮಿಉ ಲಿಶುಅಬಿಲ್ ಈಮಾನ್, ಸಂಪುಟ 12, ಪುಟ 192–193, ಹದೀಸ್ 9264)

ವಾಸ್ತವದಲ್ಲಿ, ತಾಳ್ಮೆಯು ಕೂಡ ಕೃತಜ್ಞತೆಯ ಒಂದು ಮಗ್ಗುಲನ್ನೇ ಎತ್ತಿ ತೋರಿಸುತ್ತದೆ, ಆದ್ದರಿಂದ ನೋಡಿದರೆ ನೈಜ ಮತ್ತು ಸಂಪೂರ್ಣ ಸತ್ಯವಿಶ್ವಾಸವು ಈ ಕೃತಜ್ಞತೆಯಿಂದಲೇ ಉಂಟಾಗುತ್ತದೆ.

ಹಝ್ರತ್ ಸುಹೈಬ್(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಹೀಗೆ ಹೇಳಿದರು: ಸತ್ಯವಿಶ್ವಾಸಿಯ ವಿಷಯವು ಬಹಳ ವಿಚಿತ್ರವಾಗಿದೆ. ಅವನ ವಿಷಯವು ಸಂಪೂರ್ಣವಾಗಿ ಒಳಿತಾಗಿದೆ ಮತ್ತು ಇದು ಸತ್ಯವಿಶ್ವಾಸಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಇಲ್ಲ. ಅವನಿಗೆ ಏನಾದರೂ ಸಂತೋಷ ಉಂಟಾದರೆ ಅವನು ಕೃತಜ್ಞತೆ ಸಲ್ಲಿಸುತ್ತಾನೆ, ಅದು ಅವನಿಗೆ ಒಳಿತಾಗಿದೆ. ಅವನಿಗೆ ಯಾವುದಾದರೂ ಸಂಕಷ್ಟ ಎದುರಾದರೆ ಅವನು ತಾಳ್ಮೆ ವಹಿಸುತ್ತಾನೆ, ಅದು ಕೂಡ ಅವನಿಗೆ ಒಳಿತಾಗಿದೆ. (ಸಹೀಹ್ ಮುಸ್ಲಿಂ, ಕಿತಾಬುಝ್–ಝುಹ್ದಿ ವರ್ರಖಾಇಕ್, ಬಾಬುಲ್ ಮುಅ್‌ಮಿನ್ ಅಮ್ರುಹೂ ಕುಲ್ಲುಹೂ ಖೈರ್, ಹದೀಸ್ 5304)

ಇದು ಏಕೆ ಒಳಿತಾಗಿದೆ ಎಂದರೆ, ಅಲ್ಲಾಹನು, 'ಇನ್ನಲ್ಲಾಹ ಮಅಸ್ಸಾಬಿರಿನ್' ಅಂದರೆ ಅಲ್ಲಾಹನು ಖಂಡಿತವಾಗಿಯೂ ತಾಳ್ಮೆ ವಹಿಸುವವರೊಂದಿಗಿದ್ದಾನೆ ಎಂದು ಹೇಳಿದ್ದಾನೆ ಮತ್ತು 'ವ ಬಶ್ಶಿರಿಸ್ಸಾಬಿರಿನ್' ಅಂದರೆ ತಾಳ್ಮೆ ವಹಿಸುವವರಿಗೆ ಶುಭಸುದ್ದಿ ನೀಡಿರಿ ಎಂದು ಹೇಳಿದ್ದಾನೆ. ಹಾಗಾಗಿ, ಅಲ್ಲಾಹನು ಯಾರ ಜೊತೆಗಿದ್ದಾನೋ ಮತ್ತು ಯಾರಿಗೆ ಶುಭಸುದ್ದಿ ನೀಡುತ್ತಿದ್ದಾನೋ, ಅವನಿಗೆ ಅದಕ್ಕಿಂತ ದೊಡ್ಡ ಒಳಿತು ಇನ್ನೇನಿದೆ? ಮನುಷ್ಯನು ದೇವನ ಎಲ್ಲ ಅನುಗ್ರಹಗಳಿಗೆ ಕೃತಜ್ಞ ದಾಸನಾದಾಗ ಮಾತ್ರ ಈ ನೈಜ ತಾಳ್ಮೆಯು ಲಭಿಸಲು ಸಾಧ್ಯ.

ಹೀಗೆ ಪೈಗಂಬರ್(ಸ) ಅವರ ಚಿಕ್ಕ ವಾಕ್ಯ ಮತ್ತು ಪದದಲ್ಲೂ ಜ್ಞಾನದ ಭಂಡಾರಗಳಿರುತ್ತವೆ. ಹಝ್ರತ್ ಅಬೂಹುರೈರಾ(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಹೇಳಿದರು: ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ, ಅವನು ದೇವನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ. ಅಲ್ಲಾಹನಿಗೆ ಕೃತಜ್ಞರಾಗಿರುವುದಂತೂ ಇದ್ದೇ ಇದೆ, ಆದರೆ ದಾಸರಿಗೂ ಕೃತಜ್ಞರಾಗಿರಬೇಕು ಎಂದು ನಬಿ(ಸ) ವಿಶೇಷವಾಗಿ ಆದೇಶಿಸಿದ್ದಾರೆ. ಕೃತಜ್ಞತೆಯ ಈ ಭಾವನೆಗಳು ಮತ್ತು ಆಲೋಚನೆಗಳಿದ್ದರೆ ಸಮಾಜವು ಸುಂದರವಾದ ದೃಶ್ಯವನ್ನು ಪ್ರಸ್ತುತಪಡಿಸುತ್ತದೆ ಮತ್ತು ಇದುವೇ ನಬಿ(ಸ) ನಿರ್ಮಿಸಲು ಬಯಸಿದ್ದ ನೈಜ ಇಸ್ಲಾಮಿಕ ಸಮಾಜವಾಗಿದೆ. (ಜಾಮಿಉತ್ತಿರ್ಮಿದಿ, ಅಬ್ವಾಬುಲ್ ಬಿರ್ರಿ ವಸ್ಸಿಲಹ್, ಬಾಬು ಮಾ ಜಾಅ ಫಿಶ್ ಶುಕ್ರಿ ಲಿಮನ್ ಅಹ್ಸನ ಇಲೈಕ್, ಹದೀಸ್ 1954)

ಒಂದು ವರದಿಯಲ್ಲಿ ಬರುವಂತೆ, ಹಝ್ರತ್ ನುಅಮಾನ್ ಬಿನ್ ಬಶೀರ್(ರ)ರಿಂದ ವರದಿಯಾಗಿದೆ, ಪ್ರವಾದಿ(ಸ) ಮಿಂಬರ್ ಮೇಲೆ ನಿಂತು ಹೀಗೆ ಹೇಳಿದರು: ಯಾರು ಸ್ವಲ್ಪದರಲ್ಲಿ ಕೃತಜ್ಞತೆ ಸಲ್ಲಿಸುವುದಿಲ್ಲವೋ, ಅವನು ಹೆಚ್ಚಿನದರಲ್ಲೂ ಕೃತಜ್ಞನಾಗಿರುವುದಿಲ್ಲ ಮತ್ತು ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ, ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ. ಅಲ್ಲಾಹನ ಅನುಗ್ರಹಗಳನ್ನು ಪ್ರಸ್ತಾಪಿಸುವುದು ಕೂಡ ಒಂದು ರೀತಿಯ ಕೃತಜ್ಞತೆಯಾಗಿದೆ ಮತ್ತು ಅದನ್ನು ಪ್ರಸ್ತಾಪಿಸದಿರುವುದು ಕೃತಜ್ಞತಾಗೇಡಿತನವಾಗಿದೆ. ನಬಿ(ಸ) ಹೇಳಿದರು: ಒಗ್ಗಟ್ಟಾಗಿರುವುದು ಕರುಣೆಯಾಗಿದೆ ಮತ್ತು ಒಡಕು ಶಾಪವಾಗಿದೆ. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಮುಸ್ನದುನ್ನುಮಾನ್ ಬಿನ್ ಬಶೀರ್, ಸಂಪುಟ 6, ಪುಟ 297, ಹದೀಸ್ 18640) ಜಮಾಅತ್‌ನೊಂದಿಗೆ ಇರಿ, ಅಲ್ಲಾಹನ ಕೃತಜ್ಞ ದಾಸರಾಗಿರಿ ಮತ್ತು ಒಂದಾಗಿ ಇರಿ, ಆಗ ಮಾತ್ರ ನಿಮಗೆ ಅಲ್ಲಾಹನ ಅನುಗ್ರಹಗಳ ಪಾಲು ಸಿಗುತ್ತದೆ, ನೀವು ಒಡಕು ಉಂಟು ಮಾಡಿದರೆ, ನಿಮ್ಮ ಹೃದಯಗಳು ಒಡೆದಿದ್ದರೆ, ಆಗ ನೀವು ಅಲ್ಲಾಹನ ಕೃಪೆಯ ವಾರಸುದಾರರಾಗಲು ಸಾಧ್ಯವಿಲ್ಲ.

ಅವರು ಎಷ್ಟೊಂದು ಆಳವಾಗಿ ಕೃತಜ್ಞತೆಯ ಬಗ್ಗೆ ಉಪದೇಶಿಸಿದ್ದಾರೆ ಎಂಬುದರ ಕುರಿತು ಒಂದು ವರದಿಯಿದೆ. ಹಝ್ರತ್ ಅನಸ್(ರ) ವಿವರಿಸುತ್ತಾರೆ: ಹಝ್ರತ್ ಪೈಗಂಬರ್(ಸ) ಒಬ್ಬ ವ್ಯಕ್ತಿಯನ್ನು ಭೇಟಿಯಾದಾಗ, ಹೇಗಿದ್ದೀಯಾ? ಎಂದು ಕೇಳುತ್ತಿದ್ದರು. ಆಗ ಅವನು, ಬಹಳ ಚೆನ್ನಾಗಿದ್ದೇನೆ ಮತ್ತು ನಾನು ಅಲ್ಲಾಹನಿಗೆ ಪ್ರಶಂಸೆ ಸಲ್ಲಿಸುತ್ತೇನೆ ಎಂದು ಹೇಳುವಾಗ, 'ಅಲ್ಲಾಹನು ನಿನ್ನನ್ನು ಚೆನ್ನಾಗಿಯೇ ಇರಿಸಲಿ ಎಂದು ನಬಿ(ಸ) ಹೇಳುತ್ತಿದ್ದರು. ಒಮ್ಮೆ ನಬಿ(ಸ) ಆತನನ್ನು ಭೇಟಿಯಾಗಿ ಇದೇ ಪ್ರಶ್ನೆ ಕೇಳಿದಾಗ, ಅದಕ್ಕೆ ಉತ್ತರವಾಗಿ ಆತ, ಹೇಳಿದನು: 'ಬೇಕಾದರೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ, ಆದರೆ ಅಷ್ಟೇನೂ ಚೆನ್ನಾಗಿಲ್ಲ.' ಆಗ ನಬಿ(ಸ) ಮೌನವಾದರು. ಆತ ಹೇಳಿದನು: ಹೇ ದೇವನ ಪ್ರವಾದಿಯೇ, ನೀವು ಕೇಳಿದಾಗ ನಾನು ಉತ್ತರಿಸುತ್ತಿದ್ದೆ ಮತ್ತು ನಾನು ಅಲ್ಲಾಹನಿಗೆ ಪ್ರಶಂಸೆ ಸಲ್ಲಿಸುತ್ತೇನೆ ಎಂದು ಹೇಳಿದಾಗ, ಅಲ್ಲಾಹನು ನಿನ್ನನ್ನು ಚೆನ್ನಾಗಿಯೇ ಇರಿಸಲಿ ಎಂದು ನೀವು ಪ್ರಾರ್ಥಿಸುತ್ತಿದ್ದಿರಿ, ಆದರೆ ಇಂದು ನೀವು ಮೌನವಾಗಿದ್ದೀರಲ್ಲ? ಆಗ ನಬಿ(ಸ) ಹೇಳಿದರು: ನಾನು ನಿನ್ನನ್ನು ಕೇಳಿದಾಗ, ನಾನು ಬಹಳ ಚೆನ್ನಾಗಿದ್ದೇನೆ ಮತ್ತು ನಾನು ಅಲ್ಲಾಹನಿಗೆ ಪ್ರಶಂಸೆ ಸಲ್ಲಿಸುತ್ತೇನೆ ಎಂದು ನೀನು ಹೇಳಿದಾಗ, ಅಲ್ಲಾಹನು ನಿನ್ನನ್ನು ಚೆನ್ನಾಗಿಯೇ ಇರಿಸಲಿ ಮತ್ತು ತನ್ನ ಅನುಗ್ರಹಗಳಿಂದ ಇನ್ನಷ್ಟು ಕರುಣಿಸಲಿ ಎಂದು ನಾನು ನಿನಗಾಗಿ ಪ್ರಾರ್ಥಿಸುತ್ತಿದ್ದೆ. ಆದರೆ ಇಂದು ನೀನು, 'ನಾನು ಕೃತಜ್ಞತೆ ಸಲ್ಲಿಸಿದರೆ' ಎಂದು ಹೇಳಿದ್ದೀಯಾ, ಅಂದರೆ ನೀನು, ನಾನು ಕೃತಜ್ಞತೆ ಸಲ್ಲಿಸಿದರೆ ಸರಿ, ಅಲ್‌ಹಮ್ದುಲಿಲ್ಲಾಹ್; ಇಲ್ಲದಿದ್ದರೆ ನಾನು ಬಹಳ ಚೆನ್ನಾಗಿದ್ದೇನೆ ಎಂದು ಹೇಳುವಷ್ಟು ನನ್ನ ಸ್ಥಿತಿ ಚೆನ್ನಾಗಿಲ್ಲ ಎಂಬ ಸಂದೇಹದಲ್ಲಿದ್ದೀಯಾ. ಹಾಗಾಗಿ ನಾನು ಮೌನವಾದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ನೀನು ಸಂದೇಹದಲ್ಲಿ ಬಿದ್ದಿದ್ದೀಯಾ, ನೀನು ಅಲ್ಲಾಹನ ಬಗ್ಗೆ ತಪ್ಪು ಅಭಿಪ್ರಾಯ

ಹೊಂದಿದ್ದೀಯಾ ಎಂದು ನಬಿ(ಸ) ಹೇಳಿದರು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಮುಸ್ನದು ಅನಸ್ ಬಿನ್ ಮಾಲಿಕ್, ಸಂಪುಟ 4, ಪುಟ 618, ಹದೀಸ್ 13571) ಅಲ್ಲಾಹನಿಗೆ ಕೃತಜ್ಞರಾಗಿರುವ ವಿಷಯದಲ್ಲಿ ಯಾರದ್ದಾದರೂ ಮನಸ್ಸಿನಲ್ಲಿ ಸಣ್ಣದೊಂದು ನಕಾರಾತ್ಮಕ ಆಲೋಚನೆ ಹುಟ್ಟುವುದೂ ಅವರಿಗೆ ಸಹಿಸಲು ಸಾಧ್ಯವಾಗುತ್ತಿರಲಿಲ್ಲ.

ಹಝ್ರ‌ತ್ ಉಸಾಮಾ ಬಿನ್ ಝೈದ್(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಹೇಳಿದರು: ಯಾರಿಗಾದರೂ ಯಾವುದಾದರೂ ಉಪಕಾರ ಲಭಿಸಿದಾಗ, ಅವನು ಅದನ್ನು ಮಾಡಿದವನಿಗೆ **'ಜಝಾಕಲ್ಲಾಹು ಖೈರನ್'** (ಅಲ್ಲಾಹನು ನಿನಗೆ ಉತ್ತಮ ಪ್ರತಿಫಲ ನೀಡಲಿ) ಎಂದು ಹೇಳಿದರೆ, ಅವನು ಹೊಗಳಿಕೆಯ ಹಕ್ಕನ್ನು ಪೂರೈಸಿದನು. (ಜಾಮಿಉತ್ತಿರ್ಮಿದಿ, ಅಬ್ವಾಬುಲ್ ಬಿರ್ರಿ ವಸ್ಸಿಲಹ್, ಬಾಬು ಮಾ ಜಾಅ ಫಿತ್ತನಾ ಬಿಲ್ ಮಅರೂಫ್, ಹದೀಸ್ 2035)

ಅದೇ ರೀತಿ ಹಝ್ರ‌ತ್ ಅಬೂಹುರೈರಾ(ರ)ರಿಂದ ಒಂದು ವರದಿಯಿದೆ: ರಸೂಲುಲ್ಲಾಹ್(ಸ) ಹೇಳಿದರು: ಅಲ್ಲಾಹನು ಯಾವುದಾದರೂ ಸಮುದಾಯಕ್ಕೆ ಒಳಿತು ಮತ್ತು ಸಮೃದ್ಧಿಯನ್ನು ದಯಪಾಲಿಸಲು ಇಚ್ಛಿಸಿದರೆ, ಅವರ ಆಯಸ್ಸನ್ನು ಹೆಚ್ಚಿಸುತ್ತಾನೆ ಮತ್ತು ಅವರಿಗೆ ಕೃತಜ್ಞತೆಯನ್ನು ಇಲ್‌ಹಾಮ್ ಮಾಡುತ್ತಾನೆ, ಅಂದರೆ ಕೃತಜ್ಞತೆ ಸಲ್ಲಿಸುವ ಸೌಭಾಗ್ಯವನ್ನು ಕರುಣಿಸುತ್ತಾನೆ.

(ಕನ್ಝುಲ್ ಉಮ್ಮಾಲ್, ಕಿತಾಬುಲ್ ಅಖ್ಲಾಕ್, ಸಂಪುಟ 2, ಜುಝ್ಉ 3, ಪುಟ 104, ಹದೀಸ್ 6409)

ಹಾಗಾಗಿ, ಸಮುದಾಯದ ಪ್ರಗತಿಗಾಗಿ, ಜಮಾಅತ್‌ನ ಪ್ರಗತಿಗಾಗಿ ಮತ್ತು ವೈಯಕ್ತಿಕ ಪ್ರಗತಿಗಾಗಿಯೂ ಕೃತಜ್ಞತೆ ಅತ್ಯಗತ್ಯವಾಗಿದೆ.

ಅಲ್ಲಾಹನಿಗೆ ಕೃತಜ್ಞರಾಗಿರುವುದು, ಪರಸ್ಪರ ಕೃತಜ್ಞರಾಗಿರುವುದು ಮತ್ತು ಯಾರಿಗಾದರೂ ಯಾವುದಾದರೂ ಸಹಾಯವಾದಾಗ ಆ ವ್ಯಕ್ತಿಗೆ ಕೃತಜ್ಞತೆ ಸಲ್ಲಿಸುವುದು ಅತ್ಯಂತ ಅಗತ್ಯವಾಗಿದೆ ಮತ್ತು ಇದುವೇ ಕೋಮಿನ ಒಗ್ಗಟ್ಟಿಗೆ ಕಾರಣವಾಗುತ್ತದೆ.

ನಂತರ ಕೃತಜ್ಞತೆಯ ಸರಿಯಾದ ಅರಿವನ್ನು ಮೂಡಿಸಲು ಅವರು ನೀಡಿದ ಅತ್ಯುತ್ತಮ ಉಪದೇಶದ ಬಗ್ಗೆ ಒಂದು ವರದಿಯಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ. ಹಝ್ರ‌ತ್ ಆಯಿಶಾ(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಆಗೊಮ್ಮೆ ಈಗೊಮ್ಮೆ ನನ್ನೊಡನೆ, ನಿನ್ನ ಕವಿತೆ ಏನಾಯಿತು? ಯಾವುದಾದರೂ ಕವಿತೆ ಹೇಳು ಎಂದು ಹೇಳುತ್ತಿದ್ದರು. ಹಝ್ರ‌ತ್ ಆಯಿಶಾ(ರ)ರಿಗೆ ಕವಿತೆಗಳು ನೆನಪಿದ್ದವು ಮತ್ತು ಅವರು ಹೇಳುತ್ತಿದ್ದರು. ಆಗ ನಾನು, ಯಾವ ಕವಿತೆ? ನನಗೆ ಬಹಳಷ್ಟು ಕವಿತೆಗಳು ನೆನಪಿವೆ ಎಂದು ಕೇಳಿದೆ. ಕೃತಜ್ಞತೆಯ ಬಗ್ಗೆ ಕವಿತೆ ಹೇಳು ಎಂದು ನಬಿ(ಸ) ಹೇಳಿದರು. ಆಗ ನಾನು, ನನ್ನ ತಾಯಿ–ತಂದೆ ನಿಮ್ಮ ಮೇಲೆ ಫಿದಾ ಆಗಲಿ ಎಂದು ಹೇಳಿ ಹೀಗೊಂದು ಕವಿತೆಯನ್ನು ಹೇಳಿದೆ: 'ಆ ದುರ್ಬಲನ ಆಸರೆಯಾಗು, ಯಾರ ದೌರ್ಬಲ್ಯವು ನಿನಗೆ ಪ್ರತಿಫಲ ನೀಡಲಾರದೋ. ಒಂದು ದಿನ ಅದರ ಫಲಿತಾಂಶಗಳು ಗೋಚರಿಸುವುದನ್ನು ನೀನು ನೋಡುವೆ.' ಕೇವಲ ಪ್ರತಿಫಲಕ್ಕಾಗಿ ಆಸರೆಯಾಗಬೇಡ, ಬದಲಾಗಿ ನಿನಗೆ ಪ್ರತಿಫಲ ನೀಡಲಾರದವನ ಆಸರೆಯಾಗು, ಮತ್ತು ಅದರ ಫಲಿತಾಂಶಗಳು ಗೋಚರಿಸುವುದನ್ನೂ ನೀನು ನೋಡುವೆ. 'ಆ ದುರ್ಬಲನು ಎಂದಿಗಾದರೂ ನಿನಗೆ ಪ್ರತಿಫಲ ನೀಡುವವನು, ಅಥವಾ ನಿನ್ನನ್ನು ಹೊಗಳುವವನು. ನಿನ್ನ ಆ ಉಪಕಾರಕ್ಕಾಗಿ ಯಾರು ನಿನ್ನನ್ನು ಹೊಗಳುತ್ತಾನೋ, ಅವನು ಆ ಉಪಕಾರದ ಪ್ರತಿಫಲವನ್ನು ತೀರಿಸಿದಂತೆಯೇ ಸರಿ.'

ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿ ಕೃತಜ್ಞತೆ ಸಲ್ಲಿಸಿದರೆ, ಅವನು ಉಪಕಾರದ ಪ್ರತಿಫಲವನ್ನು ತೀರಿಸಿದಂತೆಯೇ. 'ನೀನು ಯಾವುದಾದರೂ ಗೌರವಾನ್ವಿತ ವ್ಯಕ್ತಿಯೊಂದಿಗೆ ಸೌಹಾರ್ದತೆಯಿಂದ ವರ್ತಿಸಲು ಬಯಸುವಾಗ, ಅವನ ಹಗ್ಗವು ದುರ್ಬಲವಾಗಿರುವುದನ್ನು ನೀನು ಕಾಣಲಾರೆ.'

ಸೌಹಾರ್ದತೆಯಿಂದ ವರ್ತಿಸಿದರೆ, ನೀನು ಯಾವುದೋ ದುರ್ಬಲ ಹಗ್ಗವನ್ನು ಹಿಡಿದಿದ್ದೀಯಾ ಎಂದರ್ಥವಲ್ಲ, ಬದಲಾಗಿ ಅದು ಬಲವಾದ ಹಗ್ಗವಾಗಿದೆ, ಏಕೆಂದರೆ ಅಲ್ಲಾಹನು ಅದರ ಪ್ರತಿಫಲವನ್ನು ನೀಡುತ್ತಾನೆ.

ಹಝ್ರ‌ತ್ ಆಯಿಶಾ(ರ) ಹೇಳುತ್ತಾರೆ: ನಾನು ಈ ಕವಿತೆಗಳನ್ನು ಹೇಳಿದಾಗ ನಬಿ(ಸ) ಹೇಳಿದರು: ಹೇ ಆಯಿಶಾ, ಇದು ಸಂಪೂರ್ಣವಾಗಿ ಸರಿಯಾಗಿದೆ. ಜಿಬ್ರೀಲ್ ನನಗೆ ತಿಳಿಸಿದನು: ಅಲ್ಲಾಹನು ಪುನರುತ್ಥಾನದ ದಿನದಂದು ಸೃಷ್ಟಿಗಳನ್ನು ಎಬ್ಬಿಸುವಾಗ, ತನ್ನ ಓರ್ವ ದಾಸನೊಡನೆ, ನನ್ನ ಓರ್ವ ದಾಸನು ನಿನ್ನ ಮೇಲೆ ಉಪಕಾರ ಮಾಡಿದ್ದನಲ್ಲ, ನೀನು ಅವನಿಗೆ ಕೃತಜ್ಞತೆ ಸಲ್ಲಿಸಿದೆಯಾ? ಎಂದು ಕೇಳುತ್ತಾನೆ. ಆಗ ಆತ, ಹೇ ನನ್ನ ಪ್ರಭೂ, ಇದು ನಿನ್ನ ಕಡೆಯಿಂದಲೇ ಆದ ಉಪಕಾರವೆಂದು ನನಗೆ ತಿಳಿದಿತ್ತು, ಹಾಗಾಗಿ ನಾನು ನಿನಗೇ ಕೃತಜ್ಞತೆ ಸಲ್ಲಿಸಿದೆ, ಆ ದಾಸನಿಗಲ್ಲ. ಆಗ ಅಲ್ಲಾಹನು, ಯಾರ ಮೂಲಕ ನಾನು ನಿನ್ನ ಮೇಲೆ ಉಪಕಾರ ಮಾಡಿದೆನೋ, ಅವನಿಗೆ ನೀನು ಕೃತಜ್ಞತೆ ಸಲ್ಲಿಸದಿದ್ದರೆ, ನೀನು ನನಗೂ ಕೃತಜ್ಞತೆ ಸಲ್ಲಿಸಿದಂತಲ್ಲ ಎಂದು ಹೇಳುತ್ತಾನೆ. (ಕನ್ಝುಲ್ ಉಮ್ಮಾಲ್, ಕಿತಾಬುಲ್ ಅಖ್ಲಾಕ್, ಸಂಪುಟ 2, ಜುಝ್ಉ 3, ಪುಟ 297, ಹದೀಸ್ 8621)

ಸುಂದರ ಸಮಾಜವನ್ನು ನಿರ್ಮಿಸಲು ಇದು ಎಂತಹ ಸುಂದರವಾದ ಕಾರ್ಯವಾಗಿದೆ!

ನಂತರ ಕೃತಜ್ಞತೆಯ ಪ್ರಾರ್ಥನೆಯನ್ನು ಕಲಿಸುತ್ತಾ ಅವರು ಹೇಳುತ್ತಾರೆ: ಹಝ್ರ‌ತ್ ಅಬ್ದುಲ್ಲಾ ಬಿನ್ ಘನಾಮ್ ಬಿಯಾಝಿ(ರ)ರಿಂದ ವರದಿಯಾಗಿದೆ: ರಸೂಲುಲ್ಲಾಹ್(ಸ) ಹೇಳಿದರು: ಯಾರು ಬೆಳಿಗ್ಗೆ ಎದ್ದು ಹೀಗೆ ಪ್ರಾರ್ಥಿಸುತ್ತಾನೋ, ಅವನು ತನ್ನ ಆ ದಿನದ ಕೃತಜ್ಞತೆಯನ್ನು ಸಲ್ಲಿಸಿದನು. ಅದು ಹೀಗೆ: 'ಹೇ ಅಲ್ಲಾಹ್, ನನ್ನೊಂದಿಗೆ ಬೆಳಗನ್ನು ಕಂಡ ಯಾವೆಲ್ಲ ಅನುಗ್ರಹಗಳಿವೆಯೋ ಅವೆಲ್ಲವೂ ನಿನ್ನ ಕಡೆಯಿಂದಲೇ ಆಗಿವೆ. ನೀನು ಏಕನಾಗಿದ್ದೀಯಾ. ನಿನಗೆ ಯಾರೂ ಪಾಲುದಾರರಿಲ್ಲ. ಹಾಗಾಗಿ ಎಲ್ಲ ಪ್ರಶಂಸೆಗಳೂ ನಿನಗೆ ಸೇರಿವೆ ಮತ್ತು ಎಲ್ಲ ಕೃತಜ್ಞತೆಗಳೂ ನಿನಗೆ ಸೇರಿವೆ' ಮತ್ತು ಯಾರು ಸಂಜೆಯ ಸಮಯದಲ್ಲಿ ಹೀಗೆಯೇ ಹೇಳುತ್ತಾನೋ, ಅವನು ತನ್ನ ಆ ರಾತ್ರಿಯ ಕೃತಜ್ಞತೆಯನ್ನು ಸಲ್ಲಿಸಿದನು. (ಸುನನ್ ಅಬೂ ದಾವೂದ್, ಕಿತಾಬುಲ್ ಅದಬ್, ಬಾಬು ಮಾ ಯಕೂಲು ಇಝಾ ಅಸ್ಬಹ, ಹದೀಸ್ 5073)

ಅದೇ ರೀತಿ ಒಂದು ವರದಿಯಿದೆ. ಹಝ್ರ‌ತ್ ಮುಆಝ್ ಬಿನ್ ಜಬಲ್(ರ)ರಿಂದ ವರದಿಯಾಗಿದೆ, ರಸೂಲುಲ್ಲಾಹ್(ಸ) ಅವರ ಕೈ ಹಿಡಿದು ಹೇಳಿದರು: ಹೇ ಮುಆಝ್, ದೇವನಾಣೆ, ನಾನು ಖಂಡಿತವಾಗಿಯೂ ನಿನ್ನನ್ನು ಪ್ರೀತಿಸುತ್ತೇನೆ. ನಂತರ ಹೇಳಿದರು: ಹೇ ಮುಆಝ್, ನಾನು ನಿನಗೆ ತಾಕೀತು ಮಾಡುತ್ತೇನೆ, ನೀನು ಪ್ರತಿಯೊಂದು ನಮಾಝಿನ ನಂತರ ಇದನ್ನು ಹೇಳುವುದನ್ನು ಎಂದಿಗೂ ಬಿಡಬೇಡ:

'ಅಲ್ಲಾಹುಮ್ಮ ಅಇನ್ನೀ ಅಲಾ ಝಿಕ್ರಿಕ ವ ಶುಕ್ರಿಕ ವ ಹುಸ್ನಿ ಇಬಾದತಿಕ್.

ಅಂದರೆ, ಹೇ ಅಲ್ಲಾಹ್, ನಿನ್ನ ಸ್ಮರಣೆಗಾಗಿ, ನಿನ್ನ ಕೃತಜ್ಞತೆಗಾಗಿ ಮತ್ತು ನಿನ್ನ ಆರಾಧನೆಯ ಸೌಂದರ್ಯಕ್ಕಾಗಿ ನನಗೆ ಸಹಾಯ ಮಾಡು. (ಸುನನ್ ಅಬೂ ದಾವೂದ್, ಕಿತಾಬುಲ್ ವಿತ್ರ್, ಬಾಬು ಫಿಲ್ ಇಸ್ತಿಗ್ಫಾರ್, ಹದೀಸ್ 1522)

ನಂತರ ಒಂದು ವರದಿಯಲ್ಲಿದೆ. ಅಬೂ ಅಲಿ ಬಿನ್ ಶಖೀರ್(ರ) ಬನೂ ಹನ್‌ಜ಼ಲಾದ ಓರ್ವ ವ್ಯಕ್ತಿಯಿಂದ ವರದಿ ಮಾಡಿದ್ದಾರೆ, ಆತ ಹೇಳಿದನು: ನಾನು ಹಝ್ರ‌ತ್ ಶದ್ದಾದ್ ಬಿನ್ ಔಸ್(ರ)ರೊಂದಿಗೆ ಪ್ರಯಾಣದಲ್ಲಿದ್ದೆ. ಅವರು ಹೇಳಿದರು, ರಸೂಲುಲ್ಲಾಹ್(ಸ) ನಮಗೆ ಕಲಿಸಿಕೊಟ್ಟದ್ದನ್ನು ನಾನು ನಿಮಗೆ ಕಲಿಸಿಕೊಡಲೇ? ನೀನು ಹೀಗೆ ಪ್ರಾರ್ಥಿಸು: 'ಹೇ ಅಲ್ಲಾಹ್, ನಾನು ಪ್ರತಿಯೊಂದು ಕಾರ್ಯದಲ್ಲೂ ನಿನ್ನಿಂದ ಸ್ಥಿರತೆಯನ್ನು ಬೇಡುತ್ತೇನೆ ಮತ್ತು ನಿನ್ನಿಂದ ಮಾರ್ಗದರ್ಶನದ ದೃಢತೆಯನ್ನು ಬೇಡುತ್ತೇನೆ, ಮತ್ತು ನಿನ್ನಿಂದ ನಿನ್ನ ಅನುಗ್ರಹದ ಕೃತಜ್ಞತೆಯನ್ನು ಬೇಡುತ್ತೇನೆ, ಮತ್ತು ನಿನ್ನ ಆರಾಧನೆಯ ಸೌಂದರ್ಯವನ್ನು ಹಾಗೂ ನಿನ್ನೊಡನೆ ಸತ್ಯ ನುಡಿಯುವ ನಾಲಿಗೆಯನ್ನು ಬೇಡುತ್ತೇನೆ, ಮತ್ತು ಪರಿಶುದ್ಧ ಹೃದಯದೊಂದಿಗೆ ನಿನ್ನಲ್ಲಿ ಆಶ್ರಯ ಬೇಡುತ್ತೇನೆ, ನಿನಗೆ ತಿಳಿದಿರುವ ಕೆಡುಕಿನಿಂದ (ಆಶ್ರಯ ಬೇಡುತ್ತೇನೆ), ಮತ್ತು ನಿನಗೆ ತಿಳಿದಿರುವ ಒಳಿತನ್ನು ಬೇಡುತ್ತೇನೆ, ನಿನ್ನಿಂದ ಕ್ಷಮೆಯನ್ನು ಯಾಚಿಸುತ್ತೇನೆ, ನಿನಗೆ ತಿಳಿದಿರುವ ವಿಷಯಗಳಿಂದಲೂ ಕ್ಷಮೆಯನ್ನು ಯಾಚಿಸುತ್ತೇನೆ.' ಅಂದರೆ, ಅಲ್ಲಾಹನಿಂದಲೂ ಮತ್ತು ಪ್ರಪಂಚದ ಪ್ರತಿಯೊಬ್ಬ ವ್ಯಕ್ತಿಯಿಂದಲೂ, ಮನುಷ್ಯನಿಗೆ ಪ್ರಯೋಜನ ತರಬಲ್ಲ ಪ್ರತಿಯೊಂದು ವಿಷಯದಿಂದಲೂ ಕ್ಷಮೆಯನ್ನು ಯಾಚಿಸುತ್ತೇನೆ. ನಿಸ್ಸಂದೇಹವಾಗಿ, ನೀನೇ ಅಗೋಚರ ವಿಷಯಗಳ ಜ್ಞಾನವನ್ನು ಹೊಂದಿರುವವನು, ಏಕೆಂದರೆ ಯಾವುದು ಪ್ರಯೋಜನಕಾರಿ ಮತ್ತು ಯಾವುದು ಅಲ್ಲ ಎಂಬುದು ಅಲ್ಲಾಹನಿಗೆ ಮಾತ್ರ ತಿಳಿದಿದೆ. (ಜಾಮಿಉತ್ತಿರ್ಮಿದಿ, ಅಬ್ವಾಬುದ್ದಅವಾತ್, ಹದೀಸ್ 3407)

ಹಾಗಾಗಿ ಅಲ್ಲಾಹನೊಡನೆ ಈ ಪ್ರಾರ್ಥನೆ ಮಾಡಬೇಕು: ಹೇ ಅಲ್ಲಾಹ್, ನೀನು ನನ್ನ ಮೇಲೆ ಪ್ರತಿಯೊಂದು ವಿಷಯದಲ್ಲೂ ಕೃಪೆ ತೋರು, ಮತ್ತು ನಿನ್ನ ಸೃಷ್ಟಿಯಾಗಿರುವ ಹಾಗೂ ನನಗೆ ಪ್ರಯೋಜನಕಾರಿಯಾಗಿರುವ ಪ್ರತಿಯೊಂದು ವಿಷಯದಲ್ಲೂ ನನಗಾಗಿ ಒಳಿತನ್ನಿಡು.

ಮತ್ತೊಂದು ದಿನ ಹಝ್ರ‌ತ್ ಪೈಗಂಬರ್(ಸ) ಒಂದು ಪ್ರಾರ್ಥನೆಯನ್ನು ಹೀಗೆ ಕಲಿಸಿಕೊಟ್ಟರು: ಹಝ್ರ‌ತ್ ಅಬೂ ಸಯೀದ್(ರ)ರಿಂದ ವರದಿಯಾಗಿದೆ, ಒಬ್ಬ ವ್ಯಕ್ತಿ ಹೇಳಿದನು: ಯಾ ರಸೂಲಲ್ಲಾಹ್(ಸ), ನಾನು ನಮಾಝಿನಲ್ಲಿ ಮಾಡಲು ಯಾವ ಪ್ರಾರ್ಥನೆ ಅತ್ಯಂತ ಉತ್ತಮವಾಗಿದೆ? ಆಗ ನಬಿ(ಸ) ಹೇಳಿದರು: ನೀನು ಹೀಗೆ ಹೇಳು:

**'ಅಲ್ಲಾಹುಮ್ಮ ಲಕಲ್ ಹಮ್ದು ಕುಲ್ಲುಹೂ ವ ಲಕಶ್ಶುಕ್ರು ಕುಲ್ಲುಹೂ ವ ಲಕಲ್ ಮುಲ್ಕು ಕುಲ್ಲುಹೂ ವ ಲಕಲ್ ಖಲ್ಕು ಕುಲ್ಲುಹೂ ವ ಇಲೈಕ ಯುರ್‌ಜಉಲ್ ಅಮ್ರು ಕುಲ್ಲುಹೂ ನಸ್‌ಅಲುಕ ಮಿನಲ್ ಖೈರಿ ವ ನಊಝುಬಿಕ ಮಿನಶ್ಶರಿ ಕುಲ್ಲಿಹೀ.'**

ಅಂದರೆ, ಹೇ ಅಲ್ಲಾಹ್, ಎಲ್ಲ ಪ್ರಶಂಸೆಗಳೂ ನಿನಗೇ ಸೇರಿವೆ, ಎಲ್ಲ ಕೃತಜ್ಞತೆಗಳೂ ನಿನಗೇ ಸೇರಿವೆ, ಎಲ್ಲ ಸಾಮ್ರಾಜ್ಯವು ನಿನಗೇ ಸೇರಿದೆ, ಎಲ್ಲ

ಸೃಷ್ಟಿಯೂ ನಿನ್ನದಾಗಿದೆ, ಪ್ರತಿಯೊಂದು ವಿಷಯವೂ ನಿನ್ನ ಕಡೆಗೇ ಮರಳುತ್ತದೆ, ನಾವು ನಿನ್ನಿಂದ ಪ್ರತಿಯೊಂದು ವಿಧದ ಒಳಿತನ್ನು ಬೇಡುತ್ತೇವೆ ಮತ್ತು ಪ್ರತಿಯೊಂದು ರೀತಿಯ ಕೆಡುಕಿನಿಂದ ನಿನ್ನಲ್ಲಿ ಆಶ್ರಯ ಬೇಡುತ್ತೇವೆ.

(ಜಮಅಲ್ ಜವಾಮಿ, ಸಂಪುಟ 15, ಪುಟ 571572, ಹದೀಸ್ 15222)

ಸ್ವತಃ ಹಝ್ರತ್ ಪೈಗಂಬರ್(ಸ)ರ ಪ್ರಾರ್ಥನೆಯ ಉಲ್ಲೇಖವು ಒಂದು ವರದಿಯಲ್ಲಿ ಹೀಗೆ ಸಿಗುತ್ತದೆ: ಹಝ್ರತ್ ಇಬ್ನು ಅಬ್ಬಾಸ್(ರ)ರಿಂದ ವರದಿಯಾಗಿದೆ, ನಬಿ(ಸ) ತಮ್ಮ ಪ್ರಾರ್ಥನೆಯಲ್ಲಿ ಹೀಗೆ ಹೇಳುತ್ತಿದ್ದರು, ಅದರ ಅನುವಾದ ಹೀಗಿದೆ: ಹೇ ನನ್ನ ಪ್ರಭೂ, ನನಗೆ ಸಹಾಯ ಮಾಡು ಮತ್ತು ನನ್ನ ವಿರುದ್ಧವಾಗಿ ಯಾರಿಗೂ ಸಹಾಯ ಮಾಡಬೇಡ. ನನ್ನನ್ನು ಬೆಂಬಲಿಸು ಮತ್ತು ನನ್ನ ವಿರುದ್ಧ ಯಾರಿಗೂ ಬೆಂಬಲ ನೀಡಬೇಡ. ನನಗಾಗಿ ತಂತ್ರ ರೂಪಿಸು ಮತ್ತು ನನ್ನ ವಿರುದ್ಧ ತಂತ್ರ ಮಾಡಬೇಡ. ನನಗೆ ಮಾರ್ಗದರ್ಶನ ನೀಡು ಮತ್ತು ನನ್ನ ಮಾರ್ಗದರ್ಶನವನ್ನು ನನಗಾಗಿ ಸುಲಭಗೊಳಿಸು. ನನ್ನ ಮೇಲೆ ದೌರ್ಜನ್ಯವೆಸಗಿದವರ ವಿರುದ್ಧ ನನಗೆ ಸಹಾಯ ಮಾಡು. ಹೇ ಅಲ್ಲಾಹ್, ನನಗೆ ನಿನ್ನ ಕೃತಜ್ಞತೆ ಸಲ್ಲಿಸುವವನಾಗಿ, ನಿನ್ನ ಸ್ಮರಣೆ ಮಾಡುವವನನ್ನಾಗಿ, ನಿನ್ನನ್ನು ಭಯಪಡುವವನನ್ನಾಗಿ, ನಿನ್ನ ವಿಧೇಯನನ್ನಾಗಿ, ನಿನಗೆ ಅತಿ ಹೆಚ್ಚು ವಿಧೇಯನನ್ನಾಗಿ, ನಿನ್ನ ಕಡೆಗೆ ಅತಿ ಹೆಚ್ಚು ಬಾಗುವವನನ್ನಾಗಿ ಮಾಡು. ಹೇ ನನ್ನ ಪ್ರಭೂ, ನನ್ನ ಪಶ್ಚಾತ್ತಾಪವನ್ನು ಸ್ವೀಕರಿಸು ಮತ್ತು ನನ್ನ ತಪ್ಪುಗಳನ್ನು ತೊಳೆದುಹಾಕು, ನನ್ನ ಪ್ರಾರ್ಥನೆಯನ್ನು ಆಲಿಸು, ಮತ್ತು ನನ್ನ ಸಾಕ್ಷ್ಯವನ್ನು ಬಲಪಡಿಸು, ನನ್ನ ಹೃದಯಕ್ಕೆ ಮಾರ್ಗದರ್ಶನ ನೀಡು, ನನ್ನ ನಾಲಿಗೆಯನ್ನು ನೇರಗೊಳಿಸು, ನನ್ನ ಹೃದಯದಿಂದ ಹಗೆಯನ್ನು ದೂರಮಾಡು.

(ಸುನನ್ ಅಬೂ ದಾವೂದ್, ಕಿತಾಬುಲ್ ವಿತ್ರ್, ಬಾಬು ಮಾ ಯಕೂಲುರ್ರಜುಲು ಇಝಾ ಸಲ್ಲಮ್, ಹದೀಸ್-1510)

ಈಗ ನೋಡಿ, ಅವರ ಎದೆ, ಹೃದಯ, ಪ್ರತಿಯೊಂದೂ ಪರಿಶುದ್ಧ ಮತ್ತು ನಿರ್ಮಲವಾಗಿತ್ತು, ಅವರು ಸಂಪೂರ್ಣವಾಗಿ ಅಲ್ಲಾಹನ ಕಡೆಗೆ ಬಾಗಿದ್ದರು.

ಅವರು ಈ ಪ್ರಾರ್ಥನೆಯನ್ನು ತಮಗಾಗಿ ಮಾಡುತ್ತಿದ್ದರೂ, ವಾಸ್ತವದಲ್ಲಿ ಈ ಪ್ರಾರ್ಥನೆಯನ್ನು ಅವರು ನಮಗಾಗಿ ಕಲಿಸಿಕೊಟ್ಟಿದ್ದಾರೆ. ನನ್ನ ಪ್ರತಿಯೊಬ್ಬ ಅನುಯಾಯಿಯೂ ತನ್ನ ಹೃದಯವನ್ನು ಪರಿಶುದ್ಧವಾಗಿಡಲು ಈ ರೀತಿ ಪ್ರಾರ್ಥಿಸಬೇಕು ಮತ್ತು ಅಲ್ಲಾಹನ ಕೃಪೆಯನ್ನು ಬೇಡಬೇಕು.

ಹಝ್ರತ್ ಅಬೂಹುರೈರಾ(ರ) ವಿವರಿಸುತ್ತಾರೆ: ಒಂದು ಪ್ರಾರ್ಥನೆಯಿದೆ, ನಾನು ಅದನ್ನು ರಸೂಲುಲ್ಲಾಹ್(ಸ)ರಿಂದ ಕಲಿತಿದ್ದೇನೆ, ನಾನು ಅದನ್ನು ಎಂದಿಗೂ ಬಿಡುವುದಿಲ್ಲ. ಆ ಪ್ರಾರ್ಥನೆ ಹೀಗಿದೆ, ಅದರ ಅನುವಾದ ಹೀಗಿದೆ: ಹೇ ಅಲ್ಲಾಹ್, ನನ್ನನ್ನು ನಿನಗೆ ಅತಿ ಹೆಚ್ಚು ಕೃತಜ್ಞತೆ ಸಲ್ಲಿಸುವವನನ್ನಾಗಿ ಮತ್ತು ನಿನ್ನನ್ನು ಹೆಚ್ಚಾಗಿ ಸ್ಮರಿಸುವವನನ್ನಾಗಿ ಮತ್ತು ನಿನ್ನ ಉಪದೇಶವನ್ನು ಅನುಸರಿಸುವವನನ್ನಾಗಿ ಮತ್ತು ನಿನ್ನ ಕಟ್ಟುನಿಟ್ಟಾದ ಆಜ್ಞೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವವನನ್ನಾಗಿ ಮಾಡು. (ಜಾಮಿಉತ್ತಿರ್ಮಿದಿ, ಅಬ್ವಾಬುದ್ದಅವಾತ್, ಹದೀಸ್-3604)

ಮನುಷ್ಯನು ಪ್ರತಿದಿನ ಈ ಪ್ರಾರ್ಥನೆಯನ್ನು ಮಾಡಿದರೆ, ತಪ್ಪು ಆಲೋಚನೆಗಳು ಹುಟ್ಟಿಕೊಳ್ಳದು ಮತ್ತು ಮನುಷ್ಯನು ತಪ್ಪು ಕೆಲಸಗಳನ್ನೂ ಮಾಡಲಾರನು. ಅಲ್ಲಾಹನು ಆದೇಶಿಸಿರುವುದನ್ನು ಮಾತ್ರ ಅವನು ಮಾಡುತ್ತಾನೆ.

ಹಝ್ರತ್ ಅಬೂ ಹುರೈರಾ(ರ)ರಿಂದ ವರದಿಯಾಗಿದೆ, ರಸೂಲುಲ್ಲಾಹ್(ಸ) ಹೇಳಿದರು: ಯಾರು ಯಾವುದಾದರೂ ಪರೀಕ್ಷೆಯಲ್ಲಿ ಸಿಲುಕಿರುವ ಮನುಷ್ಯನನ್ನು ನೋಡಿ ಈ ರೀತಿ ಪ್ರಾರ್ಥಿಸುತ್ತಾನೋ, ಅವನು ಆ ಅನುಗ್ರಹದ ಕೃತಜ್ಞತೆಯನ್ನು ಸಲ್ಲಿಸಿದನು. ಆ ಪ್ರಾರ್ಥನೆಯ ಪದಗಳು ಹೀಗಿವೆ: ಯಾವನು ನಿನ್ನನ್ನು ಪರೀಕ್ಷಿಸಿದಂತಹ ಪರೀಕ್ಷೆಯಿಂದ ನನ್ನನ್ನು ಸುರಕ್ಷಿತವಾಗಿರಿಸಿದನೋ ಮತ್ತು ನಿನ್ನ ಮೇಲೆ ಹಾಗೂ ತನ್ನ ಎಲ್ಲ ಸೃಷ್ಟಿಗಳ ಮೇಲೆ ನನಗೆ ಶ್ರೇಷ್ಠತೆಯನ್ನು ನೀಡಿದನೋ, ಆ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ. (ಕಿತಾಬುಶ್ಶುಕ್ರ್, ಇಬ್ನ್ ಅಬಿದ್-ದುನ್ಯಾ, ಪುಟ 55, ಮಕ್ತಬ ಅತ್ತುರಾಸ್ ಅಲ್‌ಇಸ್ಲಾಮಿ 1994)

ಕಷ್ಟದಲ್ಲಿರುವವರನ್ನು ನೋಡಿ, ಅಲ್ಲಾಹನು ನನ್ನನ್ನು ಈ ಕಷ್ಟಗಳಿಂದ ರಕ್ಷಿಸಿದ್ದಾನೆಂದು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಾ ಪ್ರಾರ್ಥಿಸಬೇಕು.

ಹಝ್ರತ್ ಆಯಿಶಾ(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ತಮಗೆ ಇಷ್ಟವಾಗುವಂತಹದ್ದೇನಾದರೂ ನೋಡಿದಾಗ, **'ಅಲ್‌ಹಮ್ದುಲಿಲ್ಲಾಹಿಲ್ಲಝೀ ಬಿನಿಅಮತಿಹೀ ತತಿಮ್ಮುಸ್ಸಾಲಿಹಾತ್** (ಯಾರ ಕೃಪೆಯಿಂದ ಎಲ್ಲ ಸತ್ಕಾರ್ಯಗಳೂ ಪೂರ್ಣಗೊಳ್ಳುತ್ತವೆಯೋ, ಆ ಅಲ್ಲಾಹನಿಗೇ ಎಲ್ಲ ಪ್ರಶಂಸೆಗಳು) ಎಂದು ಹೇಳುತ್ತಿದ್ದರು. ಮತ್ತು ತಮಗೆ ಇಷ್ಟವಿಲ್ಲದಂತಹದ್ದನ್ನು ನೋಡಿದಾಗ, **ಅಲ್‌ಹಮ್ದುಲಿಲ್ಲಾಹಿ ಅಲಾ ಕುಲ್ಲಿ ಹಾಲ್** (ಪ್ರತಿಯೊಂದು ಪರಿಸ್ಥಿತಿಯಲ್ಲೂ ಅಲ್ಲಾಹನಿಗೇ ಎಲ್ಲ ಪ್ರಶಂಸೆಗಳು) ಎಂದು ಹೇಳುತ್ತಿದ್ದರು.
(ಸುನನ್ ಇಬ್ನ್ ಮಾಜಹ್, ಕಿತಾಬುಲ್ ಅದಬ್, ಬಾಬು ಫಝ್ಲಿಲ್ ಹಾಮಿದೀನ್, ಹದೀಸ್ 3803)

ಮತ್ತೊಂದು ಹದೀಸಿನಲ್ಲಿ ಹಝ್ರತ್ ಅನಸ್(ರ) ಹೇಳುತ್ತಾರೆ: ನಾವು ರಸೂಲುಲ್ಲಾಹ್(ಸ)ರ ಜೊತೆಗಿದ್ದ ಸಮಯದಲ್ಲಿ ಮಳೆ ಬಂತು. ವರದಿಗಾರರು ಹೇಳುತ್ತಾರೆ, ರಸೂಲುಲ್ಲಾಹ್(ಸ) ತಮ್ಮ ತಲೆಯಿಂದ ತಮ್ಮ ಬಟ್ಟೆಯನ್ನು ತೆಗೆದರು, ಎಷ್ಟರಮಟ್ಟಿಗೆ ಎಂದರೆ ಅವರ ಮೇಲೆ ಸ್ವಲ್ಪ ಮಳೆ ಬಿತ್ತು. ನಾವು, ಯಾ ರಸೂಲಲ್ಲಾಹ್, ನೀವೇಕೆ ಹೀಗೆ ಮಾಡಿದಿರಿ? ಎಂದು ಕೇಳಿದೆವು. ಆಗ ಅವರು ಹೇಳಿದರು: ಏಕೆಂದರೆ ಇದು ಅತ್ಯುನ್ನತನಾದ ಪ್ರಭುವಿನ ಕಡೆಯಿಂದ ಬಂದಿರುವ ತಾಜಾ ಮಳೆಯಾಗಿದೆ. (ಸಹೀಹ್ ಮುಸ್ಲಿಂ, ಕಿತಾಬು ಸಲಾತಿಲ್ ಇಸ್ತಿಸ್ಕಾ, ಬಾಬುದ್ದುಆ ಫಿಲ್ ಇಸ್ತಿಸ್ಕಾ, ಹದೀಸ್ 1485)

ಅದಕ್ಕಾಗಿ ಕೃತಜ್ಞತೆಯಾಗಿ ನಾನು ಈ ಹನಿಗಳನ್ನು ಸ್ವೀಕರಿಸಿದ್ದೇನೆ.

ಹಝ್ರತ್ ಅಬೂ ಹುರೈರಾ(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಮತ್ತು ಅವರ ಸಹಾಬಿಯರು ಮೋಡದಿಂದ ಸುರಿಯುವ ಮೊದಲ ಹನಿಗಾಗಿ ತಮ್ಮ ತಲೆಯನ್ನು ತೆರೆದುಕೊಳ್ಳುತ್ತಿದ್ದರು ಮತ್ತು ರಸೂಲುಲ್ಲಾಹ್(ಸ) ಹೀಗೆ ಹೇಳುತ್ತಿದ್ದರು: ಇದು ನಮ್ಮ ಅತ್ಯುನ್ನತನಾದ ಪ್ರಭುವಿನ ಕಡೆಯಿಂದ ಬಂದಿರುವ ತಾಜಾ ಅನುಗ್ರಹವಾಗಿದೆ ಮತ್ತು ಇದು ಅತ್ಯಂತ ಅನುಗ್ರಹಪೂರ್ಣವಾಗಿದೆ.

(ಕನ್ಝುಲ್ ಉಮ್ಮಾಲ್, ಸಂಪುಟ 1, ಜುಝ್ 2, ಪುಟ 267, ಹದೀಸ್ 4936)

ಅವರು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸದಂತಹ ಯಾವುದೇ ಸಂದರ್ಭವೂ ಇರಲಿಲ್ಲ. ಬಾಹ್ಯವಾಗಿ ಬಹಳ ಚಿಕ್ಕದೆನಿಸುವ ವಿಷಯಗಳಿಗೂ ಅವರು ಕೃತಜ್ಞತೆ ಸಲ್ಲಿಸುತ್ತಿದ್ದರು.

ಅದರಂತೆ ಹಝ್ರತ್ ಮಾಲಿಕ್(ರ) ವಿವರಿಸುತ್ತಾರೆ: ನಬಿ(ಸ) ಶೌಚಾಲಯದಿಂದ ಹೊರಬರುವಾಗ ಈ ಪ್ರಾರ್ಥನೆ ಮಾಡುತ್ತಿದ್ದರು: **ಅಲ್‌ಹಮ್ದುಲಿಲ್ಲಾಹಿಲ್ಲಝೀ ಅಝ್‌ಹಬ ಅನ್ನಿಲ್ ಅಝಾ ವ ಆಫಾನೀ.** ಅಂದರೆ, ನನಗೆ ಹಾನಿಯುಂಟುಮಾಡುವ ವಸ್ತುವನ್ನು ನನ್ನಿಂದ ದೂರಮಾಡಿ ನನಗೆ ಆರೋಗ್ಯವನ್ನು ಕರುಣಿಸಿದ ಆ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ.

(ಸುನನ್ ಇಬ್ನ್ ಮಾಜಹ್, ಕಿತಾಬುತ್ತಹಾರಹ್, ಬಾಬು ಮಾ ಯಕೂಲು ಇಝಾ ಖರಾಜ ಮಿನಲ್ ಖಲಾ, ಹದೀಸ್ 301)

ಹಝ್ರತ್ ಝೈದ್ ಬಿನ್ ಖಾಲಿದ್ ಜುಹ್‌ನೀ(ರ) ವರದಿ ಮಾಡಿದ್ದಾರೆ: ರಸೂಲುಲ್ಲಾಹ್(ಸ) ಹುದೈಬಿಯಾದಲ್ಲಿ, ರಾತ್ರಿ ಸುರಿದ ಮಳೆಯ ನಂತರ ಬೆಳಗಿನ ನಮಾಝಿಗೆ ಇಮಾಮತ್ ವಹಿಸಿದರು. ನಮಾಝ್ ಮುಗಿದ ನಂತರ ಜನರ ಕಡೆಗೆ ತಿರುಗಿ, ನಿಮ್ಮ ಅತ್ಯುನ್ನತನಾದ ಪ್ರಭು ಏನು ಹೇಳಿದ್ದಾನೆಂದು ನಿಮಗೆ ತಿಳಿದಿದೆಯೇ? ಎಂದು ಕೇಳಿದರು. ಅಲ್ಲಾಹನಿಗೆ ಮತ್ತು ಅವನ ಪ್ರವಾದಿಗೆ ಚೆನ್ನಾಗಿ ತಿಳಿದಿದೆ ಎಂದು ಜನರು ಹೇಳಿದರು. ಆಗ ನಬಿ(ಸ) ಹೇಳಿದರು: ಅಲ್ಲಾಹನು ಹೀಗೆ ಹೇಳಿದ್ದಾನೆ, ನನ್ನ ದಾಸರಲ್ಲಿ ಇಂದು ಬೆಳಿಗ್ಗೆ ಕೆಲವರು ನನ್ನನ್ನು ನಂಬುವವರಾಗಿದ್ದಾರೆ ಮತ್ತು ಕೆಲವರು ನನ್ನನ್ನು ನಿರಾಕರಿಸುವವರಾಗಿದ್ದಾರೆ. ಯಾರು ನಮ್ಮ ಮೇಲೆ ಅಲ್ಲಾಹನ ಕೃಪೆ ಮತ್ತು ಅವನ ಅನುಗ್ರಹದಿಂದ ಮಳೆಯಾಗಿದೆ ಎಂದು ಹೇಳಿದನೋ, ಅವನು ನನ್ನನ್ನು ನಂಬುವವನು ಮತ್ತು ನಕ್ಷತ್ರಗಳನ್ನು ನಿರಾಕರಿಸುವವನು. ಯಾರು, ನಮ್ಮ ಮೇಲೆ ಇಂತಹ ನಕ್ಷತ್ರದ ಉದಯದಿಂದಾಗಿ ಮಳೆಯಾಗಿದೆ ಎಂದು ಹೇಳಿದನೋ, ಅವನು ನನ್ನನ್ನು ನಿರಾಕರಿಸುವವನು ಮತ್ತು ನಕ್ಷತ್ರಗಳನ್ನು ನಂಬುವವನು ಎಂದು ಹೇಳಿದನು (ಅಂದರೆ ಅವನು ನನ್ನ ಮೇಲೆ ವಿಶ್ವಾಸವಿಡುವುದಿಲ್ಲ, ಅವನು ಇನ್ನೂ ನಕ್ಷತ್ರಗಳನ್ನು ಪೂಜಿಸುವವನಾಗಿದ್ದಾನೆ).
(ಸಹೀಹ್ ಅಲ್-ಬುಖಾರಿ, ಕಿತಾಬುಲ್ ಅಝಾನ್, ಬಾಬು ಯಸ್ತಕ್ಬಿಲುಲ್ ಇಮಾಮುನ್ನಾಸ್ ಇಝಾ ಸಲ್ಲಮ್, ಹದೀಸ್ 846, ಅನುವಾದ ಸಂಪುಟ-2, ಪುಟ-247-248, ನಝಾರತ್ ಇಶಾಅತ್)

ಹಾಗಾಗಿ ಕೃತಜ್ಞತೆಯ ನೈಜ ಮಾಪನವೆಂದರೆ, ಪ್ರತಿಯೊಂದು ವಿಷಯಕ್ಕೂ ಕೇವಲ ದೇವನಿಗೆ ಮಾತ್ರ ಪ್ರಶಂಸೆ ಸಲ್ಲಿಸಬೇಕು ಮತ್ತು ಅವನಿಗೆ ಮಾತ್ರ ಕೃತಜ್ಞತೆ ಸಲ್ಲಿಸಬೇಕು. ಆ ಸಮಯದಲ್ಲಿ ಕೆಲವು ಜನರ ತರಬೇತಿ ಪೂರ್ಣವಾಗಿರಲಿಲ್ಲ, ಹಳೆಯ ಸಂಪ್ರದಾಯಗಳ ಪ್ರಭಾವವಿತ್ತು, ಅವರ ಹಳೆಯ ಸಾಂಪ್ರದಾಯಿಕ ಧರ್ಮದ ಪ್ರಭಾವವೂ ಇತ್ತು. ಹಾಗಾಗಿ ಅವರು ನಕ್ಷತ್ರಗಳ ಇತ್ಯಾದಿ ಹೆಸರುಗಳನ್ನು ಹೇಳುತ್ತಿದ್ದರು. ಆದ್ದರಿಂದ ಅವರಿಗೆ ನಬಿ(ಸ) ಕೃತಜ್ಞತೆಯ ನೈಜತೆಯನ್ನು ತಿಳಿಸಿ ಈ ರೀತಿಯಾಗಿ ತರಬೇತಿ ನೀಡಿದರು.

ಒಂದು ವರದಿಯಿದೆ, ಜಾಫರ್ ಬಿನ್ ಮುಹಮ್ಮದ್(ರ) ತಮ್ಮ ತಂದೆಯಿಂದ ವರದಿ ಮಾಡಿದ್ದಾರೆ: ರಸೂಲುಲ್ಲಾಹ್(ಸ) ಕನ್ನಡಿ ನೋಡುವಾಗ ಹೀಗೆ ಹೇಳುತ್ತಿದ್ದರು: ನನ್ನನ್ನು ಸೃಷ್ಟಿಸಿದ, ನನ್ನ ರೂಪವನ್ನು ಸುಂದರಗೊಳಿಸಿದ, ನನ್ನ ನೈತಿಕತೆಯನ್ನು ಸುಂದರಗೊಳಿಸಿದ ಮತ್ತು ಇತರರಲ್ಲಿ ದೋಷಪೂರ್ಣವಾಗಿ ಕಾಣುವ ವಸ್ತುಗಳನ್ನು ನನ್ನಲ್ಲಿ ಸುಂದರಗೊಳಿಸಿದ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ. (ಕಿತಾಬುಶ್ಶುಕ್ರ್, ಇಬ್ನ್ ಅಬಿದ್-ದುನ್ಯಾ, ಪುಟ 54, ಮಕ್ತಬ ಅತ್ತುರಾಸುಲ್ ಇಸ್ಲಾಮಿಯಾ 1994)

ಹಝ್ರತ್ ಅಬೂ ಸಯೀದ್(ರ)ರಿಂದ ವರದಿಯಾಗಿದೆ: ನಬಿ(ಸ) ಏನನ್ನಾದರೂ ತಿಂದಾಗ ಅಥವಾ ಕುಡಿದಾಗ, ಅದರ ನಂತರ ದೇವನಿಗೆ ಹೀಗೆ ಕೃತಜ್ಞತೆ ಸಲ್ಲಿಸುತ್ತಿದ್ದರು: **ಅಲ್‌ಹಮ್ದುಲಿಲ್ಲಾಹಿಲ್ಲಝೀ ಅತ್‌ಅಮನಾ ವ ಸಖಾನಾ ವ ಜಅಲನಾ ಮುಸ್ಲಿಮೀನ್**. ಅಂದರೆ, ನಮಗೆ ಉಣ್ಣಿಸಿದ, ಕುಡಿಸಿದ ಮತ್ತು ನಮ್ಮನ್ನು ಮುಸ್ಲಿಮರನ್ನಾಗಿಸಿದ ಆ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ. (ಜಾಮಿಉತ್ತಿರ್ಮಿದಿ, ಅಬ್ವಾಬುದ್ದಅವಾತ್, ಬಾಬು ಮಾ ಯಕೂಲು ಇಝಾ ಫರಘ ಮಿನತ್ತಆಮ್, ಹದೀಸ್ 3457)

ಹಝ್ರತ್ ಅಬೂ ಉಮಾಮ(ರ)ರಿಂದ ವರದಿಯಾಗಿದೆ: ಒಮ್ಮೆ ಹಝ್ರತ್ ಉಮಾಮ(ರ) ಹೀಗೆ ಹೇಳಿದರು: ನಬಿ(ಸ) ತಮ್ಮ ಊಟ ಮುಗಿಸುವಾಗ ಹೀಗೆ ಹೇಳುತ್ತಿದ್ದರು: **ಅಲ್‌ಹಮ್ದುಲಿಲ್ಲಾಹಿಲ್ಲಧೀ ಕಫಾನಾ ವ ಅರ್ವಾನಾ ಗೈರ ಮಖ್ಫಿಯ್ಯಿನ್ ವಲಾ ಮಕ್ಫೂಶ್**. ಅಂದರೆ, ನಮಗೆ ಸಾಕಷ್ಟು ನೀಡಿದ ಮತ್ತು ಹೊಟ್ಟೆತುಂಬಾ ಉಣ್ಣಿಸಿ, ಕುಡಿಸಿದ ಆ ಅಲ್ಲಾಹನಿಗೇ ಎಲ್ಲ ಕೃತಜ್ಞತೆ. ಇಂತಹ ಕೃತಜ್ಞತೆಯು ಕೇವಲ ಇಲ್ಲಿಗೇ ಕೊನೆಗೊಳ್ಳುವಂತಹದ್ದಲ್ಲ, ನಂತರ ಕೃತಜ್ಞತಾಗೇಡಿಯಾಗುವಂತಹ ಕೃತಜ್ಞತೆಯೂ ಇದಲ್ಲ. ಕೆಲವೊಮ್ಮೆ ಅವರು ಹೀಗೆ ಹೇಳುತ್ತಿದ್ದರು: ಎಲ್ಲ ಪ್ರಶಂಸೆಗಳೂ ಅಲ್ಲಾಹನಿಗೆ. ಹೇ ನಮ್ಮ ಪ್ರಭೂ, ಕೇವಲ ಊಟಕ್ಕಷ್ಟೇ ಸೀಮಿತವಾಗುವಂತಹ ಕೃತಜ್ಞತೆ ಇದಲ್ಲ, ಮತ್ತೆ ಮಾಡಲಾಗದಂತಹ ಕೃತಜ್ಞತೆಯೂ ಇದಲ್ಲ, ಅಗತ್ಯವಿಲ್ಲದಂತಹ ಕೃತಜ್ಞತೆಯೂ ಇದಲ್ಲ. ಹೇ ನಮ್ಮ ಪ್ರಭೂ. ಕೃತಜ್ಞತೆಯನ್ನು ಉಪದೇಶಿಸುತ್ತಾ, ಒಂದು ವರದಿಯಲ್ಲಿ ಅವರು ವಿವರಿಸಿದ್ದಾರೆ. (ಸಹೀಹ್ ಅಲ್–ಬುಖಾರಿ, ಕಿತಾಬುಲ್ ಅಮಹ್, ಬಾಬು ಮಾ ಯಕೂಲು ಇಝಾ ಫರಘ ಮಿನ್ ತಆಮಿಹೀ, ಹದೀಸ್ 5459)

ಹಝ್ರತ್ ಸಹಲ್ ಬಿನ್ ಮುಆಝ್ ಬಿನ್ ಅನಸ್(ರ) ತಮ್ಮ ತಂದೆಯಿಂದ ವರದಿ ಮಾಡಿದ್ದಾರೆ: ರಸೂಲುಲ್ಲಾಹ್(ಸ) ಹೇಳಿದರು: ಯಾರು ಊಟ ಮಾಡಿ ನಂತರ, **'ಅಲ್‌ಹಮ್ದುಲಿಲ್ಲಾಹಿಲ್ಲಝೀ ಅತ್‌ಅಮನೀ ಹಾಝುತ್ತಆಮ ವ ರಝುಖನೀಹಿ ಮಿನ್ ಗೈರಿ ಹೌಲಿನ್ ಮಿನ್ನೀ ವಲಾ ಖುವ್ವಹ್'** (ನನಗೆ ಈ ಊಟವನ್ನು ಉಣ್ಣಿಸಿದ ಮತ್ತು ನನ್ನ ಯಾವುದೇ ಶಕ್ತಿ ಮತ್ತು ಸಾಮರ್ಥ್ಯವಿಲ್ಲದಿದ್ದರೂ ನನಗೆ ಇದನ್ನು ಕರುಣಿಸಿದ ಆ ಅಲ್ಲಾಹನಿಗೇ ಎಲ್ಲ ಪ್ರಶಂಸೆಗಳು) ಎಂದು ಪ್ರಾರ್ಥಿಸುತ್ತಾನೋ, ಅವನ ಹಿಂದಿನ ಮತ್ತು ಮುಂದಿನ ಪಾಪಗಳನ್ನು ಕ್ಷಮಿಸಲಾಗುವುದು. ಅವರು ಹೇಳಿದರು: ಯಾರು ಉಡುಪನ್ನು ಧರಿಸಿ, 'ನನಗೆ ಈ ಉಡುಪನ್ನು ಧರಿಸಿದ ಮತ್ತು ನನ್ನ ಯಾವುದೇ ಶಕ್ತಿ ಮತ್ತು ಸಾಮರ್ಥ್ಯವಿಲ್ಲದಿದ್ದರೂ ನನಗೆ ಈ ಉಡುಪನ್ನು ಕರುಣಿಸಿದ ಆ ಅಲ್ಲಾಹನಿಗೇ ಎಲ್ಲ ಪ್ರಶಂಸೆಗಳು' ಎಂದು ಪ್ರಾರ್ಥಿಸುತ್ತಾನೋ, ಅವನ ಹಿಂದಿನ ಮತ್ತು ಮುಂದಿನ ಪಾಪಗಳನ್ನು ಕ್ಷಮಿಸಲಾಗುವುದು.
(ಸುನನ್ ಅಬೂ ದಾವೂದ್, ಕಿತಾಬುಲ್ ಲಿಬಾಸ್, ಬಾಬು ಮಾ ಯಕೂಲು ಇಝಾ ಲಬಿಸ, ಹದೀಸ್ 4023)

ಹಝ್ರತ್ ಅಬೂಹುರೈರಾ(ರ)ರಿಂದ ವರದಿಯಾಗಿದೆ, ಅವರು ಹೇಳುತ್ತಾರೆ: ಜನರು ಮೊದಲ ಫಸಲನ್ನು ನೋಡಿದಾಗ ಅದನ್ನು ನಬಿ(ಸ)ರ ಬಳಿಗೆ ತರುತ್ತಿದ್ದರು. ರಸೂಲುಲ್ಲಾಹ್(ಸ) ಅದನ್ನು ಪಡೆಯುವಾಗ ಈ ಪ್ರಾರ್ಥನೆಯನ್ನು ಮಾಡುತ್ತಿದ್ದರು: 'ಹೇ ಅಲ್ಲಾಹ್, ನಮಗಾಗಿ ನಮ್ಮ ಹಣ್ಣುಗಳಲ್ಲಿ ಅಭಿವೃದ್ಧಿಯನ್ನು ಕರುಣಿಸು, ಮತ್ತು ನಮಗಾಗಿ ನಮ್ಮ ನಗರದಲ್ಲಿ ಅಭಿವೃದ್ಧಿಯನ್ನು ಕರುಣಿಸು, ಮತ್ತು ನಮಗಾಗಿ ನಮ್ಮ ಸಾಅ್‌ನಲ್ಲಿ (ಇದು ತೂಕದ ಒಂದು ಅಳತೆಯಾಗಿದೆ) ಅಭಿವೃದ್ಧಿಯನ್ನು ಕರುಣಿಸು, ಮತ್ತು ನಮಗಾಗಿ ನಮ್ಮ ಮುದ್ದ್‌ನಲ್ಲಿ (ಇದು ತೂಕದ ಮತ್ತೊಂದು ಅಳತೆಯಾಗಿದೆ) ಅಭಿವೃದ್ಧಿಯನ್ನು ಕರುಣಿಸು. ಹೇ ಅಲ್ಲಾಹ್, ಖಂಡಿತವಾಗಿಯೂ ಇಬ್ರಾಹೀಂ ನಿನ್ನ ದಾಸ, ನಿನ್ನ ಸ್ನೇಹಿತ ಮತ್ತು ನಿನ್ನ ಪ್ರವಾದಿಯಾಗಿದ್ದರು, ನಾನು ನಿನ್ನ ದಾಸ ಮತ್ತು ನಿನ್ನ ಪ್ರವಾದಿಯಾಗಿದ್ದೇನೆ. ಅವರು ನಿನ್ನೊಡನೆ ಮಕ್ಕಾ ನಗರಕ್ಕಾಗಿ ಪ್ರಾರ್ಥಿಸಿದ್ದರು, ಮತ್ತು ನಾನು ನಿನ್ನೊಡನೆ ಮದೀನಾ ನಗರಕ್ಕಾಗಿ ಮತ್ತು ಅದರಷ್ಟೇ ಮತ್ತಷ್ಟು ಪ್ರಾರ್ಥಿಸುತ್ತೇನೆ.' ವರದಿಗಾರರು ಹೇಳುತ್ತಾರೆ: ನಂತರ ನಬಿ(ಸ) ಅತ್ಯಂತ ಕಿರಿಯ ಮಗುವನ್ನು ಕರೆದು ಆ ಹಣ್ಣನ್ನು ಅವನಿಗೆ ಕೊಡುತ್ತಿದ್ದರು. ಹೊಸ ಹಣ್ಣು ಬಂದಾಗ ಅದನ್ನು ಮೊದಲು ಮಕ್ಕಳಿಗೆ ಕೊಡುತ್ತಿದ್ದರು. (ಸಹೀಹ್ ಮುಸ್ಲಿಂ, ಕಿತಾಬುಲ್ ಹಜ್, ಬಾಬು ಫಝ್ಲಿಲ್ ಮದೀನಹ್ ವ ದುಆಇನ್ನಬಿಯ್ಯಿ, ಹದೀಸ್ 2423)

ಹಝ್ರತ್ ಹುಝೈಫಾ(ರ) ವಿವರಿಸುತ್ತಾರೆ: ನಬಿ(ಸ) ರಾತ್ರಿ ತಮ್ಮ ಹಾಸಿಗೆಯಲ್ಲಿ ಮಲಗುವಾಗ ತಮ್ಮ ಕೈಯನ್ನು ತಮ್ಮ ಕೆನ್ನೆಯ ಕೆಳಗೆ ಇಟ್ಟುಕೊಂಡು ನಂತರ ಈ ಪ್ರಾರ್ಥನೆ ಮಾಡುತ್ತಿದ್ದರು: **ಅಲ್ಲಾಹುಮ್ಮ ಬಿಸ್ಮಿಕ ಅಮೂತು ವ ಅಹ್ಯಾ**. ಅಂದರೆ, ಹೇ ಅಲ್ಲಾಹ್, ನಿನ್ನ ಹೆಸರಿನಿಂದಲೇ ನಾನು ಮರಣಪಡುತ್ತೇನೆ ಮತ್ತು ಜೀವಿಸುತ್ತೇನೆ. ಅವರು ಎಚ್ಚರಗೊಳ್ಳುವಾಗ ಈ ಪ್ರಾರ್ಥನೆ ಮಾಡುತ್ತಿದ್ದರು: **ಅಲ್‌ಹಮ್ದುಲಿಲ್ಲಾಹಿಲ್ಲಝೀ ಅಹ್ಯಾನಾ ಬಅದ ಮಾ ಅಮಾತನಾ ವ ಇಲೈಹಿನ್ನುಶೂರ್**. ಅಂದರೆ, ನಮ್ಮನ್ನು ಮೃತಪಡಿಸಿದ ನಂತರ ಪುನಃ ಜೀವಂತಗೊಳಿಸಿದ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ ಮತ್ತು ನಾವು ಅವನ ಕಡೆಗೇ ಹಿಂತಿರುಗಿ ಹೋಗಬೇಕಾಗಿದೆ. (ಸಹೀಹ್ ಅಲ್–ಬುಖಾರಿ, ಕಿತಾಬುದ್ದಅವಾತ್, ಬಾಬು ವಅಲ್ ಯದ್ ತಹ್ತಲ್ ಖದ್ದಿಲ್ ಯುಮ್ನಾ, ಹದೀಸ್ 6314)

ಮತ್ತೊಂದು ವರದಿಯಲ್ಲಿ ಎಚ್ಚರಗೊಳ್ಳುವ ಪ್ರಾರ್ಥನೆಯನ್ನು ಹೀಗೆ ವಿವರಿಸಲಾಗಿದೆ: ಅವರು ರಾತ್ರಿ ಎಚ್ಚರಗೊಂಡಾಗ ಹೀಗೆ ಹೇಳುತ್ತಿದ್ದರು: ನನಗೆ ಮರಣ ನೀಡಿದ ನಂತರ ಪುನಃ ಜೀವ ನೀಡಿದ ಅಲ್ಲಾಹನಿಗೇ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ ಮತ್ತು ಅವನ ಕಡೆಗೇ ಹಿಂತಿರುಗಿ ಹೋಗಬೇಕಾಗಿದೆ.
(ಮುಸ್ನದ್ ಅಹ್ಮದ್ ಬಿನ್ ಹಂಬಲ್, ಮುಸ್ನದು ಹುಝೈಫಹ್ ಬಿನ್ ಅಲ್–ಯಮಾನ್, ಸಂಪುಟ 7, ಪುಟ 705, ಹದೀಸ್ 23675)

ಅಮ್ರ್ ಬಿನ್ ಶುಐಬ್(ರ) ತಮ್ಮ ತಂದೆಯಿಂದ ಮತ್ತು ಅವರು ತಮ್ಮ ತಾತರಿಂದ ವರದಿ ಮಾಡಿದ್ದಾರೆ: ರಸೂಲುಲ್ಲಾಹ್(ಸ) ಹೇಳಿದರು, ಖಂಡಿತವಾಗಿಯೂ ತನ್ನ ಅನುಗ್ರಹದ ಕುರುಹುಗಳು ತನ್ನ ದಾಸರ ಮೇಲೆ ಗೋಚರಿಸುವುದನ್ನು ಅಲ್ಲಾಹನು ಇಷ್ಟಪಡುತ್ತಾನೆ.
(ಜಾಮಿಉತ್ತಿರ್ಮಿದಿ, ಅಬ್ವಾಬುಲ್ ಅದಬ್, ಬಾಬು ಮಾ ಜಾಅ ಅನ್ನಲ್ಲಾಹ ತಆಲಾ ಯುಹಿಬ್ಬು ಅಯ್ಯುರಾ, ಹದೀಸ್ 2819)

ಇದು ಕೂಡ ಅಲ್ಲಾಹನ ಕೃತಜ್ಞತೆಯಾಗಿದೆ, ಅವನು ನೀಡಿದ ಅನುಗ್ರಹಗಳು ವ್ಯಕ್ತಿಯ ಮೇಲೆ ಕಾಣಬೇಕು, ವ್ಯಕ್ತಿಯ ಮೇಲೆ ಪ್ರಕಟವಾಗಬೇಕು. ಅದೇ ರೀತಿ ಒಂದು ವರದಿಯಲ್ಲಿ ವಿವರಿಸಲಾಗಿದೆ.

ಹಝ್ರತ್ ಅಬುಲ್ ಅಹ್ವಾಸ್(ರ) ತಮ್ಮ ತಂದೆಯಿಂದ ವರದಿ ಮಾಡಿದ್ದಾರೆ, ಅವರು ಹೇಳಿದರು: ನಾನು ನಬಿ(ಸ)ರ ಸನ್ನಿಧಿಗೆ ಹರಕು–ಮುರುಕು ಬಟ್ಟೆಗಳಲ್ಲಿ ಹಾಜರಾದೆ. ಅಂದರೆ, ಒಳ್ಳೆಯ ಬಟ್ಟೆಗಳಿರಲಿಲ್ಲ, ಹಾಳಾದ ಬಟ್ಟೆಗಳಾಗಿದ್ದವು. ಆಗ ಅವರು ನನ್ನೊಡನೆ, ನಿನ್ನ ಬಳಿ ಸಂಪತ್ತಿದೆಯೇ? ಎಂದು ಕೇಳಿದರು. ಇದೆ ಎಂದು ನಾನು ಹೇಳಿದೆ. ನಬಿ(ಸ) ಕೇಳಿದರು: ಯಾವ ರೀತಿಯ ಸಂಪತ್ತಿದೆ? ನೀನು ಶ್ರೀಮಂತನೇ? ನಿನ್ನ ಬಳಿ ಯಾವ ರೀತಿಯ ಸಂಪತ್ತಿದೆ? ನೀನು ನನ್ನ ಬಳಿ ಸಂಪತ್ತಿದೆ ಎಂದು ಹೇಳುತ್ತೀಯಲ್ಲ. ನಾನು ಹೇಳಿದೆ: ಅಲ್ಲಾಹನು ನನಗೆ ಒಂಟೆಗಳನ್ನು ನೀಡಿದ್ದಾನೆ, ಕುರಿ–ಮೇಕೆಗಳೂ ಇವೆ, ಕುದುರೆಗಳೂ ನನ್ನ ಬಳಿಯಿವೆ, ಗುಲಾಮರನ್ನೂ ಕರುಣಿಸಿದ್ದಾನೆ, ನನ್ನ ಬಳಿ ಬಹಳಷ್ಟು ಸಂಪತ್ತಿದೆ. ಆಗ ನಬಿ(ಸ) ಹೇಳಿದರು: ಅಲ್ಲಾಹನು ನಿನಗೆ ಸಂಪತ್ತನ್ನು ನೀಡಿದ್ದಾನಾದರೆ, ಅವನ ಅನುಗ್ರಹ ಮತ್ತು ಅವನ ಕರುಣೆ ನಿನ್ನ ಮೇಲೆ ಕಾಣಬೇಕು, ಅದಕ್ಕೆ ಕೃತಜ್ಞತೆ ಸಲ್ಲಿಸಬೇಕು.

(ಸುನನ್ ಅಬೂ ದಾವೂದ್, ಕಿತಾಬುಲ್ ಲಿಬಾಸ್, ಬಾಬು ಫಿಲ್ ಖಲಕಾನ್ ವ ಫೀ ಘಸ್ಲಿತ್ಸೌಬ್, ಹದೀಸ್ 4063)

ಆ ಕೃತಜ್ಞತೆಯ ಪ್ರದರ್ಶನವೆಂದರೆ, ಈ ಕೊಳಕು ಬಟ್ಟೆಗಳನ್ನು ಧರಿಸಿ ಬರಬೇಡ, ಈ ಹರಕು–ಮುರುಕು ಬಟ್ಟೆಗಳನ್ನು ಧರಿಸಿ ಬರಬೇಡ. ಒಳ್ಳೆಯ ಬಟ್ಟೆಗಳನ್ನು ಧರಿಸು, ಅಲ್ಲಾಹನ ಅನುಗ್ರಹಗಳನ್ನು ಪ್ರದರ್ಶಿಸು.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ವಿವರಿಸಿದರು: ನಾವು ರಸೂಲುಲ್ಲಾಹ್(ಸ)ರ ಸನ್ನಿಧಿಯಲ್ಲಿ ಹಾಜರಾದೆವು. ಅವರು, ಕೂದಲುಗಳು ಅಸ್ತವ್ಯಸ್ತವಾಗಿದ್ದ ಅಂದರೆ, ಕೂದಲುಗಳು ಚದುರಿದ್ದವು, ಸರಿಯಾಗಿ ಬಾಚಿರಲಿಲ್ಲ, ಅಂತಹ ಒಬ್ಬ ವ್ಯಕ್ತಿಯನ್ನು ನೋಡಿದರು. ನಬಿ(ಸ) ಕೇಳಿದರು: ಈ ವ್ಯಕ್ತಿಗೆ ತನ್ನ ಕೂದಲುಗಳನ್ನು ಸರಿಪಡಿಸಿಕೊಳ್ಳಲು ಏನೂ ಸಿಗುವುದಿಲ್ಲವೇ? ಆತ ತನ್ನ ಕೂದಲುಗಳನ್ನು ತೊಳೆದು, ಸರಿಪಡಿಸಿಕೊಂಡು, ಬಾಚಿಕೊಳ್ಳಬಾರದೇಕೆ ಎಂದು ಇತರರಿಗೆ ಹೇಳಿದರು. ಅವರು ಮಲಿನವಾದ ಬಟ್ಟೆಗಳನ್ನು ಧರಿಸಿದ್ದ ಮತ್ತೊಬ್ಬನನ್ನು ನೋಡಿದರು. ನಬಿ(ಸ) ಹೇಳಿದರು: ಇವನಿಗೆ ತನ್ನ ಬಟ್ಟೆಗಳನ್ನು ತೊಳೆಯಲು ನೀರು ಸಿಗುವುದಿಲ್ಲವೇ? ಕೊಳಕು ಬಟ್ಟೆಗಳನ್ನು ಧರಿಸುವ ಬದಲು ಬಟ್ಟೆಗಳನ್ನು ತೊಳೆಯಿರಿ. (ಸುನನ್ ಅಬೂ ದಾವೂದ್, ಕಿತಾಬುಲ್ ಲಿಬಾಸ್, ಬಾಬು ಫಿಲ್ ಖಲಕಾನ್ ವ ಫೀ ಘಸ್ಲಿತ್ಸೌಬ್, ಹದೀಸ್ 4062)

ನೀರು ಸಿಗುತ್ತದೆ, ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿ. ಸ್ವಚ್ಛತೆ ಮತ್ತು ನೈರ್ಮಲ್ಯವು ಶುದ್ಧತೆಯ ಅಂಶವನ್ನು ತೋರಿಸುತ್ತದೆ, ಅದರ ಜೊತೆಗೆ ಇದರಲ್ಲಿ ಕೃತಜ್ಞತೆಯ ಅಂಶವೂ ಇದೆ. ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕು, ಜನರು 'ಇದೇನು ಇಂಥಾ ಸ್ಥಿತಿಯಲ್ಲಿದ್ದಾನೆ' ಎಂದು ಹೇಳುವಂತಹ ರೂಪವನ್ನು ಹೊಂದಿರಬಾರದು.

ಅದೇ ರೀತಿ ಒಂದು ವರದಿಯಿದೆ. ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡಿದ್ದಾರೆ. ನಬಿ(ಸ) ಹೇಳಿದರು: ಯಾರ ಹೃದಯದಲ್ಲಿ ಸಾಸಿವೆ ಕಾಳಿನಷ್ಟಾದರೂ ಅಹಂಕಾರವಿದೆಯೋ, ಅವನು ಸ್ವರ್ಗವನ್ನು ಪ್ರವೇಶಿಸಲಾರನು. ಒಬ್ಬ ವ್ಯಕ್ತಿ ಕೇಳಿದನು: ಮನುಷ್ಯನು ತನ್ನ ಉಡುಪು ಚೆನ್ನಾಗಿರಬೇಕು ಮತ್ತು ತನ್ನ ಚಪ್ಪಲಿ ಚೆನ್ನಾಗಿರಬೇಕು ಎಂದು ಬಯಸುತ್ತಾನೆ. ಆಗ ನಬಿ(ಸ) ಹೇಳಿದರು: ಅಲ್ಲಾಹನು ಸುಂದರನಾಗಿದ್ದಾನೆ ಮತ್ತು ಸೌಂದರ್ಯವನ್ನು ಇಷ್ಟಪಡುತ್ತಾನೆ. ಅಲ್ಲಾಹನೂ ಸುಂದರನಾಗಿದ್ದಾನೆ ಮತ್ತು ಅಲ್ಲಾಹನು ಸೌಂದರ್ಯವನ್ನು ಇಷ್ಟಪಡುತ್ತಾನೆ, ಇದರಲ್ಲಿ ಯಾವುದೇ ಸಂದೇಹವಿಲ್ಲ. ಅಹಂಕಾರವೆಂದರೆ, ತನ್ನನ್ನು ತಾನು ದೊಡ್ಡವನೆಂದು ಭಾವಿಸಿ

ಸತ್ಯವನ್ನು ನಿರಾಕರಿಸುವುದು ಮತ್ತು ಜನರನ್ನು ಕೀಳಾಗಿ ಕಾಣುವುದಾಗಿದೆ.

(ಸಹೀಹ್ ಮುಸ್ಲಿಂ, ಕಿತಾಬುಲ್ ಈಮಾನ್, ಬಾಬು ತಹ್ರೀಮಿಲ್ ಕಿಬ್ರಿ ವ ಬಯಾನಿಹೀ, ಹದೀಸ್ 123)

ಸತ್ಯವನ್ನು ನಿರಾಕರಿಸುವುದು ಮತ್ತು ಜನರನ್ನು ಕೀಳಾಗಿ ಕಾಣುವುದು ಅಹಂಕಾರವಾಗಿದೆ. ಅಥವಾ ಒಳ್ಳೆಯ ಬಟ್ಟೆ ಧರಿಸಿ ನಂತರ ಅಹಂಕಾರ ಪಟ್ಟರೆ ಅದು ಅಹಂಕಾರವಾಗುತ್ತದೆ. ಆದರೆ ಒಳ್ಳೆಯ ಬಟ್ಟೆ ಧರಿಸಿ ವಿನಯದಿಂದ ಇತರರನ್ನು ಭೇಟಿಯಾದರೆ, ಅವರಿಗೆ ಗೌರವ ನೀಡಿದರೆ, ಅದು ಅಹಂಕಾರವಲ್ಲ.

ಹಝ್ರತ್ ಅಬೂ ಸಯೀದ್ ಖುದ್ರಿ(ರ) ವಿವರಿಸಿದರು: ರಸೂಲುಲ್ಲಾಹ್(ಸ) ಯಾವುದೇ ಹೊಸ ಬಟ್ಟೆ ತೆಗೆದುಕೊಳ್ಳುವಾಗ, ಅದು ಶರ್ಟ್ ಆಗಿರಲಿ ಅಥವಾ ರುಮಾಲಾಗಿರಲಿ, ಅದರ ಹೆಸರೆತ್ತಿ ಈ ರೀತಿ ಪ್ರಾರ್ಥಿಸುತ್ತಿದ್ದರು:

'ಹೇ ಅಲ್ಲಾಹ್, ಎಲ್ಲ ಪ್ರಶಂಸೆಗಳು ನಿನಗೆ ಸೇರಿವೆ, ನೀನೇ ನನಗೆ ಇದನ್ನು ತೊಡಿಸಿದ್ದೀಯಾ. ನಾನು ನಿನ್ನಿಂದಲೇ ಇದರ ಒಳಿತನ್ನು ಮತ್ತು ಇದು ಯಾವುದಕ್ಕಾಗಿ ಮಾಡಲ್ಪಟ್ಟಿದೆಯೋ ಆ ಒಳಿತನ್ನು ಬೇಡುತ್ತೇನೆ. ನಾನು ಇದರ ಕೆಡುಕಿನಿಂದ ಮತ್ತು ಇದು ಯಾವುದಕ್ಕಾಗಿ ಮಾಡಲ್ಪಟ್ಟಿದೆಯೋ ಆ ಕೆಡುಕಿನಿಂದ ರಕ್ಷಣೆಯನ್ನು ಬೇಡುತ್ತೇನೆ.' (ಸುನನ್ ಅಬೂ ದಾವೂದ್, ಕಿತಾಬುಲ್ ಲಿಬಾಸ್, ಬಾಬು ಮಾ ಯಕೂಲು ಇಝಾ ಲಬಿಸ, ಹದೀಸ್ 4020)

ಹಝ್ರತ್ ಆಯಿಶಾ(ರ)ರಿಂದ ವರದಿಯಾಗಿದೆ, ರಸೂಲುಲ್ಲಾಹ್(ಸ) ಹೇಳಿದರು: ಅಲ್ಲಾಹನು ಯಾವುದಾದರೂ ದಾಸನಿಗೆ ಯಾವುದಾದರೂ ಅನುಗ್ರಹವನ್ನು ನೀಡುವಾಗ ಮತ್ತು ಅವನು ಇದು ಅಲ್ಲಾಹನ ಕಡೆಯಿಂದ ಬಂದಿದೆ ಎಂದು ಮನವರಿಕೆ ಮಾಡಿದರೆ, ಆ ಅನುಗ್ರಹಕ್ಕಾಗಿ ಅವನ ಕೃತಜ್ಞತೆಯನ್ನು ಬರೆಯಲಾಗುತ್ತದೆ. ಅಲ್ಲಾಹನು ಯಾವುದೇ ಪಾಪದ ಮೇಲೆ ದಾಸನ ಪಶ್ಚಾತ್ತಾಪವನ್ನು ಅರಿತರೆ, ಅವನು ಕ್ಷಮೆ ಕೇಳುವ ಮೊದಲೇ ಅವನನ್ನು ಕ್ಷಮಿಸುತ್ತಾನೆ.

ಒಬ್ಬ ವ್ಯಕ್ತಿಯು ದೀನಾರ್‌ನಿಂದ ಬಟ್ಟೆ ಖರೀದಿಸಿ ಅದನ್ನು ಧರಿಸಿ ಅಲ್ಲಾಹನಿಗೆ ಪ್ರಶಂಸೆ ಸಲ್ಲಿಸಿದರೆ, ಆ ಬಟ್ಟೆ ಅವನ ಮೊಣಕಾಲಿನವರೆಗೆ ತಲುಪುವಷ್ಟರಲ್ಲಿ ಅವನನ್ನು ಕ್ಷಮಿಸಲಾಗುತ್ತದೆ. ಕೃತಜ್ಞತೆ ಸಲ್ಲಿಸುವವರೊಂದಿಗೆ ಅಲ್ಲಾಹನು ಈ ರೀತಿ ವರ್ತಿಸುತ್ತಾನೆ. (ಕಿತಾಬುಶ್ಶುಕ್ರ್, ಇಬ್ನ್ ಅಬಿದ್–ದುನ್ಯಾ, ಪುಟ 20)

ಸಾಲಿಮ್(ರ) ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ)ರಿಂದ ವರದಿ ಮಾಡಿದ್ದಾರೆ, ಅವರು ಹೇಳಿದರು: ನಬಿ(ಸ) ಯುದ್ಧದಿಂದ ಹಿಂದಿರುಗುವಾಗ, ಯಾವುದೇ ಕಣಿವೆ ಅಥವಾ ಎತ್ತರದ ಮೈದಾನಕ್ಕೆ ತಲುಪಿದಾಗ ಮೂರು ಬಾರಿ ಅಲ್ಲಾಹು ಅಕ್ಬರ್ ಎಂದು ಹೇಳುತ್ತಿದ್ದರು ಮತ್ತು ನಂತರ ಹೀಗೆ ಹೇಳುತ್ತಿದ್ದರು: **'ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವ ಲಹುಲ್ ಹಮ್ದು ವ ಹುವ ಅಲಾ ಕುಲ್ಲಿ ಶೈಯಿನ್ ಖದೀರ್. ಆಯಿಬೂನ ತಾಯಿಬೂನ ಆಬಿದೂನ ಸಾಜಿದೂನ ಲಿರಬ್ಬಿನಾ ಹಾಮಿದೂನ್, ಸಾದಕಲ್ಲಾಹು ವಅದಹೂ ವ ನಸರ ಅಬ್ದಹೂ ವ ಹಝಮಲ್ ಅಹ್‌ಝಾಬ ವಹ್ದಹೂ ಲಾ ಇಲಾಹ ಇಲ್ಲಲ್ಲಾಹು'** ಅಂದರೆ, ಏಕ ಅಲ್ಲಾಹನ ಹೊರತು ಬೇರೆ ಆರಾಧ್ಯರಿಲ್ಲ, ಅವನಿಗೆ ಯಾರೂ ಪಾಲುದಾರರಿಲ್ಲ, ಎಲ್ಲ ಸಾಮ್ರಾಜ್ಯವೂ ಅವನದೇ, ಎಲ್ಲ ಪ್ರಶಂಸೆಗಳೂ ಅವನಿಗೇ ಸಲ್ಲುತ್ತವೆ ಮತ್ತು ಅವನು ಪ್ರತಿಯೊಂದು ವಿಷಯದ ಮೇಲೂ ಶಕ್ತನಾಗಿದ್ದಾನೆ. ನಾವು ಪ್ರಯಾಣದಿಂದ ಹಿಂದಿರುಗುತ್ತಿದ್ದೇವೆ, ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುತ್ತಾ, ಇನ್ನು ಮುಂದೆ ತಪ್ಪುಗಳನ್ನು ಮಾಡುವುದಿಲ್ಲ ಎಂದು ಒಪ್ಪಿಕೊಳ್ಳುತ್ತೇವೆ. ನಾವು ನಮ್ಮ ಪ್ರಭುವನ್ನೇ ಆರಾಧಿಸುವವರಾಗಿದ್ದೇವೆ, ನಮ್ಮ ಪ್ರಭುವಿನ ಮುಂದೆಯೇ ತಲೆಬಾಗುವವರಾಗಿದ್ದಾರೆ, ನಮ್ಮ ಪ್ರಭುವಿನ ಪ್ರಶಂಸೆಯನ್ನೇ ಮಾಡುವವರಾಗಿದ್ದೇವೆ. ಅಲ್ಲಾಹನು ಖಂಡಿತವಾಗಿಯೂ ತನ್ನ ವಾಗ್ದಾನವನ್ನು ಸತ್ಯವಾಗಿಸಿದನು, ತನ್ನ ದಾಸನಿಗೆ ಸಹಾಯ ಮಾಡಿದನು ಮತ್ತು ಎಲ್ಲ ಗುಂಪುಗಳನ್ನು ಒಂಟಿಯಾಗಿ ಹಿಮ್ಮೆಟ್ಟಿಸಿದನು. (ಸಹೀಹ್ ಅಲ್–ಬುಖಾರಿ, ಕಿತಾಬುಲ್ ಜಿಹಾದಿ ವಸ್ಸಿಯರ್, ಬಾಬುತ್ತಕ್ಬೀರ್ ಇಝಾ ಅಲಾ ಶರಫನ್, ಹದೀಸ್ 2995)

ಬದ್ರ್ ಯುದ್ಧದ ದಿನ ಸತ್ಯನಿಷೇಧಿಗಳ ಮೃತದೇಹಗಳನ್ನು ಬದ್ರ್ ಮೈದಾನದ ಗುಂಡಿ ಮತ್ತು ಬಾವಿಗಳಲ್ಲಿ ಹಾಕಲಾಯಿತು. ರಸೂಲುಲ್ಲಾಹ್(ಸ) ಹೇಳಿದರು: ಅಬೂ ಜಹಲ್‌ನನ್ನು ಅವಮಾನಿತನನ್ನಾಗಿ ಮಾಡಿ, ಅವನನ್ನು ನಾಶಗೊಳಿಸಿ ನಮಗೆ ಅವನಿಂದ ಮುಕ್ತಿ ನೀಡಿದ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ. ಎಲ್ಲ ಮೃತದೇಹಗಳನ್ನು ಬಾವಿಗೆ ಹಾಕಿದಾಗ, ರಸೂಲುಲ್ಲಾಹ್(ಸ) ಅದರ ಸುತ್ತಲೂ ಪ್ರದಕ್ಷಿಣೆ ಹಾಕುತ್ತಿದ್ದರು ಮತ್ತು ಮೃತದೇಹಗಳು ಆ ಗುಂಡಿಯಲ್ಲಿದ್ದವು. ಹಝ್ರತ್ ಅಬೂಬಕರ್(ರ) ಪ್ರತಿಯೊಬ್ಬನ ಹೆಸರನ್ನು ಹೇಳಿ ನಬಿ(ಸ) ಅವರಿಗೆ ತಿಳಿಸುತ್ತಿದ್ದರು ಮತ್ತು ರಸೂಲುಲ್ಲಾಹ್(ಸ) ಅಲ್ಲಾಹನ ಪ್ರಶಂಸೆ ಮತ್ತು ಕೃತಜ್ಞತೆ ಸಲ್ಲಿಸುತ್ತಾ, ನನ್ನೊಡನೆ ಮಾಡಿದ ವಾಗ್ದಾನವನ್ನು ಪೂರೈಸಿದ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ ಎಂದು ಹೇಳುತ್ತಿದ್ದರು.

(ಕಿತಾಬುಲ್ ಮಗಾಝೀ, ಅಲ್–ವಾಕಿದಿ, ಸಂಪುಟ 1, ಪುಟ 111–112)

ನಬಿ(ಸ)ರ ಬದ್ಧ ಶತ್ರುವಿನ ವಿನಾಶದ ಮೇಲೆ ಅವರ ಪ್ರತಿಕ್ರಿಯೆ ಯಾವುದೇ ರೀತಿಯ ಬಾಹ್ಯ ಸಂತೋಷವನ್ನು ಪ್ರದರ್ಶಿಸುವ ರೀತಿಯಲ್ಲಿರಲಿಲ್ಲ, ಬದಲಾಗಿ ಅಲ್ಲಾಹನ ಸನ್ನಿಧಿಯಲ್ಲಿ ತಲೆಬಾಗಿ ಅವನಿಗೆ ಕೃತಜ್ಞತೆ ಸಲ್ಲಿಸಿದರು.

ಈ ಬಗ್ಗೆ ಇನ್ನು ಕೆಲವು ವರದಿಗಳೂ ಇವೆ. ಅದರಂತೆ ಒಂದು ವರದಿಯಲ್ಲಿ ಬರುತ್ತದೆ, ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವಿವರಿಸುತ್ತಾರೆ: ಬದ್ರ್ ಯುದ್ಧದ ದಿನ ನಾನು ರಸೂಲುಲ್ಲಾಹ್(ಸ) ಸನ್ನಿಧಿಯಲ್ಲಿ ಹಾಜರಾಗಿ, ನಾನು ಅಬೂಜಹಲ್‌ನನ್ನು ಕೊಂದಿದ್ದೇನೆ ಎಂದು ಹೇಳಿದೆ. ನಬಿ(ಸ) ಕೇಳಿದರು: ಯಾರ ಹೊರತು ಬೇರೆ ಆರಾಧ್ಯರಿಲ್ಲವೋ ಆ ಅಲ್ಲಾಹನ ಮೇಲಾಣೆ ಹೇಳುತ್ತಿದ್ದೀಯಾ? ನಾನು ಹೇಳಿದೆ: ಹೌದು, ಯಾರ ಹೊರತು ಬೇರೆ ಆರಾಧ್ಯರಿಲ್ಲವೋ ಆ ಅಲ್ಲಾಹನ ಮೇಲಾಣೆ, ನಾನು ಅವನನ್ನು ಕೊಂದಿದ್ದೇನೆ. ನಬಿ(ಸ) ಈ ಮಾತನ್ನು ಮೂರು ಬಾರಿ ಪುನರಾವರ್ತಿಸಿ, ನನ್ನಿಂದ ಖಚಿತಪಡಿಸಿಕೊಂಡರು. ನಂತರ ಹೇಳಿದರು: ಅಲ್ಲಾಹನು ಎಲ್ಲರಿಗಿಂತ ದೊಡ್ಡವನು. ತನ್ನ ವಾಗ್ದಾನವನ್ನು ಸತ್ಯವಾಗಿಸಿದ, ತನ್ನ ದಾಸನಿಗೆ ಸಹಾಯ ಮಾಡಿದ ಮತ್ತು ಒಂಟಿಯಾಗಿ ಎಲ್ಲ ವಿರೋಧಿ ಗುಂಪುಗಳನ್ನು ಹಿಮ್ಮೆಟ್ಟಿಸಿದ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ. ನಂತರ ನಬಿ(ಸ) ಹೇಳಿದರು: ನನಗೆ ಅವನ ಮೃತದೇಹವನ್ನು ತೋರಿಸು, ನನ್ನೊಡನೆ ಬಾ. ಅದರಂತೆ ನಾವು ಹೊರಟೆವು. ನಬಿ(ಸ) ಅವನನ್ನು ನೋಡಿದಾಗ, ಇವನು ಈ ಸಮುದಾಯದ ಫಿರ್‌ಔನ್ ಆಗಿದ್ದನು ಎಂದು ಹೇಳಿದರು. ಮತ್ತೊಂದು ವರದಿಯಲ್ಲಿದೆ: ಅಬೂಜಹಲ್‌ನ ಸಾವಿನ ಶುಭಸುದ್ದಿ ಬಂದ ದಿನ ರಸೂಲುಲ್ಲಾಹ್(ಸ) ಎರಡು ರಕಅತ್ ನಮಾಝ್ ಅನುಷ್ಠಿಸಿದರು.

ಇದರ ಹೆಚ್ಚಿನ ವಿವರಣೆ ಒಂದು ವರದಿಯಲ್ಲಿ ಹೀಗೆ ಸಿಗುತ್ತದೆ. ಅಬೂ ಇಸ್‌ಹಾಕ್(ರ) ವಿವರಿಸುತ್ತಾರೆ: ಬದ್ರ್ ದಿನ ರಸೂಲುಲ್ಲಾಹ್(ಸ)ರ ಬಳಿ ಅಬೂಜಹಲ್‌ನ ಹತ್ಯೆಯ ಶುಭಸುದ್ದಿ ತಂದವನು ಬಂದಾಗ, ನಬಿ(ಸ) ಅವನೊಡನೆ ಮೂರು ಬಾರಿ, ಯಾರ ಹೊರತು ಬೇರೆ ಆರಾಧ್ಯರಿಲ್ಲವೋ ಆ ಅಲ್ಲಾಹನ ಆಣೆ ಇಟ್ಟು ಕೇಳಿದರು: ನೀನು ನಿಜವಾಗಿಯೂ ಅವನ ಮೃತದೇಹವನ್ನು ನೋಡಿದ್ದೀಯಾ? ಆತ ನಬಿ(ಸ)ರ ಮುಂದೆ ಪ್ರಮಾಣ ಮಾಡಿದಾಗ, ರಸೂಲುಲ್ಲಾಹ್(ಸ) ಸಾಷ್ಟಾಂಗವೆರಗಿದರು. ಕೆಲವು ವರದಿಗಳ ಪ್ರಕಾರ, ಅವರು ಒಂದಕ್ಕಿಂತ ಹೆಚ್ಚು ಬಾರಿ ಸಾಷ್ಟಾಂಗವೆರಗಿದರು.

(ದಲಾಇಲುನ್ನುಬುವ್ವ, ಅಲ್–ಬೈಹಕಿ, ಸಂಪುಟ 3, ಪುಟ 89; ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2002) (ತಾರೀಖುಲ್ ಖಮೀಸ್, ಸಂಪುಟ 2, ಪುಟ 119; ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2009) (ಮುಸ್ನದ್ ಇಮಾಮ್ ಅಹ್ಮದ್ ಬಿನ್ ಹಂಬಲ್ ಮುಸ್ನದ್ ಅಬ್ದುಲ್ಲಾ ಬಿನ್ ಮಸ್‌ಊದ್ಗ, ಸಂಪುಟ–2, ಪುಟ–166, ಹದೀಸ್–4247, ಆಲಮುಲ್ ಕುತುಬ್ 1998) (ಸುನನ್ ಇಬ್ನೆ ಮಾಜ್ಜ ಕಿತಾಬ್ ಅಖಾಮತಿಸ್ಸಲಾತ್, ಬಾಬ್ ಮಾಜಾಅ ಫಿಸ್ಸಲಾತ್....., ಹದೀಸ್–1391)

ಮಕ್ಕಾ ವಿಜಯದ ಸಂದರ್ಭದಲ್ಲೂ ಅವರ ಕೃತಜ್ಞತೆಯ ವರದಿಗಳು ಸಿಗುತ್ತವೆ.

ಈ ಕುರಿತು ಹಝ್ರತ್ ಇಬ್ನು ಉಮರ್(ರ)ರಿಂದ ವರದಿಯಾಗಿದೆ: ರಸೂಲುಲ್ಲಾಹ್(ಸ) ಮಕ್ಕಾ ವಿಜಯದ ದಿನ ಕಅಬಾದ ಮೆಟ್ಟಿಲುಗಳ ಮೇಲೆ ನಿಂತರು, ನಂತರ ಅಲ್ಲಾಹನ ಪ್ರಶಂಸೆ ಮತ್ತು ಸ್ತುತಿ ಮಾಡಿ ಹೀಗೆ ಹೇಳಿದರು:

**ಅಲ್‌ಹಮ್ದುಲಿಲ್ಲಾಹಿಲ್ಲಝೀ ಸದಕ ವಅದಹೂ ವ ನಸರ ಅಬ್ದಹೂ ವ ಹಝಮಲ್ ಅಹ್‌ಝಾಬ ವಹ್ದಹೂ.**

ಅಂದರೆ, ತನ್ನ ವಾಗ್ದಾನವನ್ನು ಸತ್ಯವಾಗಿಸಿದ, ತನ್ನ ದಾಸನಿಗೆ ಸಹಾಯ ಮಾಡಿದ ಮತ್ತು ಎಲ್ಲ ಸೇನೆಗಳನ್ನು ಒಂಟಿಯಾಗಿ ಹಿಮ್ಮೆಟ್ಟಿಸಿದ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ. (ಸುನನ್ ಅನ್ನಸಾಈ, ಕಿತಾಬುಲ್ ಕಿಸಾಮಹ್, ಬಾಬು ಝಿಕ್ರಿಲ್ ಇಖ್ತಿಲಾಫ್ ಅಲಾ ಖಾಲಿದ್ ಅಲ್–ಖಝಾ, ಹದೀಸ್ 4803)

ಬುಖಾರಿಯ ಒಂದು ವರದಿಯಲ್ಲಿದೆ, ಅಬ್ದುರ್ರಹ್ಮಾನ್ ಬಿನ್ ಅಬೀ ಲೈಲಾ(ರ) ವಿವರಿಸಿದ್ದಾರೆ: ಹಝ್ರತ್ ಉಮ್ಮೆ ಹಾನಿ(ರ)ರನ್ನು ಹೊರತುಪಡಿಸಿ, ಬೇರೆ ಯಾರೂ ನಬಿ(ಸ) ಝುಹಾ ನಮಾಝ್ ನಿರ್ವಹಿಸಿದನ್ನು ನೋಡಿದ್ದೇವೆಂದು ನಮ್ಮೊಡನೆ ಹೇಳಿಲ್ಲ. ಝುಹಾ ನಮಾಝ್ ಬಗ್ಗೆ ಸಿಗುವ ವರದಿಗಳಲ್ಲೂ, ನಮಗೆ ಹಝ್ರತ್ ಉಮ್ಮೆ ಹಾನಿ(ರ)ರ ಒಂದು ವರದಿಯನ್ನು ಹೊರತುಪಡಿಸಿ ಬೇರೆ ಯಾವ ವರದಿಯೂ ಸಿಗುವುದಿಲ್ಲ. ಆ ವರದಿ ಹೀಗಿದೆ, ಅವರು ವಿವರಿಸುತ್ತಾರೆ: ಮಕ್ಕಾ ವಿಜಯದ ದಿನ ನಬಿ(ಸ) ನನ್ನ ಮನೆಗೆ ಬಂದರು. ಅವರು ಸ್ನಾನ ಮಾಡಿ ಎಂಟು ರಕಅತ್ ನಮಾಝ್ ನಿರ್ವಹಿಸಿದರು. ಅವರು ಹೇಳುತ್ತಾರೆ: ನಾನು ಅದಕ್ಕಿಂತ ಹಗುರವಾದ ನಮಾಝನ್ನು ಎಂದಿಗೂ ನೋಡಿರಲಿಲ್ಲ. ಬಹಳ ಹಗುರವಾದ ನಮಾಝ್ ಆಗಿತ್ತು, ಆದರೂ ಅವರು ಎಂಟು ರಕಅತ್ ನಿರ್ವಹಿಸಿದರು. ಆದರೆ ಅವರು ಸಂಪೂರ್ಣವಾಗಿ ರುಕೂಅ್

ಮತ್ತು ಸಜ್ದಾ ಮಾಡುತ್ತಿದ್ದರು. ಬೇಗ-ಬೇಗನೆ ಅಲ್ಲ, ಅವರ ಹಗುರವಾದ ನಮಾಝ್ ಕೂಡ ನಮ್ಮ ದೀರ್ಘ ನಮಾಝ್‌ಗಳಂತೆಯೇ ಇತ್ತು. (ಸಹೀಹ್ ಅಲ್-ಬುಖಾರಿ, ಕಿತಾಬುತ್ತಹಜ್ಜುದ್, ಬಾಬು ಸಲಾತಿದ್-ದುಹಾ ಫಿಸ್ಸಫರ್, ಹದೀಸ್ 1176)

ಒಬ್ಬ ಜೀವನ ಚರಿತ್ರೆಕಾರನು ಈ ಘಟನೆಯನ್ನು ಈ ಶೀರ್ಷಿಕೆಯಡಿ ವಿವರಿಸಿದ್ದಾನೆ: ರಸೂಲುಲ್ಲಾಹ್(ಸ), ಆ ದಿನ ಅಲ್ಲಾಹನು ಅವರಿಗೆ ದಯಪಾಲಿಸಿದ್ದಕ್ಕಾಗಿ ಕೃತಜ್ಞತೆಯಾಗಿ ಎಂಟು ರಕಅತ್‌ಗಳನ್ನು ನಿರ್ವಹಿಸಿದರು.

(ದಲಾಇಲುನ್ನುಬುವ್ವ, ಅಲ್-ಬೈಹಕಿ, ಸಂಪುಟ 5, ಪುಟ 80)

ಹಝ್ರತ್ ಅನಸ್(ರ)ರಿಂದ ವರದಿಯಾಗಿದೆ: ನಬಿ(ಸ) ಮಕ್ಕಾ ನಗರವನ್ನು ಪ್ರವೇಶಿಸಿದಾಗ, ಜನರು ಅವರ ದರ್ಶನಕ್ಕಾಗಿ ಬಂದರು. ವಿನಯ ಮತ್ತು ಕೃತಜ್ಞತೆಯ ಭಾವನೆಗಳಿಂದಾಗಿ ನಬಿ(ಸ)ರ ತಲೆ ಒಂಟೆಯ ಜೀನನ್ನು ಸ್ಪರ್ಶಿಸುತ್ತಿತ್ತು. ನಬಿ(ಸ) ಜನರ ನಡುವೆ ಇದ್ದರು, ನಬಿ(ಸ) ಹೇಳಿದರು: ಅಲ್ಲಾಹುಮ್ಮ ಇನ್ನಲ್ ಐಶ ಐಶುಲ್ ಆಖಿರಾ. ಅಂದರೆ, ಹೇ ಅಲ್ಲಾಹ್, ನಿಜವಾದ ಜೀವನವು ಪರಲೋಕದ ಜೀವನವೇ ಆಗಿದೆ.
(ಸುಬುಲುಲ್ ಹುದಾ ವರ್ರಶಾದ್, ಸಂಪುಟ-5, ಪುಟ-226)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ದೇವನ ವಿಶೇಷ ದಾಸರಿಗೆ ನೀಡಲಾಗುವ ಈ ಉನ್ನತಿಯು ವಿನಯದ ರೂಪದಲ್ಲಿರುತ್ತದೆ ಮತ್ತು ಶೈತಾನನ ಉನ್ನತಿಯು ಅಹಂಕಾರದಿಂದ ಕೂಡಿರುತ್ತದೆ. ನೋಡಿ, ನಮ್ಮ ನಾಯಕರಾದ ನಬಿ(ಸ) ಮಕ್ಕಾವನ್ನು ಜಯಿಸಿದಾಗ, ಯಾವ ರೀತಿಯಲ್ಲಿ ತಮ್ಮ ತಲೆಯನ್ನು ಬಾಗಿಸಿದರು ಮತ್ತು ಸಜ್ದಾ ಮಾಡಿದರು ಎಂದರೆ, ಅದೇ ಮಕ್ಕಾದಲ್ಲಿ ಅವರ ಮೇಲೆ ಎಲ್ಲ ರೀತಿಯ ವಿರೋಧ ಮತ್ತು ಕಿರುಕುಳ ನಡೆಯುತ್ತಿದ್ದ ಕಷ್ಟದ ದಿನಗಳಲ್ಲೂ ಅವರು ಹಾಗೆಯೇ ತಲೆ ಬಾಗಿಸುತ್ತಿದ್ದರು ಮತ್ತು ಸಜ್ದಾ ಮಾಡುತ್ತಿದ್ದರು. 'ನಾನು ಇಲ್ಲಿಂದ ಯಾವ ಸ್ಥಿತಿಯಲ್ಲಿ ಹೋಗಿದ್ದೆ ಮತ್ತು ಈಗ ಯಾವ ಸ್ಥಿತಿಯಲ್ಲಿ ಬಂದಿದ್ದೇನೆ' ಎಂಬುದನ್ನು ನೋಡಿದಾಗ, ಅವರ ಹೃದಯವು ದೇವನ ಕೃತಜ್ಞತೆಯಿಂದ ತುಂಬಿಹೋಯಿತು ಮತ್ತು ಅವರು ಸಜ್ದಾ ಮಾಡಿದರು. ಅವರ ಪ್ರಾರ್ಥನೆಯ ಉಲ್ಲೇಖವು ಸಹೀಹ್ ಮುಸ್ಲಿಮಿನ ಒಂದು ವರದಿಯಲ್ಲಿ ಸಿಗುತ್ತದೆ. (ಮಲ್ಫೂಝಾತ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಸಂಪುಟ 3, ಪುಟ 260, 2022 ಆವೃತ್ತಿ)

ಹಜ್ಜತುಲ್ ವಿದಾ ಸಂದರ್ಭದಲ್ಲಿ ನಬಿ(ಸ) ಸಫಾ ಮತ್ತು ಮರ್ವಾ ನಡುವೆ ಪ್ರದಕ್ಷಿಣೆ ಮಾಡಲು ಉದ್ದೇಶಿಸಿದಾಗ, ಅವರು ಸಫಾದಿಂದ ಪ್ರಾರಂಭಿಸಿದರು ಮತ್ತು ಅದರ ಮೇಲೆ ಹತ್ತಿದರು, ಎಷ್ಟರಮಟ್ಟಿಗೆ ಎಂದರೆ ಅವರು ಕಅಬಾವನ್ನು ನೋಡಿದರು ಮತ್ತು ಕಿಬ್ಲಾದ ಕಡೆಗೆ ಮುಖ ಮಾಡಿ ಅಲ್ಲಾಹನ ಏಕತ್ವ (ತೌಹೀದ್) ಮತ್ತು ಅವನ ಹಿರಿಮೆಯನ್ನು ಸಾರಿದರು ಮತ್ತು ಹೀಗೆ ಹೇಳಿದರು: ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ. ಅವನು ಏಕನು, ಅವನಿಗೆ ಯಾರೂ ಪಾಲುದಾರರಿಲ್ಲ. ಸಾಮ್ರಾಜ್ಯವು ಅವನದೇ, ಪ್ರಶಂಸೆಯೂ ಅವನಿಗೇ. ಅವನು ಪ್ರತಿಯೊಂದು ವಸ್ತುವಿನ ಮೇಲೂ ಶಕ್ತನಾಗಿದ್ದಾನೆ. ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ. ಅವನು ಏಕನು, ಅವನು ತನ್ನ ವಾಗ್ದಾನವನ್ನು ಪೂರೈಸಿದನು, ತನ್ನ ದಾಸನಿಗೆ ಸಹಾಯ ಮಾಡಿದನು ಮತ್ತು ಸೇನೆಗಳನ್ನು ಒಂಟಿಯಾಗಿ ಹಿಮ್ಮೆಟ್ಟಿಸಿದನು. ನಂತರ ಇದರ ನಡುವೆ ಅವರು ಪ್ರಾರ್ಥಿಸಿದರು. ಪ್ರಾರ್ಥನೆಯ ಸ್ಥಿತಿಯಲ್ಲಿ ಅವರು ಮೂರು ಬಾರಿ ಇದೇ ರೀತಿ ಮಾಡಿದರು. (ಸಹೀಹ್ ಮುಸ್ಲಿಂ, ಕಿತಾಬುಲ್ ಹಜ್, ಬಾಬು ಹಜ್ಜತಿನ್ನಬಿಯ್ಯಿ, ಹದೀಸ್ 2123)

ಹಝ್ರತ್ ಅಲಿ(ರ) ಯೆಮನ್‌ನಿಂದ ಹಮ್ದಾನ್ ಬುಡಕಟ್ಟಿನ ಬಗ್ಗೆ ಮಾಹಿತಿ ನೀಡಿದ ಕುರಿತು ಒಂದು ವರದಿಯಿದೆ.

ಹಝ್ರತ್ ಬರಾ ಬಿನ್ ಆಝಿಬ್(ರ) ವಿವರಿಸುತ್ತಾರೆ: ಹಿಜ್ರಿ ಹತ್ತರಲ್ಲಿ ರಸೂಲುಲ್ಲಾಹ್(ಸ) ಹಝ್ರತ್ ಅಲಿ(ರ)ರನ್ನು ಯೆಮನ್‌ಗೆ ಕಳುಹಿಸಿದಾಗ ಮತ್ತು ಹಮ್ದಾನ್ ಕೋಮಿನ ಎಲ್ಲರೂ ಇಸ್ಲಾಮ್ ಸ್ವೀಕರಿಸಿದಾಗ, ಹಝ್ರತ್ ಅಲಿ(ರ) ಇಸ್ಲಾಮ್ ಸ್ವೀಕರಿಸಿದ ಸುದ್ದಿಯನ್ನು ಪತ್ರದ ಮೂಲಕ ರಸೂಲುಲ್ಲಾಹ್(ಸ)ರಿಗೆ ತಿಳಿಸಿದರು. ರಸೂಲುಲ್ಲಾಹ್(ಸ) ಆ ಪತ್ರವನ್ನು ಓದಿದಾಗ, ಸಜ್ದಾ ಮಾಡಿದರು ಮತ್ತು ಹಮ್ದಾನ್ ಮೇಲೆ ಶಾಂತಿ ಇರಲಿ, ಹಮ್ದಾನ್ ಮೇಲೆ ಶಾಂತಿ ಇರಲಿ ಎಂದು ಹೇಳಿದರು. ಎರಡು ಬಾರಿ ಹೀಗೆ ಹೇಳಿದರು. (ಶರಹುಝ್-ಝುರ್ಖಾನಿ, ಸಂಪುಟ 4, ಪುಟ 140; ಸುಬುಲುಲ್ ಹುದಾ ವರ್ರಶಾದ್, ಸಂಪುಟ 8, ಪುಟ 205)

ಹಝ್ರತ್ ಪೈಗಂಬರ್(ಸ)ರ ಕೃತಜ್ಞತೆಯ ಸಜ್ದಾಗಳ ಕುರಿತು ಹೆಚ್ಚಿನ ವಿವರಗಳು ಈ ರೀತಿ ಸಿಗುತ್ತವೆ.

ಹಝ್ರತ್ ಅಬೂ ಬಕ್ರಾ(ರ)ರಿಂದ ವರದಿಯಾಗಿದೆ: ನಬಿ(ಸ)ರ ಬಳಿ ಏನಾದರೂ ಸಂತೋಷದ ಸುದ್ದಿ ಅಥವಾ ಅವರಿಗೆ ಸಂತೋಷ ತರುವಂತಹ ವಿಷಯ ಬಂದಾಗ, ಅವರು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಾ ಸಜ್ದಾದಲ್ಲಿ ಬೀಳುತ್ತಿದ್ದರು. (ಸುನನ್ ಇಬ್ನ್ ಮಾಜಹ್, ಕಿತಾಬು ಇಕಾಮತಿಸ್ಸಲಾತ್, ಹದೀಸ್ 1394)

ಅದೇ ರೀತಿ ಹಝ್ರತ್ ಅನಸ್ ಬಿನ್ ಮಾಲಿಕ್(ರ)ರಿಂದ ಒಂದು ವರದಿಯಿದೆ: ನಬಿ(ಸ)ರಿಗೆ ಒಂದು ವಿಷಯದ ಬಗ್ಗೆ ಶುಭಸುದ್ದಿ ನೀಡಲಾದಾಗ, ಅವರು ಕೃತಜ್ಞತೆ ಸಲ್ಲಿಸುತ್ತಾ ಸಜ್ದಾದಲ್ಲಿ ಬಿದ್ದರು. (ಸುನನ್ ಇಬ್ನ್ ಮಾಜಹ್, ಹದೀಸ್ 1392)

ಸತ್ಯವಿಶ್ವಾಸಿಗಳು ನಬಿ(ಸ)ರ ಮೇಲೆ ದರೂದ್ ಕಳುಹಿಸುವ ಕುರಿತು ಅಲ್ಲಾಹನು ನೀಡಿದ ಶುಭಸುದ್ದಿ ಮತ್ತು ಅದಕ್ಕೆ ಅವರು ವ್ಯಕ್ತಪಡಿಸಿದ ಕೃತಜ್ಞತೆಯ ಉಲ್ಲೇಖವು ಒಂದು ವರದಿಯಲ್ಲಿ ಹೀಗೆ ಸಿಗುತ್ತದೆ.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಹೊರಬಂದರು ಮತ್ತು ತಮ್ಮ ಸದಖದ ಸ್ಥಳದ ಕಡೆಗೆ ಹೋದರು, ನಂತರ ಒಳಗೆ ಹೋಗಿ ಕಿಬ್ಲಾ ಕಡೆಗೆ ಮುಖ ಮಾಡಿ ಸಜ್ದಾ ಮಾಡಿದರು. ಸಜ್ದಾವನ್ನು ಎಷ್ಟೊಂದು ದೀರ್ಘಗೊಳಿಸಿದರೆಂದರೆ, ಅಲ್ಲಾಹನು ಇದೇ ಸ್ಥಿತಿಯಲ್ಲಿ ಅವರ ಪ್ರಾಣವನ್ನು ತೆಗೆದುಕೊಂಡಿದ್ದಾನೇನೋ ಎಂದು ನನಗೆ ಅನಿಸಿತು. ನಾನು ಅವರ ಹತ್ತಿರ ಹೋಗಿ ಕುಳಿತಾಗ, ಅವರು ತಲೆ ಎತ್ತಿ, ಯಾರಿದು? ಎಂದು ಕೇಳಿದರು. 'ಅಬ್ದುರ್ರಹ್ಮಾನ್' ಎಂದು ನಾನು ಹೇಳಿದೆ. ಏನು ವಿಷಯ? ಎಂದು ಕೇಳಿದರು. ನಾನು ಹೇಳಿದೆ: ಯಾ ರಸೂಲಲ್ಲಾಹ್, ನೀವು ಎಷ್ಟೊಂದು ದೀರ್ಘವಾದ ಸಜ್ದಾ ಮಾಡಿದಿರೆಂದರೆ, ಅಲ್ಲಾಹನು ಇದೇ ಸ್ಥಿತಿಯಲ್ಲಿ ನಿಮ್ಮ ಪ್ರಾಣ ತೆಗೆದುಕೊಂಡಿದ್ದಾನೇನೋ ಎಂದು ನನಗೆ ಭಯವಾಯಿತು. ಆಗ ನಬಿ(ಸ) ಹೇಳಿದರು: ಜಿಬ್ರೀಲ್ ನನ್ನ ಬಳಿ ಬಂದಿದ್ದರು ಮತ್ತು ಹೀಗೆ ಸುವಾರ್ತೆ ತಿಳಿಸಿದರು: 'ಯಾರು ನಿಮ್ಮ ಮೇಲೆ ದುರೂದ್ ಕಳುಹಿಸುತ್ತಾನೋ ನಾನು ಅವನ ಮೇಲೆ ನನ್ನ ಕರುಣೆ ಸುರಿಸುತ್ತೇನೆ ಮತ್ತು ಯಾರು ನಿಮ್ಮ ಮೇಲೆ ಸಲಾಮ್ ಕಳುಹಿಸುತ್ತಾನೋ ನಾನು ಅವನ ಮೇಲೆ ಶಾಂತಿ ಕಳುಹಿಸುತ್ತೇನೆ ಎಂದು ಅಲ್ಲಾಹನು ಹೇಳುತ್ತಾನೆ.' ಇದಕ್ಕಾಗಿ ನಾನು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಲು ಸಜ್ದ ಮಾಡಿದ್ದೆ. ಈ ಸಜ್ದಾ ಕೃತಜ್ಞತೆಯ ರೂಪದಲ್ಲಿತ್ತು, ಹಾಗಾಗಿ ಇಷ್ಟು ದೀರ್ಘವಾಗಿತ್ತು. ಹಝ್ರತ್ ಅಬೂಬಕರ್(ರ) ವಿವರಿಸುತ್ತಾರೆ: ಶತ್ರುಗಳ ಮೇಲೆ ತಮ್ಮ ಸೇನೆಯ ವಿಜಯದ ಶುಭಸುದ್ದಿ ತಂದವನು ಬಂದಾಗ, ನಬಿ(ಸ) ಅವರ ತಲೆ ಹಝ್ರತ್ ಆಯಿಶಾ(ರ)ರ ಮಡಿಲಲ್ಲಿತ್ತು ಎಂಬುದನ್ನು ಅವರು ನೋಡಿದರು. ನಬಿ(ಸ) ಎದ್ದು ನಿಂತು ಸಜ್ದಾ ಮಾಡಿದರು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಮುಸ್ನದು ಅಬ್ದುರ್ರಹ್ಮಾನ್ ಬಿನ್ ಔಫ್, ಸಂಪುಟ 1, ಪುಟ 512-513, ಹದೀಸ್ 1664)

ಒಂದು ವರದಿಯಲ್ಲಿದೆ: ಅಮ್ರ್ ಬಿನ್ ಶುಐಬ್(ರ) ತಮ್ಮ ತಂದೆಯಿಂದ ಮತ್ತು ಅವರು ತಮ್ಮ ತಾತರಿಂದ ವರದಿ ಮಾಡಿದ್ದಾರೆ, ಅವರು ರಸೂಲುಲ್ಲಾಹ್(ಸ) ಹೀಗೆ ಹೇಳುತ್ತಿರುವುದನ್ನು ಕೇಳಿದರು: 'ಯಾವ ವ್ಯಕ್ತಿಯಲ್ಲಿ ಎರಡು ಗುಣಗಳು ಕಂಡುಬರುತ್ತವೆಯೋ, ಅಲ್ಲಾಹನು ಅವನನ್ನು ತಾಳ್ಮೆಯುಳ್ಳವನು ಮತ್ತು ಕೃತಜ್ಞನು ಎಂದು ಬರೆಯುತ್ತಾನೆ. ಮತ್ತು ಯಾರಲ್ಲಿ ಅವೆರಡೂ ಇಲ್ಲವೋ, ಅಲ್ಲಾಹನು ಅವನನ್ನು ತಾಳ್ಮೆಯುಳ್ಳವನೆಂದಾಗಲೀ ಅಥವಾ ಕೃತಜ್ಞನೆಂದಾಗಲೀ ಬರೆಯುವುದಿಲ್ಲ. ಮೊದಲನೆಯದು: ತನ್ನ ಧರ್ಮದ ವಿಷಯದಲ್ಲಿ ತನಗಿಂತ ಉನ್ನತ ಮಟ್ಟದಲ್ಲಿರುವವನ ಕಡೆಗೆ ನೋಡಿ ಅವನನ್ನು ಅನುಸರಿಸುವುದು. ಧರ್ಮದ ವಿಷಯದಲ್ಲಿ ತನಗಿಂತ ಮೇಲಿರುವವನ ಕಡೆಗೆ ನೋಡಿ, ನಾನು ಅವನನ್ನು ಅನುಸರಿಸಬೇಕು, ಅವನ ಮಟ್ಟಕ್ಕೆ ತಲುಪಬೇಕು ಎಂದುಕೊಂಡರೆ, ಅವನು ತಾಳ್ಮೆಯುಳ್ಳವನು ಮತ್ತು ಕೃತಜ್ಞನಾಗಿರುತ್ತಾನೆ. ಎರಡನೆಯ ಷರತ್ತು: ತನ್ನ ಲೌಕಿಕ ವಿಷಯದಲ್ಲಿ ತನಗಿಂತ ಕೀಳು ಮಟ್ಟದಲ್ಲಿರುವವನ ಕಡೆಗೆ ನೋಡಿ, ನಂತರ ಅಲ್ಲಾಹನಿಗೆ ಪ್ರಶಂಸೆ ಸಲ್ಲಿಸುವುದು. ಲೌಕಿಕ ವಿಷಯಗಳಲ್ಲಿ ತನಗಿಂತ ಕೆಳಗಿರುವವರನ್ನು ನೋಡಿ, ನಂತರ ಅಲ್ಲಾಹನು ನನಗೆ ನೀಡಿದ್ದಾನೆ ಎಂದು ಅಲ್ಲಾಹನ ಪ್ರಶಂಸೆ ಮತ್ತು ಕೃತಜ್ಞತೆ ಸಲ್ಲಿಸುವುದು. ಅಲ್ಲಾಹನು ಅವನಿಗೆ ಯಾವ ಅನುಗ್ರಹದ ಮೂಲಕ ಆ ವ್ಯಕ್ತಿಗಿಂತ ಶ್ರೇಷ್ಠತೆಯನ್ನು ನೀಡಿದ್ದಾನೋ, ಅದಕ್ಕಾಗಿ ಕೃತಜ್ಞತೆ ಸಲ್ಲಿಸಿದರೆ, ಅಲ್ಲಾಹನು ಅವನನ್ನು ತಾಳ್ಮೆಯುಳ್ಳವನು ಮತ್ತು ಕೃತಜ್ಞನೆಂದು ಬರೆಯುತ್ತಾನೆ. ಯಾವ ವ್ಯಕ್ತಿ ತನ್ನ ಧರ್ಮದಲ್ಲಿ ತನಗಿಂತ ಕೀಳು ಮಟ್ಟದಲ್ಲಿರುವವನ ಕಡೆಗೆ ನೋಡುತ್ತಾನೋ ಮತ್ತು ತನ್ನ ಲೌಕಿಕ ವಿಷಯದಲ್ಲಿ ತನಗಿಂತ ಮೇಲಿರುವವನ ಕಡೆಗೆ ನೋಡುತ್ತಾನೋ, ನಂತರ ತನಗೆ ಸಿಗದಿದ್ದರ ಬಗ್ಗೆ ವಿಷಾದಿಸುತ್ತಾನೋ, ಅಲ್ಲಾಹನು ಅವನನ್ನು ತಾಳ್ಮೆಯುಳ್ಳವನೆಂದೂ ಬರೆಯುವುದಿಲ್ಲ, ಕೃತಜ್ಞನೆಂದೂ ಬರೆಯುವುದಿಲ್ಲ. (ಕಿತಾಬುಶ್ಶುಕ್ರ್, ಇಬ್ನ್ ಅಬಿದ್-ದುನ್ಯಾ, ಪುಟ-60)

ಅದೇ ರೀತಿ ಹಝ್ರತ್ ಅಬೂಹುರೈರಾ(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಹೇಳಿದರು: ನಿಮಗಿಂತ ಕೆಳಗಿರುವವರ ಕಡೆಗೆ ನೋಡು, ನಿಮಗಿಂತ ಮೇಲಿರುವವರ ಕಡೆಗೆ ನೋಡಬೇಡಿ. ನೀವು ಅಲ್ಲಾಹನ ಅನುಗ್ರಹವನ್ನು ತುಚ್ಛವಾಗಿ ಕಾಣದಿರಲು, ಅಂದರೆ ಲೌಕಿಕ ದೃಷ್ಟಿಯಿಂದ ಕೆಳಗಿರುವವರ ಕಡೆಗೆ ನೋಡಿ, ನಂತರ ಅಲ್ಲಾಹನು ನನಗೆ ನೀಡಿದ್ದಾನೆಂದು ಅಲ್ಲಾಹನಿಗೆ

ಕೃತಜ್ಞತೆ ಸಲ್ಲಿಸಲು ಇದು ಹೆಚ್ಚು ಸೂಕ್ತವಾಗಿದೆ. (ಸಹೀಹ್ ಮುಸ್ಲಿಂ, ಕಿತಾಬುಝ್ಝ್–ಝುಹ್ದಿ ವರ್ರಖಾಇಕ್, ಹದೀಸ್ 5250)

ಹಝ್ರತ್ ಇಬ್ನು ಅಬ್ಬಾಸ್(ರ)ರಿಂದ ವರದಿಯಾಗಿದೆ, ರಸೂಲುಲ್ಲಾಹ್(ಸ) ಹೇಳಿದರು: ನಾಲ್ಕು ವಸ್ತುಗಳನ್ನು ಯಾರಿಗೆ ನೀಡಲಾಗಿದೆಯೋ, ಅವನಿಗೆ ಇಹಲೋಕ ಮತ್ತು ಪರಲೋಕದ ಒಳಿತನ್ನು ನೀಡಲಾಯಿತು. ಕೃತಜ್ಞತೆಯುಳ್ಳ ಹೃದಯ, ದೇವಸ್ಮರಣೆ ಮಾಡುವ ನಾಲಿಗೆ, ಪರೀಕ್ಷೆಯ ಸಮಯದಲ್ಲಿ ತಾಳ್ಮೆ ವಹಿಸುವ ದೇಹ, ಮತ್ತು ತನ್ನ ಗೌರವ, ಪಾತಿವ್ರತ್ಯದ ವಿಷಯದಲ್ಲಿಯೂ ಹಾಗೂ ಪತಿಯ ವಿಷಯದಲ್ಲಿಯೂ ಅವನಿಗೆ ದ್ರೋಹ ಬಗೆಯದ ಪತ್ನಿ. ಈ ನಾಲ್ಕು ವಸ್ತುಗಳು ಇದ್ದರೆ, ಒಳಿತನ್ನು ನೀಡಲಾಯಿತು. (ಕಿತಾಬುಶ್ಶುಕ್ರ್, ಇಬ್ನ್ ಅಬಿದ್–ದುನ್ಯಾ, ಪುಟ 17)

ಹಝ್ರತ್ ಅಬೂಹುರೈರಾ(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಹೇಳಿದರು: ಹೇ ಅಬೂಹುರೈರಾ, ದೇವಭಯವುಳ್ಳವನಾಗು, ನೀನು ಎಲ್ಲರಿಗಿಂತ ಹೆಚ್ಚು ಆರಾಧಿಸುವವನಾಗುವೆ. ತೃಪ್ತನಾಗು, ನೀನು ಎಲ್ಲರಿಗಿಂತ ಹೆಚ್ಚು ಕೃತಜ್ಞನಾಗುವೆ. ಹಾಗಾಗಿ ತೃಪ್ತಿಯು ಕೃತಜ್ಞತೆಯತ್ತ ಕೊಂಡೊಯ್ಯುತ್ತದೆ. ನಿನಗಾಗಿ ಏನನ್ನು ಇಷ್ಟಪಡುತ್ತೀಯೋ ಅದನ್ನೇ ಜನರಿಗಾಗಿಯೂ ಇಷ್ಟಪಡು, ಆಗ ನೀನು ಸತ್ಯವಿಶ್ವಾಸಿಯಾಗುವೆ. ನಿನ್ನ ನೆರೆಯವನೊಂದಿಗೆ ಒಳ್ಳೆಯ ನೆರೆಹೊರೆಯವನಾಗಿರು, ನೀನು ಮುಸ್ಲಿಮನಾಗುವೆ. ಕಡಿಮೆ ನಗು, ಏಕೆಂದರೆ ಅತಿಯಾದ ನಗು ಹೃದಯವನ್ನು ಸಾಯಿಸುತ್ತದೆ. (ಸುನನ್ ಇಬ್ನ್ ಮಾಜಹ್, ಕಿತಾಬುಝ್ಝ್–ಝುಹ್ದ್, ಬಾಬುಲ್ ವರಅ ವತ್ತಕ್ವಾ, ಹದೀಸ್ 4217)

ಅಂದರೆ, ಮನುಷ್ಯನು ಅಲ್ಲಾಹನ ಸನ್ನಿಧಿಯಲ್ಲಿ ಹೆಚ್ಚು ತಲೆಬಾಗುವವನಾಗಿರಬೇಕು, ಸದಾ ಪ್ರಾರ್ಥನೆಗಳತ್ತ ಗಮನಹರಿಸಿರಬೇಕು, ಸದಾ ತಮಾಷೆ, ಹಾಸ್ಯಗಳಲ್ಲಿ ತೊಡಗಿರಬಾರದು. ಅಲ್ಲಾಹನು ನಮಗೆ ನಬಿ(ಸ)ರ ಉಪದೇಶವನ್ನು ಪಾಲಿಸುವವರನ್ನಾಗಿ ಮಾಡಲಿ.

ಹಝ್ರತ್ ಪೈಗಂಬರ್(ಸ)ರ ಕೃತಜ್ಞತೆ ಮತ್ತು ದೇವಸ್ಮರಣೆಯ ಚಿತ್ರಣವನ್ನು ನೀಡುತ್ತಾ ಹಝ್ರತ್ ಆಯಿಶಾ(ರ) ವಿವರಿಸುತ್ತಾರೆ: ನಬಿ(ಸ) ಯಾವಾಗಲೂ ದೇವಸ್ಮರಣೆ ಮಾಡುತ್ತಿದ್ದರು. ಹೀಗೆ ನಬಿ(ಸ) ತಮ್ಮ ಉಮ್ಮತ್‌ನ ಮುಂದೆ ತಮ್ಮ ಮಾದರಿಯ ಅತ್ಯುನ್ನತ ಗುಣಮಟ್ಟವನ್ನು ಸ್ಥಾಪಿಸಿದರು ಮತ್ತು ನಮಗೆ ಉಪದೇಶಿಸಿದರು. ಅಲ್ಲಾಹನು ಇದನ್ನು ಪಾಲಿಸುವ ಸೌಭಾಗ್ಯವನ್ನು ನಮಗೆ ನೀಡಲಿ. (ಸಹೀಹ್ ಮುಸ್ಲಿಂ, ಕಿತಾಬುಲ್ ಹೈಝ್, ಬಾಬು ಝಿಕ್ರಿಲ್ಲಾಹಿ ತಆಲಾ ಫೀ ಹಾಲಿಲ್ ಜನಾಬತಿ ವಘೈರಿಹಾ, ಹದೀಸ್ 550)

ಮುಂದಿನ ಶುಕ್ರವಾರ ಇನ್‌ಶಾ ಅಲ್ಲಾಹ್ ಜಮಾಅತ್ ಅಹ್ಮದಿಯಾ ಬ್ರಿಟನ್‌ನ ಜಲ್ಸ ಸಾಲಾನ ಕೂಡ ಪ್ರಾರಂಭವಾಗಲಿದೆ. ದುಆ ಮಾಡಿರಿ, ಅಲ್ಲಾಹನು ಅದನ್ನು ಪ್ರತಿಯೊಂದು ರೀತಿಯಲ್ಲೂ ಅನುಗ್ರಹೀತಗೊಳಿಸಲಿ. ಪ್ರತಿಯೊಬ್ಬರನ್ನೂ ಪ್ರತಿಯೊಂದು ರೀತಿಯಲ್ಲೂ ತನ್ನ ಸಂರಕ್ಷಣೆಯಲ್ಲಿರಿಸಲಿ. ಹವಾಮಾನದ ತೀವ್ರತೆ, ಅಂದರೆ ಈ ದಿನಗಳಲ್ಲಿರುವ ಬಿಸಿಲಿನಿಂದಾಗಿ ಕೆಲವು ಅಪಾಯಗಳೂ ಇವೆ. ಎಲ್ಲ ರೀತಿಯ ಕೆಟ್ಟ ಪರಿಣಾಮಗಳಿಂದ ಅಲ್ಲಾಹನು ರಕ್ಷಿಸಲಿ. ಅದೇ ರೀತಿ ಡ್ಯೂಟಿ ಮಾಡುವ ಕಾರ್ಯಕರ್ತರಿಗೆ ಕೆಲವೊಮ್ಮೆ ಬಿಸಿಲಿನಲ್ಲಿ ನಿಂತು ಡ್ಯೂಟಿ ಮಾಡಬೇಕಾಗುತ್ತದೆ, ಕಠಿಣ ಡ್ಯೂಟಿಗಳು ಕೂಡ ಇರುತ್ತವೆ. ಅವರಿಗೂ ಅತ್ಯುತ್ತಮ ರೀತಿಯಲ್ಲಿ ತಮ್ಮ ಡ್ಯೂಟಿಗಳನ್ನು ಪೂರೈಸುವ ಸೌಭಾಗ್ಯವನ್ನು ಕರುಣಿಸಲಿ.

————————*****————————

### *(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)*

ಬರಲಿಲ್ಲ?’ ಎಂದು ಪಶ್ಚಾತ್ತಾಪಪಡುತ್ತಾರೆ. ಅವರು ಆ ಸಮಯದಲ್ಲಿ ಕೇವಲ ಶತ್ರುಗಳು ಅವರಿಗೆ ಕೆಲವು ಮಾತುಗಳನ್ನು ಹೇಳಿದ್ದರಿಂದ ಬಟಾಲಾ ಅಥವಾ ಅಮೃತಸರದಿಂದಲೇ ಹಿಂದಿರುಗಿದರು. ಅವುಗಳನ್ನು ಕೇಳಿದ ನಂತರ ಅವರು ಖಾದಿಯಾನ್‌ಗೆ ಬರುವುದನ್ನು ಇಷ್ಟಪಡಲಿಲ್ಲ. ಅವರು ಆ ಸಮಯದಲ್ಲಿ ಖಾದಿಯಾನ್‌ಗೆ ತಲುಪಿದ್ದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿಗಳಲ್ಲಿ ಸೇರಬಹುದಾಗಿತ್ತು. ನಂತರ ಸರ್ವಶಕ್ತನಾದ ಅಲ್ಲಾಹನ ಇಖ್ಲಾಸ್ (ನಿಷ್ಠೆ)ವನ್ನು ನೋಡಿ ಅವರನ್ನು ಅಹ್ಮದಿಯ್ಯತ್‌ನಲ್ಲಿ ಸೇರಿಸಿದನು; ಆದರೆ ಸಹಾಬಿಯ್ಯತ್‌ನ ಸ್ಥಾನದಿಂದ ಅವರು ವಂಚಿತರಾದರು.”

“ಆದ್ದರಿಂದ, ಜಲ್ಸಾದ ದಿನಗಳಲ್ಲಿ ಕಾಣಿಸಿಕೊಳ್ಳುವ ಮತ್ತೊಂದು ನಿಶಾನೆಯೂ ಇದಾಗಿದೆ: ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರು ಇಲ್ಲಿ ಒಟ್ಟುಗೂಡುತ್ತಾರೆ; ಇಂತಹ ಸಂಗತಿ ಸಂಭವಿಸಬಹುದು ಎಂಬ ಕಲ್ಪನೆಯನ್ನೇ ಹಿಂದೆ ಯಾರೂ ಮಾಡಿರಲಿಲ್ಲ. ಮತ್ತೊಂದು ನಿಶಾನೆಯೆಂದರೆ, ಅಜ್ಞಾನಿಗಳೆಂದು ಪರಿಗಣಿಸಲ್ಪಟ್ಟಿದ್ದ ಜನರು ಈ ಜ್ಞಾನ ಮತ್ತು ಆಧ್ಯಾತ್ಮಿಕತೆಯ ಚಿಲುಮೆಯಿಂದ ಎಂತಹ ಉತ್ಸಾಹದಿಂದ ಕುಡಿಯುತ್ತಾರೆಯೆಂದರೆ, ಇತರ ಜನಾಂಗಗಳ ದಾಹಗೊಂಡವರೂ ಸಹ ಈ ರೀತಿಯಾಗಿ ಕುಡಿಯಲು ಸಾಧ್ಯವಿಲ್ಲ.”

“ಖಾದಿಯಾನ್‌ನ ನಿವಾಸಿಗಳನ್ನು ಅಲ್ಲಾಹ್ ತಆಲಾ ಈ ದಾರ್‌ನ ರಕ್ಷಣೆಗೆ ಒಂದು ಸಾಧನವನ್ನಾಗಿ ಮಾಡಿದ್ದಾನೆ. ಈ ದಾರ್‌ನ ಬರಕತ್‌ಗಾಗಿ ಜನರನ್ನು ಒಟ್ಟುಗೂಡಿಸಿ ಅಲ್ಲಾಹ್ ಅವರನ್ನು ಇಲ್ಲಿಗೆ ಕರೆತರುತ್ತಾನೆ. ಆದ್ದರಿಂದ ಇಲ್ಲಿ ಇರುವ ಜಮಾಅತ್‌ನ ಅಹ್ಬಾಬ್‌ರಿಗೆ ನಾನು ಸಲಹೆ ನೀಡುತ್ತೇನೆ: ಬರುವ ಆ ದಿನಕ್ಕಾಗಿ ಸಿದ್ಧತೆ ಮಾಡಿಕೊಳ್ಳಿರಿ. ಮನೆಗಳಿರುವವರು ತಮ್ಮ ಮನೆಗಳನ್ನು ಅತಿಥಿಗಳಿಗಾಗಿ ಒದಗಿಸಲಿ. ಇದಲ್ಲದೆ, ತಮ್ಮ ದೇಹ–ಶಕ್ತಿ ಮತ್ತು ತಮ್ಮ ಸಮಯವನ್ನೂ ಸೇವೆಗಾಗಿ ಅರ್ಪಿಸಲಿ.”

“ಮತ್ತು ನಿರ್ವಾಹಕರಿಗೆ ನಾನು ಈ ಸಲಹೆ ನೀಡುತ್ತೇನೆ: ನಾನು ನಿರಂತರವಾಗಿ ಹೇಳಿರುವಂತೆ, ಕಾರ್ಯಕರ್ತರು ಸೇವಾ ಕಾರ್ಯಕ್ಕೆ ನಿಯೋಜಿತರಾಗುವ ಮೊದಲು ಅವರಿಗೆ ಆ ಕೆಲಸದ ಅಭ್ಯಾಸವನ್ನು ಮಾಡಿಸಬೇಕು.”

**(ಖುತಬಾತ್–ಎ–ಮಹಮೂದ್, ಸಂಪುಟ 12, ಪುಟ 509–513)**

————————*****————————

## ವಿಶೇಷ ಪ್ರಾರ್ಥನೆಗಳಿಗಾಗಿ ಮನವಿ

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್ಮತುಲ್ಲಾಹ್) ಕಂಡ ಒಂದು ಕನಸಿನ ಆಧಾರದಲ್ಲಿ ಅಮೀರುಲ್ ಮುಅ್‌ಮಿನೀನ್ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಜಮಾಅತ್ ಬಾಂಧವರಿಗೆ ವಿಶೇಷ ಪ್ರಾರ್ಥನೆಗಳನ್ನು ಮಾಡಲು ಮನವಿ ಮಾಡುತ್ತಾ ಹೀಗೆ ಹೇಳಿದರು: ಜಮಾಅತ್ ಬಾಂಧವರು ಈ ಕೆಳಗಿನ ಪ್ರಾರ್ಥನೆಗಳನ್ನು ಮಾಡುತ್ತಾ ಇರುವುದಾದರೆ ಶೈತಾನನು ಎಂದಿಗೂ ಪ್ರವೇಶಿಸಲು ಸಾಧ್ಯವಾಗದಂತಹ ಒಂದು ಸುದೃಢ ಕೋಟೆಯಲ್ಲಿ ಅವರು ಸುರಕ್ಷಿತರಾಗುವರು. ಆ ಕೋಟೆಯ ಗೋಡೆಗಳು ಕಬ್ಬಿಣದ್ದಾಗಿವೆ ಮತ್ತು ಅದು ಆಕಾಶದ ವರೆಗೆ ತಲುಪಿವೆ. ಆದ್ದರಿಂದ ನುಸುಳಿ ಬಂದು ಆಕ್ರಮಣ ಮಾಡಲು ಶೈತಾನನಿಗೆ ಯಾವ ಮಾರ್ಗವೂ ಇರುವುದಿಲ್ಲ.

**ಸುಬ್‌ಹಾನಲ್ಲಾಹಿ ವಬಿಹಮ್ದಿಹಿ ಸುಬ್‌ಹಾನಲ್ಲಾಹಿಲ್ ಅಝೀಮ್ – ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್.**

ಜಮಾಅತಿನ ಪ್ರತಿಯೊಬ್ಬ ಹಿರಿಯ ಸದಸ್ಯರು ದಿನನಿತ್ಯ ಈ ಪ್ರಾರ್ಥನೆಯನ್ನು 200 ಬಾರಿ ಪಠಿಸಬೇಕು.

15 ರಿಂದ 25 ವಯಸ್ಸಿನ ಸದಸ್ಯರು ಇದನ್ನು ದಿನನಿತ್ಯ ಕನಿಷ್ಠ 100 ಬಾರಿ ಪಠಿಸಬೇಕು.

ಮಕ್ಕಳು ಕನಿಷ್ಠ 33 ಬಾರಿ ದಿನನಿತ್ಯ ಇದನ್ನು ಪಠಿಸಬೇಕು.

ಚಿಕ್ಕ ಮಕ್ಕಳಿಗೆ ಹೆತ್ತವರು 3–4 ಬಾರಿ ಹೇಳಿಕೊಡಬೇಕು.

2ನೇ ಪ್ರಾರ್ಥನೆ: ಇಸ್ತಿಗ್‌ಫಾರ್

**ಅಸ್ತಗ್‌ಫಿರುಲ್ಲಾಹ ರಬ್ಬೀ ಮಿನ್ ಕುಲ್ಲಿ ಧಂಬಿನ್ ವ ಅತೂಬು ಇಲೈಹಿ.**

100 ಬಾರಿ ದಿನನಿತ್ಯ ಪಠಿಸಬೇಕು.

ಹುಝೂರ್(ಅಯ್ಯದಹುಲ್ಲಾಹ್) ಹೇಳಿದರು: ನಾನು ಈ ಪ್ರಾರ್ಥನೆಯನ್ನು ಸಹ ಇದರಲ್ಲಿ ಸೇರಿಸುತಿದ್ದೇನೆ.

3ನೇ ಪ್ರಾರ್ಥನೆ:

**ರಬ್ಬಿ ಕುಲ್ಲು ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ**

100 ಬಾರಿ ದಿನನಿತ್ಯ ಪಠಿಸಬೇಕು.

ಹುಝೂರ್(ಅಯ್ಯದಹುಲ್ಲಾಹ್) ಹೇಳಿದರು: “ಇತ್ತೀಚಿನ ದಿನಗಳಲ್ಲಿ ಶೈತಾನನು ನಾನಾ ರೀತಿಯಲ್ಲಿ ಜಮಾಅತಿನ ಮೇಲೂ ಮತ್ತು ಸಾಮೂಹಿಕ ನೆಲೆಯಲ್ಲೂ ನಮ್ಮ ಮೇಲೆ ಆಕ್ರಮಣ ಮಾಡಲು ಹವಣಿಸುತಿದ್ದಾನೆ. ಈ ಲೋಕದಲ್ಲಿ ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲು ಇರುವ ಒಂದೇ ಮಾರ್ಗವೇನೆಂದರೆ, ವಿಶೇಷವಾಗಿ ಪ್ರಾರ್ಥನೆಗಳಿಗೆ ಒತ್ತು ನೀಡುವುದಾಗಿದೆ. ಜಲ್ಸದ ದಿನಗಳಲ್ಲಿ ಮಾತ್ರವಲ್ಲ, ಬದಲಾಗಿ ಯಾವಾಗಲೂ ದುರೂದ್ ಪ್ರಾರ್ಥನೆ, ದೇವಸ್ಮರಣೆ ಮತ್ತು ಮೇಲಿನ ಪ್ರಾರ್ಥನೆಗಳನ್ನು ತಮ್ಮ ಜೀವಿತದ ಭಾಗವನ್ನಾಗಿ ಮಾಡಿಕೊಳ್ಳಬೇಕು ಮತ್ತು ಮಕ್ಕಳು, ಹಿರಿಯರು, ಸ್ತ್ರೀಯರು, ಪುರುಷರು ಪ್ರತಿಯೊಬ್ಬರು ಇದರ ಕಡೆಗೆ ಗಮನ ಕೊಡಬೇಕು. **(ಖುತ್ಬ ಜುಮುಅ 23 ಆಗಸ್ಟ್, 2024)**

## 131ನೇ ಜಲ್ಸಾ ಸಾಲಾನ ಖಾದಿಯಾನ್ 25, 26, 27 ಡಿಸೆಂಬರ್ 2026ರಂದು ಆಯೋಜಿಸಲಾಗುವುದು

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ Cj hÀÄgÀni gÀ ÀgÀÄ 131ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 25, 26 ಮತ್ತು 27ನೇ ಡಿಸೆಂಬರ್ 2026 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ.

**ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಮರ್ಕಝಿಯ ಖಾದಿಯಾನ್)**



# ಖುತ್‌ಬ ಜುಮುಅ

## ಜಲ್ಸಾ ಸಲಾನಾ ಯು.ಕೆ 2026ರ ಸಂದರ್ಭದಲ್ಲಿ ಕಾರ್ಯಕರ್ತರು ಮತ್ತು ಅತಿಥಿಗಳಿಗೆ ಸುವರ್ಣೋಪದೇಶಗಳು

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **24–07–2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಅಲ್ಲಾಹನ ಕೃಪೆಯಿಂದ ಇಂದು ಬ್ರಿಟನಿನ ಜಲ್ಸ ಸಾಲಾನ ಪ್ರಾರಂಭವಾಗುತ್ತಿದೆ. ದೇಶದ ಮೂಲೆ ಮೂಲೆಗಳಿಂದ ಮತ್ತು ಪ್ರಪಂಚದ ವಿವಿಧ ದೇಶಗಳಿಂದ ಅತಿಥಿಗಳು ಇದರಲ್ಲಿ ಪಾಲ್ಗೊಳ್ಳಲು ಬರುತ್ತಿದ್ದಾರೆ ಅಥವಾ ಬಂದಿದ್ದಾರೆ. ಇವರೆಲ್ಲರೂ ಹಝ್ರತ್ ಮಸೀಹ್ ಮೌಊದ್(ಅ)ರ ಅತಿಥಿಗಳಾಗಿದ್ದಾರೆ, ಅವರು ವಿಶೇಷ ಧಾರ್ಮಿಕ ಉದ್ದೇಶಕ್ಕಾಗಿ ಇಲ್ಲಿಗೆ ಬರುತ್ತಿದ್ದಾರೆ; ಹಾಗಾಗಿ ಈ ಅತಿಥಿಗಳ ಸತ್ಕಾರವು ವಿಶೇಷವಾದ ಗೌರವವನ್ನು ಹೊಂದಿರುತ್ತದೆ.

ಅಲ್ಲಾಹನ ಕೃಪೆಯಿಂದ ಲೋಕದ ಪ್ರತಿ ದೇಶದಲ್ಲಿ ಜಲ್ಸ ಸಾಲಾನಗಳು ನಡೆಯುವಾಗ, ಅಲ್ಲಿನ ಮಕ್ಕಳು, ಯುವಕರು, ಪುರುಷರು ಮತ್ತು ಮಹಿಳೆಯರಿಗೆ 'ನಾವು ಜಲ್ಸದ ಅತಿಥಿಗಳ ಸೇವೆ ಮಾಡಬೇಕು' ಎಂಬ ಅರಿವು ಇರುತ್ತದೆ ಮತ್ತು ಅದಕ್ಕಾಗಿ ಎಲ್ಲರೂ ತಮ್ಮನ್ನು ಸ್ವತಃ ಸ್ವಯಂಸೇವಕರಾಗಿ ಸಮರ್ಪಿಸಿಕೊಳ್ಳುತ್ತಾರೆ. ಲೋಕದ ಜನರ ಆದ್ಯತೆಗಳು ಈಗ ಬದಲಾಗಿದ್ದರೂ, ಜಮಾಅತಿನ ನಿಷ್ಠಾವಂತರು ತಮ್ಮನ್ನು ತಾವು ಹಝ್ರತ್ ಮಸೀಹ್ ಮೌಊದ್(ಅ)ರ ಅತಿಥಿಗಳ ಸೇವೆಗಾಗಿ ಸಮರ್ಪಿಸಿಕೊಳ್ಳುತ್ತಿದ್ದಾರೆ. ನಾನು ಹೇಳಿದಂತೆ, ಮಕ್ಕಳಿಂದ ಹಿಡಿದು ವೃದ್ಧರವರೆಗೆ ಮತ್ತು ವಿವಿಧ ಲೌಕಿಕ ಕೆಲಸಗಳಲ್ಲಿ ನಿರತರಾಗಿರುವ ಜನರು ಈ ದಿನಗಳಲ್ಲಿ ತಮ್ಮ ಕೆಲಸಗಳಿಂದ ರಜೆ ಪಡೆದು ಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಳ್ಳುತ್ತಿದ್ದಾರೆ. ಇವರೆಲ್ಲರೂ, ಅಲ್ಲಾಹನು ಅತಿಥಿಗಳ ಸೇವೆ ಮಾಡಲು ಮತ್ತು ಅವರನ್ನು ಗೌರವಿಸಲು ಆಜ್ಞಾಪಿಸಿದ್ದಾನೆ ಎಂಬ ಅರಿವನ್ನು ಹೊಂದಿದ್ದಾರೆ. ಹಝ್ರತ್ ಪೈಗಂಬರ್(ಸ) ತಮ್ಮ ಕಾರ್ಯ ಮತ್ತು ನುಡಿಯ ಮೂಲಕ ಈ ಉಪದೇಶವನ್ನು ನೀಡಿದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ) ಈ ಕುರಿತು ಪದೇ ಪದೇ ಗಮನ ಸೆಳೆದಿದ್ದಾರೆ.

ಪ್ರಯಾಣಿಕರಿಗೆ ಅವರ ಹಕ್ಕನ್ನು ನೀಡಿರಿ ಎಂದು ಅಲ್ಲಾಹನು ಹೇಳಿದ್ದಾನೆ. (ಬನೀ ಇಸ್ರಾಈಲ್: 27) ಅದೇ ರೀತಿ ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಇಬ್ರಾಹೀಮ್(ಅ)ರ ಉದಾಹರಣೆಯಿದೆ: ಅವರ ಬಳಿ ಅತಿಥಿಗಳು ಬಂದಾಗ, ಅವರು ಅತಿಥಿಗಳನ್ನು ನೋಡಿ, ಊಟ ಮಾಡುತ್ತೀರಾ? ಎಂದು ಕೇಳಲಿಲ್ಲ, ಬದಲಾಗಿ ತಕ್ಷಣವೇ ಒಂದು ಕರುವನ್ನು ಬಲಿಕೊಟ್ಟು, ಅದನ್ನು ಹುರಿದು ಅತಿಥಿಗಳ ಮುಂದಿಟ್ಟರು. (ಹೂದ್: 70)

ಅದೇ ರೀತಿ ಒಂದು ಹದೀಸ್‌ನಲ್ಲಿ ವರದಿಯಾಗಿದೆ, ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಅಲ್ಲಾಹನು ಮತ್ತು ಪುನರುತ್ಥಾನದ ದಿನದ ಮೇಲೆ ವಿಶ್ವಾಸವಿಡುವವರು ಅತಿಥಿಯ ನ್ಯಾಯಯುತ ಹಕ್ಕನ್ನು ಪೂರೈಸಬೇಕು. 'ನ್ಯಾಯಯುತ ಹಕ್ಕು ಎಂದರೆ ಏನು?' ಎಂದು ಕೇಳಲಾದಾಗ, ನಬಿ(ಸ) ಹೀಗೆ ಉತ್ತರಿಸಿದರು: ಒಂದು ಹಗಲು ಮತ್ತು ರಾತ್ರಿಯ ಅತಿಥಿ ಸತ್ಕಾರ. ಮತ್ತೊಂದು ಕಡೆ ಮೂರು ದಿನಗಳವರೆಗೆ ಅತಿಥಿಯ ಸತ್ಕಾರವನ್ನು ಮಾಡಿರಿ ಎಂಬ ವರದಿಯೂ ಇದೆ. (ಸಹೀಹ್ ಬುಖಾರಿ, ಕಿತಾಬುಲ್ ಅದಬ್, ಬಾಬ್ ಇಕ್ರಾಮಿದ್ದೈಫ್ ವ ಖಿದ್ಮತಿ ಅಯ್ಯಾಹು ಬಿನಫ್ಸಿಹಿ, ಹದೀಸ್–6135)

ಇದು ವಿಶೇಷ ಅತಿಥಿಗಳಿಗಾಗಿ ಆಗಿದೆ, ಸಾಮಾನ್ಯವಾಗಿ ಜನರ ಮನೆಗೆ ಬರುವವರು ಕೆಲವು ದಿನಗಳಿಗಾಗಿ ಬರುತ್ತಾರೆ. ಸಾಮಾನ್ಯವಾಗಿ ಯಾವುದೇ ಅತಿಥಿ ಬಂದರೂ ಅವರ ಸತ್ಕಾರ ಮಾಡಬೇಕು, ಇದೇ ಮುಸಲ್ಮಾನರಿಗೆ ಇರುವ ಆಜ್ಞೆಯಾಗಿದೆ. ಇತ್ತೀಚೆಗೆ ಜಲ್ಸದ ದಿನಗಳಲ್ಲಿ ಬರುತ್ತಿರುವ ಅತಿಥಿಗಳು, ಬಹುದೂರದ ಪ್ರಯಾಣ ಮಾಡಿ ಬರುತ್ತಿದ್ದಾರೆ. ಬೇರೆ ದೇಶಗಳಿಂದ ಬರುತ್ತಿದ್ದಾರೆ. ಇವರು ಮೂರು ದಿನಗಳಿಗಿಂತಲೂ ಹೆಚ್ಚು ಕಾಲ ತಂಗಬಹುದು. ಜಮಾಅತಿನ ವ್ಯವಸ್ಥೆಯ ಅಡಿಯಲ್ಲಿ ಇವರು ಎಷ್ಟು ದಿನ ತಂಗುತ್ತಾರೋ, ಅಂದರೆ ಮೂರರಿಂದ ನಾಲ್ಕು ವಾರಗಳವರೆಗೆ ಅಥವಾ ಎರಡರಿಂದ ಮೂರು ವಾರಗಳವರೆಗೆ, ಜಮಾಅತ್ ಅವರ ಅತಿಥಿ ಸತ್ಕಾರ ಮಾಡುತ್ತದೆ. ಅದಕ್ಕಾಗಿ, ಅವರ ಅತಿಥಿ ಸತ್ಕಾರ ಮಾಡಲು ಜಮಾಅತಿನ ಬಳಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಕಾರ್ಯಕರ್ತರು ಲಭ್ಯವಿರುವುದು ಅಲ್ಲಾಹನ ಬಹುದೊಡ್ಡ ಉಪಕಾರವಾಗಿದೆ, ಇವರು ವೇತನ ಪಡೆಯುವ ಕಾರ್ಯಕರ್ತರಲ್ಲ. ಮೂರರಿಂದ ನಾಲ್ಕು ವಾರಗಳವರೆಗೆ ಸ್ವಯಂಸೇವಕರು ಈ ಉದ್ದೇಶಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ.

ಅಷ್ಟೇ ಅಲ್ಲ, ಇಲ್ಲಿ ಯು.ಕೆ.ಯಲ್ಲಿ ಅತಿಥಿ ಸತ್ಕಾರದ ವ್ಯವಸ್ಥೆಯು ಎಷ್ಟೊಂದು ವಿಸ್ತಾರವಾಗಿದೆಯೆಂದರೆ, ವರ್ಷವಿಡೀ ಹಝ್ರತ್ ಮಸೀಹ್ ಮೌಊದ್(ಅ)ರ ಲಂಗರ್ ನಡೆಯುತ್ತಿರುತ್ತದೆ. ಈ ಲಂಗರ್‌ನಲ್ಲಿ ಸೇವೆ ಸಲ್ಲಿಸಲು ಅನೇಕರು (ಅವರಲ್ಲಿ ಕೆಲವರಿಗೆ ಸ್ವಂತ ವ್ಯಾಪಾರಗಳಿವೆ, ಕೆಲವರಿಗೆ ಸ್ವಂತ ರೆಸ್ಟೋರೆಂಟ್‌ಗಳಿವೆ, ಕೆಲವರಿಗೆ ಕೇಟರಿಂಗ್ ವ್ಯಾಪಾರಗಳಿವೆ) ಇವರೆಲ್ಲರೂ ವರ್ಷವಿಡೀ ಅತಿಥಿಗಳ ಸೇವೆಗಾಗಿ ಸ್ವಲ್ಪ ಸಮಯವನ್ನು ಮೀಸಲಿಡುತ್ತಾರೆ. ವಿಶೇಷವಾಗಿ ಬ್ರಿಟನ್ ಜಮಾಅತ್‌ಗೆ ಈ ಸೌಭಾಗ್ಯವಿದೆ, ಏಕೆಂದರೆ ಇಲ್ಲಿ ಖಿಲಾಫತ್ ಇದೆ ಮತ್ತು ಖಲೀಫತುಲ್ ಮಸೀಹ್‌ರ ಉಪಸ್ಥಿತಿ ಇರುವ ಕಾರಣ ಇಲ್ಲಿಗೆ ಜನರ ಆಗಮನ ಬಹಳ ಹೆಚ್ಚಾಗಿದೆ. ಇದರಿಂದಾಗಿ ಅತಿಥಿ ಸತ್ಕಾರವನ್ನು ಸಹ ಮಾಡಬೇಕಾಗುತ್ತದೆ. ಸಾಮಾನ್ಯ ಅತಿಥಿ ಸತ್ಕಾರವಂತೂ ಇಲ್ಲಿ ನಿರಂತರವಾಗಿ ನಡೆಯುತ್ತಲೇ ಇರುತ್ತದೆ ಮತ್ತು ಅಲ್ಲಾಹನ ಕೃಪೆಯಿಂದ ಜಮಾಅತಿನ ಸದಸ್ಯರು ಅತ್ಯಂತ ಉತ್ತಮ ರೀತಿಯಲ್ಲಿ ಈ ಅತಿಥಿ ಸತ್ಕಾರವನ್ನು ಮಾಡುತ್ತಿದ್ದಾರೆ. ಅಲ್ಲಾಹನು ಇವರೆಲ್ಲರಿಗೂ ಉತ್ತಮ ಪ್ರತಿಫಲವನ್ನು ದಯಪಾಲಿಸಲಿ.

ಕಾರ್ಯಕರ್ತರಲ್ಲದೆ, ಅಧಿಕೃತ ಸ್ವಯಂಸೇವಕರಾಗಿಯೂ ಜನರು ಬಹಳಷ್ಟು ಸೇವೆ ಸಲ್ಲಿಸುತ್ತಿದ್ದಾರೆ, ಆದರೆ ಹೇಗಿದ್ದರೂ ಈ ದಿನಗಳಲ್ಲಿ, ನಾನು ಹೇಳಿದಂತೆ ಇವು ಜಲ್ಸದ ದಿನಗಳು, ನಾವು ವಿಶೇಷವಾಗಿ ಅತಿಥಿಗಳ ಬಗ್ಗೆ ಕಾಳಜಿ ವಹಿಸಬೇಕು. ಹಝ್ರತ್ ಪೈಗಂಬರ್(ಸ) ಹೇಳಿದಂತೆ, ಅತಿಥಿಯ ಸಂಪೂರ್ಣ ಗೌರವ ಮತ್ತು ಸತ್ಕಾರ ಮಾಡಿರಿ ಏಕೆಂದರೆ ಇದು ಅಗತ್ಯವಾಗಿದೆ, ಇದು ನಮ್ಮ ಈಮಾನಿಗೆ ಅಗತ್ಯವಾಗಿದೆ. ಅಲ್ಲಾಹನು ಮತ್ತು ಪುನರುತ್ಥಾನದ ದಿನದ ಮೇಲಿನ ವಿಶ್ವಾಸಕ್ಕಾಗಿ ಇದು ಅಗತ್ಯವಾಗಿದೆ. ಸತ್ಯವಿಶ್ವಾಸಿಯು ಅತಿಥಿ ಸತ್ಕಾರ ಮಾಡುವವನಾಗಿರುತ್ತಾನೆ, ಉತ್ತಮ ನಡವಳಿಕೆಯುಳ್ಳವನಾಗಿರುತ್ತಾನೆ ಮತ್ತು ತನ್ನ ಅತಿಥಿಗಳೊಂದಿಗೆ ಉತ್ತಮವಾಗಿ ವರ್ತಿಸುತ್ತಾನೆ ಎಂಬುದು ಈಮಾನಿನ ಒಂದು ಷರತ್ತಾಗಿದೆ.

ಆದ್ದರಿಂದ, ಈ ದಿನಗಳಲ್ಲಿ ನಮ್ಮ ಸಾವಿರಾರು ಸ್ವಯಂಸೇವಕರಿಗೆ, ಅವರಲ್ಲಿ ಹೆಣ್ಣುಮಕ್ಕಳು ಮತ್ತು ಮಹಿಳೆಯರೂ ಸೇರಿದ್ದಾರೆ, ಹುಡುಗರು ಮತ್ತು ಪುರುಷರೂ ಸೇರಿದ್ದಾರೆ, ಹಾಗೂ ವಯಸ್ಸಾದವರೂ ಮತ್ತು ಚಿಕ್ಕವರೂ ಸೇರಿದ್ದಾರೆ, ಇವರೆಲ್ಲರಿಗೂ ಈ ಗೌರವ ಸಿಗುತ್ತಿದೆ. ತಮಗೆ ಸಿಗುತ್ತಿರುವ ಈ ಗೌರವದ ಹಕ್ಕು, ತಾವು ಅತಿಥಿ ಸತ್ಕಾರದ ಹಕ್ಕನ್ನು ಪೂರೈಸಿದಾಗ ಮಾತ್ರ ಪೂರ್ಣಗೊಳ್ಳುತ್ತದೆ ಎಂಬುದನ್ನು ಅವರು ಸದಾ ನೆನಪಿನಲ್ಲಿಡಬೇಕು. ಪ್ರತಿಯೊಬ್ಬ ಅತಿಥಿಯನ್ನೂ ಗೌರವ ಮತ್ತು ಆದರದಿಂದ ಕಾಣಬೇಕು, ಉತ್ತಮ ನಡವಳಿಕೆಯಿಂದ ವರ್ತಿಸಬೇಕು ಮತ್ತು ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳುವವರಾಗಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದಾರೆ: "ಅತಿಥಿಯ ಭಾವನೆಗಳು ಬಹಳ ನಾಜೂಕಾಗಿರುತ್ತವೆ, ಹಾಗಾಗಿ ಯಾವಾಗಲೂ ಅವರ ಬಗ್ಗೆ ಕಾಳಜಿ ವಹಿಸಬೇಕು." (ಮಲ್‌ಫೂಝಾತ್, ಸಂಪುಟ–5, ಪುಟ–111, 2022)

ಹಾಗಾಗಿ, ನಾವು ಎಲ್ಲ ರೀತಿಯಲ್ಲೂ ಅತಿಥಿಗಳ ಸೇವೆ ಮಾಡಬೇಕು ಎಂಬುದನ್ನು ಮರೆಯಬಾರದು. ನಾವು ನಮ್ಮನ್ನು ಸಮರ್ಪಿಸಿಕೊಂಡಿದ್ದರೆ, ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ಈ ಕರ್ತವ್ಯವನ್ನು ಪೂರೈಸಲು ನಮ್ಮಿಂದಾದಷ್ಟು ಪ್ರಯತ್ನವನ್ನು ಸಹ ಮಾಡಬೇಕು. ಈ ಸೇವೆಯ ಪ್ರತಿಫಲವಾಗಿ ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ಸಾಧ್ಯವಾದಷ್ಟೂ ನಾವು ಮುಹಮ್ಮದೀ ಮಸೀಹ್‌ರ ಅತಿಥಿಗಳ ಸೇವೆಯ ಹಕ್ಕನ್ನು ಪೂರೈಸಬೇಕು.

ಅತಿಥಿ ಸತ್ಕಾರ ಮಾಡುವ ನಮ್ಮ ಕಾರ್ಯಕರ್ತರು ಅಥವಾ ನಮ್ಮ

ಜಲ್ಸದ ಏರ್ಪಾಡುಗಳು ಹೇಗಿರುತ್ತವೆಯೆಂದರೆ, ಹೊರಗಿನಿಂದ ಬರುವಂತಹ, ಅಹ್ಮದಿಯರಲ್ಲದ ಮತ್ತು ಮುಸ್ಲಿಮೇತರ ಅತಿಥಿಗಳು ಸಹ ಈ ಏರ್ಪಾಡುಗಳನ್ನು ಕಂಡು ಬಹಳ ಪ್ರಭಾವಿತರಾಗುತ್ತಾರೆ. ಇಷ್ಟು ಸಾವಿರ ಜನರ ಊಟ ತಯಾರಾಗುತ್ತಿದೆ ಮತ್ತು ಸ್ವಯಂಸೇವಕರು ಊಟ ತಯಾರಿಸುತ್ತಿದ್ದಾರೆ ಎಂಬುದನ್ನು ನೋಡಿ ಅವರು ಆಶ್ಚರ್ಯಚಕಿತರಾಗುತ್ತಾರೆ. ಒಂದು ವ್ಯವಸ್ಥೆಯ ಅಡಿಯಲ್ಲಿ ಅವರಿಗೆ ಊಟ ಬಡಿಸಲಾಗುತ್ತಿದೆ ಮತ್ತು ಅವರ ಸೇವೆಯನ್ನು ಮಾಡಲಾಗುತ್ತಿದೆ. ಇಲ್ಲಿ ನಡೆಸಲಾಗುವ ಕಾರ್ಯಕರ್ತರ ಸಂಪೂರ್ಣ ವ್ಯವಸ್ಥೆಯೊಂದಿದೆ, ಅದರಲ್ಲಿ ಸಂಚಾರ ವ್ಯವಸ್ಥೆಯೂ ಇದೆ, ಊಟದ ವ್ಯವಸ್ಥೆ, ಸ್ವಚ್ಛತಾ ವ್ಯವಸ್ಥೆ, ಅಡುಗೆ ವ್ಯವಸ್ಥೆ, ನೀರು ಸರಬರಾಜು ವ್ಯವಸ್ಥೆಯೂ ಇದೆ. ಒಟ್ಟಿನಲ್ಲಿ ಅಸಂಖ್ಯಾತ ವಿಭಾಗಗಳಿವೆ, ಅದರಲ್ಲಿ ಅಲ್ಲಾಹನ ಕೃಪೆಯಿಂದ ಜಮಾಅತಿನ ಸ್ವಯಂಸೇವಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲಾಹನ ಕೃಪೆಯಿಂದ ಅತ್ಯಂತ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇತರರು ಇದನ್ನು ನೋಡಿ ಬಹಳ ಪ್ರಭಾವಿತರಾಗುತ್ತಾರೆ. ಇದು ಸಹ ತಬ್ಲೀಗಿನ ಒಂದು ಮಾರ್ಗವಾಗಿದೆ. ಆದ್ದರಿಂದ, ಇಲ್ಲಿಗೆ ಬರುವ ಪ್ರತಿಯೊಬ್ಬ ಕಾರ್ಯಕರ್ತನೂ (ಅವರಲ್ಲಿ ಕೆಲವರು ಹಳೆಯವರಾಗಿದ್ದಾರೆ ಮತ್ತು ಅನುಭವಿಗಳಾಗಿದ್ದಾರೆ, ಆದರೆ ಹೊಸಬರೂ ಇದ್ದಾರೆ) ತಾನು ಹಝ್ರತ್ ಮಸೀಹ್ ಮೌಊದ್(ಅ)ರ ಅತಿಥಿಗಳ ಸೇವೆಗಾಗಿ ಇಲ್ಲಿಗೆ ಬಂದಿರುವೆನೆಂದು ನೆನಪಿನಲ್ಲಿಡಬೇಕು. ಹಾಗಾಗಿ ಅದರ ಹಕ್ಕನ್ನು ಪೂರೈಸಲು ಸಂಪೂರ್ಣ ಪ್ರಯತ್ನ ಮಾಡಬೇಕು ಮತ್ತು ಅತಿಥಿಯ ಹಕ್ಕು ಏನಿದೆಯೋ ಅದನ್ನು ಪೂರೈಸಬೇಕು. ಇದು ನಿಮ್ಮ ಈಮಾನಿಗೆ ಅಗತ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಅತಿಥಿಗಳ ಸೇವೆಯನ್ನು ಎಷ್ಟರಮಟ್ಟಿಗೆ ಮಾಡುತ್ತಿದ್ದರು ಅಥವಾ ಅವರ ಬಗ್ಗೆ ಎಷ್ಟು ಕಾಳಜಿ ವಹಿಸುವಂತೆ ಮಾಡುತ್ತಿದ್ದರು ಎಂಬುದರ ಬಗ್ಗೆ ಒಂದು ವರದಿಯಲ್ಲಿ ಬರುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಅತಿಥಿಗಳ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಲಂಗರ್‌ನ ಅತಿಥಿಗಳ ಕಾಳಜಿ ವಹಿಸಲು ಹಝ್ರತ್ ಹಾಫಿಝ್ ಹಾಮಿದ್ ಅಲಿ ಸಾಹಿಬ್‌ರನ್ನು ನೇಮಿಸಲಾಗಿತ್ತು. 'ಈ ಅತಿಥಿಗಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ಸಾಮಾನ್ಯ ದಿನಗಳಲ್ಲಿ ಅತಿಥಿಗಳ ಸ್ಥಾನಮಾನಕ್ಕೆ ತಕ್ಕಂತೆ ಅವರ ಸೇವೆಯನ್ನು ಸಹ ಮಾಡಬೇಕು' ಎಂಬುದಾಗಿ ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿಕೊಡುತ್ತಿದ್ದರು. (ರಿಝ್ಕೆ ಹಬೀಬ್, ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬ್, ಪುಟ-153)

ಅಲ್ಲಾಹನ ಕೃಪೆಯಿಂದ ಸಾಮಾನ್ಯ ದಿನಗಳಲ್ಲಿ ಜಮಾಅತಿಗೆ ಬರುವ ಅತಿಥಿಗಳಿಗೆ, ಸಾಧ್ಯವಾದಷ್ಟೂ ಜಮಾಅತ್ ತನ್ನ ಸಂಪನ್ಮೂಲಗಳ ಮಿತಿಯಲ್ಲಿ ಅವರ ಸೇವೆ ಮಾಡುತ್ತದೆ. ಆದರೆ ಜಲ್ಸದ ದಿನಗಳಲ್ಲಿ ಆ ರೀತಿ ಕಾಳಜಿ ವಹಿಸಲು ಸಾಧ್ಯವಿಲ್ಲ. ಇಲ್ಲಿ ಒಂದು ಸಾಮಾನ್ಯ ಅತಿಥಿ ಸತ್ಕಾರವಿರುತ್ತದೆ. ಹಾಗಾಗಿ, ಇದರಲ್ಲೂ ಬಹಳಷ್ಟು ಎಚ್ಚರಿಕೆ ಮತ್ತು ಕಾಳಜಿ ವಹಿಸುವ ಅಗತ್ಯವಿದೆ.

ಒಬ್ಬ ಸಹಾಬಿ ಹೇಳುತ್ತಾರೆ: ಬಹುಶಃ 1902ರಲ್ಲಿ ನಾನು ಐಮನಾಬಾದ್‌ನಿಂದ ಖಾದಿಯಾನಿಗೆ ಬರುತ್ತಿದ್ದೆ. ಲಾಹೋರ್ ನಿಲ್ದಾಣದಲ್ಲಿ ಖಾದಿಯಾನ್ ಪ್ರಯಾಣದ ನಿರೀಕ್ಷೆಯಲ್ಲಿದ್ದೆ. ಅಲ್ಲಿ ನನಗೆ ಒಬ್ಬ ಸ್ನೇಹಿತರು ಸಿಕ್ಕರು. ನಾವಿಬ್ಬರೂ ಖಾದಿಯಾನಿಗೆ ಪ್ರಯಾಣ ಬೆಳೆಸಿದೆವು. ದಾರಿಯುದ್ದಕ್ಕೂ ಬಹಳ ಮಳೆಯಾಗುತ್ತಿತ್ತು, ಬಟಾಲ ತಲುಪಿದಾಗಲೂ ಬಹಳ ಮಳೆಯಾಗುತ್ತಿತ್ತು. ಹೇಗೋ ನಾವು ಅಲ್ಲಿ ಇಳಿದು ಖಾದಿಯಾನಿಗೆ ಟಾಂಗಾ ಅಥವಾ ಕುದುರೆಗಾಡಿಯನ್ನು ಬಾಡಿಗೆಗೆ ಪಡೆದು ಹೊರಟೆವು. ಖಾದಿಯಾನ್ ಹತ್ತಿರ ತಲುಪಿದಾಗ ಮಳೆ ನಿಂತಿತು. ಹೇಗೋ ನಾವು ದಾರುಲ್ ಅಮಾನ್ ತಲುಪಿದೆವು. ನಾವು ತಲುಪಿದಾಗ ನಮ್ಮಿಬ್ಬರಿಗೂ ಹಝ್ರತ್ ಮಸೀಹ್ ಮೌಊದ್(ಅ)ರ ಆದೇಶದಂತೆ ಆ ದಿನಗಳಲ್ಲಿ ಪುಸ್ತಕದಂಗಡಿಯಾಗಿದ್ದ ಕೊಠಡಿಯಲ್ಲಿ ಜಾಗ ನೀಡಲಾಯಿತು. ಬೆಳಿಗ್ಗೆ ಉಪಹಾರದ ಸಮಯದಲ್ಲಿ ನಮಗೆ ಬಹಳ ಉತ್ತಮ ಉಪಹಾರವನ್ನು ನೀಡಲಾಯಿತು. ಊಟವನ್ನೂ ಬಹಳ ವಿಜೃಂಭಣೆಯಿಂದ ಬಡಿಸಲಾಯಿತು. ಹಝ್ರತ್ ಮಸೀಹ್ ಮೌಊದ್(ಅ) ಪದೇ ಪದೇ, ಜೊತೆಗಿದ್ದ ಇನ್ನೊಬ್ಬ ಅತಿಥಿಯಾಗಿದ್ದ ಶಾಹ್ ಸಾಹಿಬ್ ಅವರೊಡನೆ, 'ನಿಮಗೆ ಏನಾದರೂ ತೊಂದರೆಯಿದ್ದರೆ ತಿಳಿಸಿ, ಯಾವುದೇ ತೊಂದರೆ ಇದೆಯೇ?' ಎಂದು ಕೇಳುತ್ತಿದ್ದರು. ಅನೇಕ ಅತಿಥಿಗಳೊಡನೆಯೂ ಇದೇ ರೀತಿ ಕೇಳುತ್ತಿದ್ದರು. ಹೀಗೆ ಅವರು ಅತಿಥಿಗಳನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು.
(ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-2, ಪುಟ-155)

ಅದೇ ರೀತಿ ಭೇರಾದ ಮನ್ಸೂರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ನನ್ನ ತಂದೆಯವರು ಬಹಳ ಹಳೆಯ ಅಹ್ಮದಿಯಾಗಿದ್ದಾರೆ. 1894ರಲ್ಲಿ ಅವರು ತಮ್ಮ ತಾಯಿಯೊಂದಿಗೆ ಮೊದಲ ಬಾರಿಗೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರನ್ನು ಭೇಟಿಯಾಗಲು ಖಾದಿಯಾನಿಗೆ ಹೋದರು ಮತ್ತು ತಾಯಿಯೊಂದಿಗೆ ಅಲ್ಲಿಯೇ ಬೈಅತ್ ಮಾಡಿದರು. ಖಲೀಫತುಲ್ ಮಸೀಹ್ ಅವ್ವಲ್ ಬಾಲ್ಯದಲ್ಲಿ ನನ್ನ ತಾತನ ಬಳಿ ಓದುತ್ತಿದ್ದರು ಮತ್ತು ನನ್ನ ಅಜ್ಜಿ (ಅವರ ಮೂರನೇ ಪತ್ನಿ) ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರ ಸಾಕು ಸಹೋದರಿಯೂ ಆಗಿದ್ದರು. ನಾನು ನನ್ನ ತಂದೆಯವರನ್ನು, 'ಆ ಕಾಲದಲ್ಲಿ ನೀವು ಬರುತ್ತಿದ್ದಾಗ ನಿಮಗೆ ಯಾವುದಾದರೂ ಘಟನೆ ನೆನಪಿದೆಯೇ?' ಎಂದು ಕೇಳಿದೆ. ಆಗ ಅವರು ತಿಳಿಸಿದರು: ನಾವು ಎಂಟು ಜನರು ಒಂದು ದಿನ ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಧ್ಯಾಹ್ನದ ಊಟ ಮಾಡಲು ಮುಬಾರಕ್ ಮಸೀದಿಯಲ್ಲಿದ್ದೆವು, ಅದು ಆಗ ತನ್ನ ಆರಂಭಿಕ ಸ್ಥಿತಿಯಲ್ಲಿತ್ತು. ನಾವು ಮಸೀದಿಯಲ್ಲಿ ಊಟ ಮಾಡುತ್ತಿದ್ದೆವು. ಆಗ ಅದು ಬಹಳ ಚಿಕ್ಕ ಮಸೀದಿಯಾಗಿತ್ತು. ಅತಿಥಿಗಳಿಗೆ ಕುಳಿತುಕೊಳ್ಳಲು ಬೇರೆ ಜಾಗವಿರಲಿಲ್ಲ, ಅವರನ್ನು ಹಝ್ರತ್ ಮಸೀಹ್ ಮೌಊದ್(ಅ) ಅಲ್ಲೇ ಕೂರಿಸುತ್ತಿದ್ದರು. ಒಂದು ಸಾಲಿನಲ್ಲಿ ಎಂಟು-ಹತ್ತು ಜನರು ನಿಲ್ಲುತ್ತಿದ್ದರು. ಸ್ವತಃ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಸಹ ಆ ಸಭೆಯಲ್ಲಿ ಪಾಲ್ಗೊಂಡಿದ್ದರು. ಮನೆಯಿಂದ ಎರಡು ರೀತಿಯ ಮಾಂಸದ ಪದಾರ್ಥಗಳು ಬೇಯಿಸಿ ಬರುತ್ತಿದ್ದವು. ಹಝ್ರತ್ ಮಸೀಹ್ ಮೌಊದ್(ಅ) ಆಗೊಮ್ಮೆ ಈಗೊಮ್ಮೆ ತಮ್ಮ ಪದಾರ್ಥದಿಂದ ಮಾಂಸದ ತುಂಡನ್ನು ಎತ್ತಿ ಇತರರ ಪದಾರ್ಥದ ಪಾತ್ರೆಗೆ ಹಾಕುತ್ತಿದ್ದರು. ತಮ್ಮ ಪ್ಲೇಟಿಗೆ ಯಾವುದೇ ಮಾಂಸದ ತುಂಡು ಬಂದರೂ ಅದನ್ನು ಇತರರ ಪಾತ್ರೆಗೆ ಹಾಕುತ್ತಿದ್ದರು. ಖಲೀಫತುಲ್ ಮಸೀಹ್ ಅವ್ವಲ್‌ರ ಬಗ್ಗೆಯೂ ಹೇಳುತ್ತಾರೆ, ಅವರು ಸಹ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನೋಡಿ ಅತಿಥಿಗಳಿಗಾಗಿ ಅದೇ ರೀತಿ ಮಾಡುತ್ತಿದ್ದರು.

ಕೆಲವೊಮ್ಮೆ ಅತಿಥಿಗಳು ಯಾವುದಾದರೂ ವಸ್ತು ಬೇಕೆಂದು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸುತ್ತಿದ್ದರು. ಒಮ್ಮೆ ಊಟ ಮಾಡುವಾಗ ಒಬ್ಬ ಅತಿಥಿ ತನಗೆ ಮಾವು ತಿನ್ನುವ ಆಸೆಯಾಗುತ್ತಿದೆ ಎಂದು ಹೇಳಿದನು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಊಟದ ಜೊತೆ ಮಾವು ತಿನ್ನಬೇಕು ಎಂಬ ಬಹಳ ಒಳ್ಳೆಯ ಯೋಚನೆ ನಿಮ್ಮ ಮನಸ್ಸಿನಲ್ಲಿ ಬಂದಿದೆ'. ಆಗ ಅಲ್ಲಿ ಕುಳಿತಿದ್ದ ಅತಿಥಿಗಳಲ್ಲಿ ಒಬ್ಬರು ಅಥವಾ ಅಲ್ಲಿನ ಸ್ಥಳೀಯರೊಬ್ಬರು ಕೇಳಿದರು: 'ನಾನು ಈಗಲೇ ಮಾರುಕಟ್ಟೆಗೆ ಹೋಗಿ ಮಾವು ತರಲೇ?' 'ಬೇಡ, ಕುಳಿತುಕೊಳ್ಳಿ' ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಸ್ವಲ್ಪ ಸಮಯದ ನಂತರ ಒಂದು ಪಾರ್ಸೆಲ್ ಬಂದಿತು, ಅದರಲ್ಲಿ ಯಾರೋ ಮಾವು ಕಳುಹಿಸಿದ್ದರು ಮತ್ತು ಅದರಲ್ಲಿ ಎಂಟು ಮಾವುಗಳಿದ್ದವು. ಅಲ್ಲಿ ಎಂಟು ಮಂದಿ ಇದ್ದರು ಮತ್ತು ಪಾರ್ಸೆಲ್‌ನಲ್ಲಿ ಬಂದ ಮಾವುಗಳೂ ಎಂಟು ಇದ್ದವು. ಹಝ್ರತ್ ಮಸೀಹ್ ಮೌಊದ್(ಅ) ಪ್ರತಿಯೊಬ್ಬರಿಗೂ ಒಂದೊಂದು ಮಾವನ್ನು ನೀಡಿದರು ಮತ್ತು ತಮ್ಮ ಪಾಲಿಗೆ ಬಂದ ಮಾವನ್ನೂ ಕತ್ತರಿಸಿ ಜನರಿಗೆ ನೀಡುತ್ತಾ ಅತಿಥಿ ಸತ್ಕಾರ ಮಾಡಿದರು. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-2, ಪುಟ-204-205)

ಅದೇ ರೀತಿ ಮಲೇರ್‌ಕೋಟ್ಲಾದ ಹಝ್ರತ್ ಬದ್ರುದ್ದೀನ್ ಸಾಹಿಬ್ ಹೇಳುತ್ತಾರೆ: ಒಂದು ದಿನ ನಾನು ನನ್ನ ತಂದೆಯವರ ಜೊತೆ ಬೋರ್ಡಿಂಗ್ ಬಾವಿಯಿಂದ ನೀರು ಸೇದುತ್ತಿದ್ದೆ. ರಾತ್ರಿ ಒಂಬತ್ತು ಗಂಟೆಯಾಗಿತ್ತು, ಇಶಾ ನಮಾಝ್ ಕೂಡ ಆಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಕೈಯಲ್ಲಿ ಹಾಲಿನೊಂದಿಗೆ ಬ್ರೆಡ್ ಇದ್ದ ಬಟ್ಟಲೊಂದನ್ನು ಹಿಡಿದುಕೊಂಡು ಬಾವಿಯ ಬಳಿ ಬಂದರು ಮತ್ತು ನನ್ನ ತಂದೆಯೊಡನೆ ಕೇಳಿದರು: 'ಬಾಬಾ ಜೀ, ಯಾರಾದರೂ ಅತಿಥಿ ಹಸಿವಿನಿಂದ ಇದ್ದಾರೆಯೇ?' ತಂದೆ ಹೇಳಿದರು: 'ಹುಝೂರ್, ಮಿಯಾನ್ ನಜ್ಮುದ್ದೀನ್ ಎಲ್ಲ ಕಡೆ ವಿಚಾರಿಸಿಕೊಂಡು ಬಂದಿದ್ದಾರೆ, ಎಲ್ಲರೂ ಊಟ ಮಾಡಿದ್ದಾರೆ'. ಆಗ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಸರಿ, ಹಾಗಾದರೆ ನನ್ನ ಜೊತೆ ಬನ್ನಿ'. ಆಗ ನಾವಿಬ್ಬರೂ, ಅವರ ಜೊತೆ ಹೊರಟೆವು. ಅತಿಥಿಗೃಹಕ್ಕೆ ಹೋಗಿ ಅತಿಥಿಗಳನ್ನು ವಿಚಾರಿಸಿದಾಗ ಯಾರೂ ಸಿಗಲಿಲ್ಲ. ಎಲ್ಲರೂ ಊಟ ಮಾಡಿದ್ದರು. ನಂತರ ನಾವು ಅಲ್ಲಿರುವ ಶೇರ್ ಮುಹಮ್ಮದ್ ಎಂಬುವವನ ಅಂಗಡಿಗೆ ಹೋದೆವು. ಆ ಸಮಯದಲ್ಲಿ ಅದು ತೆರೆದಿತ್ತು. ಅಲ್ಲಿಗೆ ತಲುಪಿದಾಗ ಅಲ್ಲಿದ್ದವರೊಬ್ಬರು ಹೇಳಿದರು: 'ಹುಝೂರ್, ನನಗೆ ಹಾಲು ಮತ್ತು ಬ್ರೆಡ್ ತಿನ್ನಲಿಕ್ಕೆ ಬೇಕು'. ಆಗ ಹಝ್ರತ್ ಮಸೀಹ್ ಮೌಊದ್(ಅ) ಆ ಬಟ್ಟಲನ್ನು ಅವರಿಗೆ ಕೊಟ್ಟರು. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-3, ಪುಟ-285)

ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರ ಕೈಯಿಂದಲೇ ಅವರಿಗೆ ಊಟ ನೀಡಬೇಕಿತ್ತು ಮತ್ತು ಅವರ ಅಗತ್ಯವೂ ಅದಾಗಿತ್ತು. 'ಹೋಗಿ ಅತಿಥಿಗಳಿಗೆ ಉಣ್ಣಿಸಿ' ಎಂದು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರ ಮನಸ್ಸಿನಲ್ಲಿ ಚಿಂತೆ ಉಂಟುಮಾಡಿದ್ದನು. ಅದರಂತೆ ಅವರು ಆ ಅತಿಥಿಗೆ ಉಣ್ಣಿಸಲು ನಮ್ಮನ್ನು ಕರೆದುಕೊಂಡು ಹೋದರು.

ಹೀಗೆ ಹಝ್ರತ್ ಮಸೀಹ್ ಮೌಊದ್(ಅ)ರ ಜೀವನದಲ್ಲಿ ಇಂತಹ ಅನೇಕ ಘಟನೆಗಳು ಸಿಗುತ್ತವೆ. ಸಾಮಾನ್ಯ ಪರಿಸ್ಥಿತಿಯಲ್ಲೂ ಅವರು ಅತಿಥಿ ಸತ್ಕಾರ ಮಾಡುತ್ತಿದ್ದರು. ಏಕೆಂದರೆ ಅತಿಥಿಯ ಗೌರವ, ಮರ್ಯಾದೆ ಮತ್ತು ಸತ್ಕಾರದ ಬಗ್ಗೆ ಉಲ್ಲೇಖಿಸಲಾಗಿದೆ, ಹಸಿದವನಿಗೆ ಊಟ ನೀಡುವ ಬಗ್ಗೆ ಹೇಳಲಾಗಿದೆ, ಅಗತ್ಯವುಳ್ಳವನಿಗೆ ಊಟ ನೀಡುವ ಬಗ್ಗೆ ಹೇಳಲಾಗಿದೆ. ಇದು

ಅಲ್ಲಾಹನ ಆಜ್ಞೆಯಾಗಿದೆ.

ಅದೇ ರೀತಿ ಹಝ್ರತ್ ಡಾಕ್ಟರ್ ಹಶ್ಮತುಲ್ಲಾಹ್ ಸಾಹಿಬ್ ತಮ್ಮದೊಂದು ಘಟನೆಯನ್ನು ವಿವರಿಸುತ್ತಾರೆ. ಅವರು ಹೇಳುತ್ತಾರೆ: ಜಲ್ಸದ ಸಂದರ್ಭದಲ್ಲಿ ಒಂದು ರಾತ್ರಿ ಜಮಾಅತಿನ ಕಾರ್ಯದರ್ಶಿಯಾಗಿ ನಾನು ಸದರ್ ಅಂಜುಮನ್‌ನ ಸಭೆಗೆ ಹೋಗಬೇಕಾಗಿತ್ತು. ಮಗ್ರಿಬ್ ಮತ್ತು ಇಶಾ ನಮಾಝ್ ನಂತರದ ಜಲ್ಸ ಮುಗಿದ ಬಳಿಕ ಕೇವಲ ಜಮಾಅತ್‌ಗಳ ಹುದ್ದೇದಾರರು ಬರುತ್ತಿದ್ದ ಸಭೆ ನಡೆಯುತ್ತಿತ್ತು. ಮಗ್ರಿಬ್ ಮತ್ತು ಇಶಾ ನಮಾಝಿನ ನಂತರ ಮುಬಾರಕ್ ಮಸೀದಿಯಲ್ಲಿ ಸಭೆ ನಡೆಯಬೇಕಿತ್ತು ಮತ್ತು ಸಮಯ ಕಡಿಮೆಯಿತ್ತು. ಹಾಗಾಗಿ ನಾನು, 'ನಾನು ಊಟವನ್ನು ಆಮೇಲೆ ಮಾಡುತ್ತೇನೆ' ಎಂದುಕೊಂಡೆ, ನನಗೆ ಹಸಿವೂ ಆಗಿತ್ತು ಮತ್ತು ಬೆಳಿಗ್ಗೆ ಎಂಟು ಗಂಟೆಗೆ ಊಟ ಮಾಡಿದ್ದೆ. ಆದರೆ ಜಮಾಅತಿನ ಜವಾಬ್ದಾರಿಯಿದ್ದ ಕಾರಣ ನಾನು, 'ಊಟವನ್ನು ಆಮೇಲೆ ಮಾಡುತ್ತೇನೆ' ಎಂದುಕೊಂಡೆ. ಸಭೆ ಮುಗಿದ ನಂತರ ತಡರಾತ್ರಿ ನಾನು ಲಂಗರ್‌ಖಾನೆಗೆ ತಲುಪಿದಾಗ 11 ಗಂಟೆಯಾಗಿತ್ತು ಮತ್ತು ನನಗೆ ವಿಪರೀತ ಹಸಿವಾಗಿತ್ತು. ನಾನು ನನ್ನ ಜಮಾಅತಿನ ಜನರ ಬಳಿ ಹೋಗಿ ಊಟದ ಬಗ್ಗೆ ವಿಚಾರಿಸಿದಾಗ, ಊಟ ಖಾಲಿಯಾಗಿದೆ ಎಂದು ತಿಳಿಯಿತು. ಅಲ್ಲಿ ನಮ್ಮೊಬ್ಬ ಸ್ನೇಹಿತರು, ಊಟ ಖಾಲಿಯಾಗಿದೆ ಎಂದು ಹೇಳಿ, ಲಂಗರ್‌ಖಾನೆಯಂತೂ ಮುಚ್ಚಿದೆ, ನೀವು ಈ ತುಂಡನ್ನೇ ತಿನ್ನಿ, ಇಂದು ಇದರಲ್ಲೇ ಹೊಂದಿಸಿಕೊಳ್ಳಿ ಎಂದು ದಸ್ತರಖಾನ್‌ನಿಂದ ಒಂದು ರೊಟ್ಟಿಯ ತುಂಡನ್ನು ತಂದುಕೊಟ್ಟರು. ನಾನೂ ಆ ತುಂಡನ್ನು ಜಗಿಯಲಾರಂಭಿಸಿದೆ. ನಾನು ಆ ತುಂಡನ್ನು ತಿಂದು ಮುಗಿಸಿರಲಿಲ್ಲ, ಅಷ್ಟರಲ್ಲಿ ನಮ್ಮ ಕೋಣೆಯ ಬಾಗಿಲಿಗೆ ಯಾರೋ ಜೋರಾಗಿ ಬಡಿದರು. 'ಯಾರಾದರೂ ಅತಿಥಿ ಹಸಿವಿನಿಂದ ಇದ್ದರೆ, ಊಟ ಮಾಡದಿದ್ದರೆ ಬನ್ನಿ ಮತ್ತು ಲಂಗರ್‌ಖಾನೆಯಲ್ಲಿ ಊಟ ಮಾಡಿ' ಎಂದು ಕೂಗಿದರು. ನನ್ನ ಸಂಗಾತಿಗಳು ನನ್ನನ್ನೂ ಹೊರಗೆ ಕಳುಹಿಸಿದರು ಮತ್ತು ಲಂಗರ್‌ಗೆ ತಲುಪಿದ ನಂತರ ಏನು ಸಿಕ್ಕಿತೋ ಅದನ್ನು ಕೃತಜ್ಞತೆಯಿಂದ ತಿಂದೆ. ಮರುದಿನ ಬೆಳಿಗ್ಗೆ 10 ಗಂಟೆಗೆ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಮುಬಾರಕ್ ಮಸೀದಿಯ ಸಣ್ಣ ಮೆಟ್ಟಿಲುಗಳ ಬಾಗಿಲಿನಲ್ಲಿ ನಿಂತಿರುವುದನ್ನು ನಾನು ನೋಡಿದೆ. ಸೇವಕರು ಬೀದಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಕಡೆಗೆ ಮುಖ ಮಾಡಿ ನಿಂತಿರುವುದನ್ನು ನೋಡಿದೆ. ಹಝ್ರತ್ ಮಸೀಹ್ ಮೌಊದ್(ಅ)ರನ್ನು ಉದ್ದೇಶಿಸಿ ಏನನ್ನೋ ಹೇಳುತ್ತಿದ್ದರು. ಹಝ್ರತ್ ಮೌಲವಿ ನೂರುದ್ದೀನ್ ಸಾಹಿಬ್ ಅವರೂ ಅಲ್ಲಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಆವೇಶದಿಂದ ಹೀಗೆ ಹೇಳುತ್ತಿದ್ದರು: "ಅತಿಥಿಗಳ ಊಟದ ಇತ್ಯಾದಿ ವ್ಯವಸ್ಥೆ ಉತ್ತಮವಾಗಿರಬೇಕು, ಏಕೆಂದರೆ ರಾತ್ರಿ ಅಲ್ಲಾಹನು ನನಗೆ ದಿವ್ಯವಾಣಿಯ ಮೂಲಕ, 'ಯಾ ಅಯ್ಯುಹನ್ನಬಿಯ್ಯು ಅತ್‌ಇಮುಲ್ ಜಾಇಅ ವಲ್ ಮುಅ್‌ತರ್' (ಹೇ ಪ್ರವಾದಿ, ಹಸಿದವನಿಗೆ ಮತ್ತು ನಿರ್ಗತಿಕನಿಗೆ ಊಟ ನೀಡಿರಿ) ಎಂದು ಹೇಳಿದ್ದಾನೆ." ಆಗ ನನಗೆ ಅರ್ಥವಾಯಿತು, ಮಧ್ಯರಾತ್ರಿಯಲ್ಲಿ ನನ್ನನ್ನು ಎಬ್ಬಿಸಿದ್ದು ಈ ದಿವ್ಯವಾಣಿಯ ಆಧಾರದ ಮೇಲೆಯೇ ಆಗಿತ್ತು. ರಾತ್ರಿ ಬಾಗಿಲು ತಟ್ಟಿದ್ದು ಮತ್ತು ಯಾರೋ ನನಗೆ ಊಟ ನೀಡಿದ್ದು, ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಅಲ್ಲಾಹನೇ ತಿಳಿಸಿದ್ದನು, ಅದಕ್ಕಾಗಿಯೇ ಅವರು ಕಳುಹಿಸಿದ್ದರು. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–4, ಪುಟ–155–156) (ತಝ್ಕಿರಃ, ಪುಟ–631)

ಇವರು ಸತ್ಪುರುಷರಾಗಿದ್ದರು, ಇವರ ಹಸಿವಿನ ಸಂಕಟವನ್ನು ಅಲ್ಲಾಹನು ಅರಿಯುತ್ತಿದ್ದನು ಮತ್ತು ತನ್ನ ಪ್ರವಾದಿಗೆ ತಿಳಿಸುತ್ತಿದ್ದನು. ಅಲ್ಲಿ ಅಂತಹ ವ್ಯವಸ್ಥೆಗಳಿದ್ದವು, ಹಾಗಾಗಿ ವ್ಯವಸ್ಥೆಯಾಯಿತು. ಆದರೆ ಇಲ್ಲಿ ನಮ್ಮ ಜಲ್ಸದ ಆಡಳಿತಗಾರರು ಈ ವಿಷಯದ ಬಗ್ಗೆ ಕಾಳಜಿ ವಹಿಸಬೇಕು. ತಡವಾಗಿ ಬರುವ ಅತಿಥಿಗಳು, ಕೆಲವೊಮ್ಮೆ ದೂರದಿಂದ ಪ್ರಯಾಣ ಮಾಡಿ ಬಂದಿರುತ್ತಾರೆ, ಯುರೋಪಿನಿಂದ ಪ್ರಯಾಣ ಮಾಡಿ ಬಂದಿರುತ್ತಾರೆ. ಕೆಲವೊಮ್ಮೆ ಫೆರ್ರಿ ತಡವಾಗುತ್ತದೆ, ಕೆಲವೊಮ್ಮೆ ವಿಮಾನ ತಡವಾಗುತ್ತದೆ, ಕೆಲವೊಮ್ಮೆ ಪ್ರಯಾಣದಲ್ಲಿ ಟ್ರಾಫಿಕ್‌ನಲ್ಲಿ ಸಿಲುಕಿಕೊಳ್ಳುತ್ತಾರೆ. ಅವರಿಗಾಗಿ ಊಟದ ವ್ಯವಸ್ಥೆ ಇರಬೇಕು. ಆದರೆ ಊಟವು ಸರಿಯಾದ ಸ್ಥಿತಿಯಲ್ಲಿರಬೇಕು ಎಂಬ ಎಚ್ಚರಿಕೆಯಿರಬೇಕು. ಸೆಖೆಯಿಂದಾಗಿ ಊಟ ಹಾಳಾಗಿ, ನೀವು ಹಳಸಿದ ಊಟ ಬಡಿಸಿ, ಅದು ಯಾವುದಾದರೂ ಕಾಯಿಲೆಗೆ ಕಾರಣವಾಗಬಾರದು. ಈ ದೃಷ್ಟಿಯಿಂದಲೂ ಅತಿಥಿಯ ಸತ್ಕಾರವನ್ನು ಯಾವಾಗಲೂ ನೆನಪಿನಲ್ಲಿಡಬೇಕು, ಅವರ ಬಗ್ಗೆ ಕಾಳಜಿ ವಹಿಸಬೇಕು ಮತ್ತು ಉತ್ತಮ ಊಟವನ್ನು ಬಡಿಸಬೇಕು.

ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ಬರುವವರೆಲ್ಲರಿಗೂ ಒಂದೇ ರೀತಿಯ ಊಟವನ್ನು ಬಡಿಸಿರಿ." ಅಂದರೆ ಜಲ್ಸಗೆ ಬರುವ ಜನರಿಗೆ ಒಂದೇ ರೀತಿಯ ಊಟವನ್ನು ಬಡಿಸಿರಿ, ಯಾವುದೇ ತಾರತಮ್ಯ ಇರಬಾರದು. ಆಗ ಖ್ವಾಜಾ ಸಾಹಿಬ್ ಅಥವಾ ಬೇರೆ ಯಾರೋ ಹೀಗೆ ಹೇಳಿದರು: "ಕೆಲವು ಬಡವರೂ ಬರುತ್ತಾರೆ, ಅವರಿಗೆ ತಮ್ಮ ಮನೆಯಲ್ಲಿ ಬೇಳೆಸಾರು ಕೂಡ ಸಿಗುವುದಿಲ್ಲ, ಚಟ್ನಿಯೊಂದಿಗೆ ರೊಟ್ಟಿ ತಿನ್ನುತ್ತಾರೆ. ಅವರಿಗೆ ಇಲ್ಲಿ ಬೇಳೆಸಾರು ಬಡಿಸುವುದು ತಪ್ಪಲ್ಲ. ಅವರಿಗಾಗಿ ಮಾಂಸದ ಪದಾರ್ಥ ಮಾಡುವ ಅಗತ್ಯವಿಲ್ಲ. ಬೇಳೆಸಾರು ನೀಡಿದರೂ ತೊಂದರೆಯಿಲ್ಲ, ಅವರಿಗಾಗಿ ಮಾಂಸದ ಪದಾರ್ಥ ಮಾಡುವ ಅಗತ್ಯವಿಲ್ಲ". ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ಅವರಿಗೆ ಮನೆಯಲ್ಲಿ ಬೇಳೆಸಾರು ಸಿಗದಿರಬಹುದು, ಆದರೆ ಇತರರು ಮಾಂಸ ಅಥವಾ ಪಲಾವ್ ತಿನ್ನುತ್ತಿರುವುದನ್ನು ನೋಡುವಾಗ, ಅವರಿಗೂ ತಿನ್ನುವ ಆಸೆಯಾಗುತ್ತದೆ, ಸಿಗದಿದ್ದರೆ ಅವರಿಗೆ ಬೇಸರವಾಗುತ್ತದೆ. ಇದು ಅತಿಥಿಗೆ ಬೇಸರ ತರುವ ವಿಷಯವಾಗಿದೆ. ಒಂದು ಕಡೆ ಒಬ್ಬ ಅತಿಥಿಗೆ ಮಾಂಸ ಬಡಿಸುತ್ತೀರಿ ಮತ್ತು ಇನ್ನೊಬ್ಬನಿಗೆ ಬೇಳೆಸಾರು ತಿನ್ನು ಎಂದು ಹೇಳುತ್ತೀರಿ. ಇದು ಸಾಧ್ಯವಿಲ್ಲ. ನನ್ನ ಅನುಯಾಯಿಗಳು ಬಡವರಾಗಿರಲಿ ಅಥವಾ ಶ್ರೀಮಂತರಾಗಿರಲಿ, ಎಲ್ಲರೂ ನನ್ನ ದೃಷ್ಟಿಯಲ್ಲಿ ಸಮಾನರಾಗಿದ್ದಾರೆ. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–4, ಪುಟ–65)

ಆದ್ದರಿಂದ ಒಂದೇ ರೀತಿಯ ಊಟ ತಯಾರಿಸಿ. ಮಾಂಸ, ಪಲಾವ್ ಇತ್ಯಾದಿಗಳನ್ನು ನೀಡಿದರೆ ಎಲ್ಲರಿಗೂ ನೀಡಿ, ಮತ್ತು ಬೇಳೆಸಾರು ನೀಡಿದರೆ ಎಲ್ಲರಿಗೂ ನೀಡಿ. ಹೌದು, ನಿಮ್ಮ ಬಳಿ ಸಾಮರ್ಥ್ಯವಿಲ್ಲದಿದ್ದರೆ ಮತ್ತು ಬೇಳೆಸಾರು ನೀಡಬೇಕಾದರೆ, ಎಲ್ಲರಿಗೂ ಬೇಳೆಸಾರು ಕೊಡಿ. ಕೆಲವರಿಗೆ ಮಾಂಸ ನೀಡಿ, ಕೆಲವರಿಗೆ ಬೇಳೆಸಾರು ನೀಡುವುದು ಸರಿಯಲ್ಲ." ಇವು ಹಝ್ರತ್ ಮಸೀಹ್ ಮೌಊದ್(ಅ)ರ ವಿಧಾನಗಳಾಗಿದ್ದವು. ಅವರ ಶೈಲಿಯಾಗಿದ್ದವು. ಉಪದೇಶ ನೀಡುವ ಅವರ ರೀತಿಯಾಗಿತ್ತು ಮತ್ತು ಅವರ ಅತಿಥಿ ಸತ್ಕಾರದ ವಿಧಾನಗಳಾಗಿದ್ದವು.

ಹಝ್ರತ್ ಚೌಧರಿ ಅಬ್ದುರ್ರಹೀಮ್ ಸಾಹಿಬ್ ಕೂಡ ಇದೇ ರೀತಿ ವಿವರಿಸುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ನನಗೆ ಐನೂರು ರೂಪಾಯಿಗಳನ್ನು ನೀಡಿ ಹೀಗೆ ಹೇಳಿದರು: 'ಜಲ್ಸದ ವ್ಯವಸ್ಥೆಯು ನಿಮ್ಮ ಜವಾಬ್ದಾರಿಯಾಗಿದೆ, ಆದರೆ ಎಲ್ಲ ಸ್ನೇಹಿತರೊಂದಿಗೆ ಒಂದೇ ರೀತಿಯಲ್ಲಿ ವರ್ತಿಸಬೇಕು ಮತ್ತು ಎಲ್ಲರಿಗೂ ಒಂದೇ ರೀತಿಯ ಊಟ ತಯಾರಿಸಬೇಕು ಎಂಬುದು ನೆನಪಿರಲಿ'. ಸಾಮಾನ್ಯ ದಿನಗಳಲ್ಲಿ ವಿವಿಧ ಊಟಗಳು ತಯಾರಾಗುತ್ತವೆ, ಆದರೆ ಈ ದಿನಗಳಲ್ಲಿ ಒಂದೇ ಊಟ ತಯಾರಾಗುತ್ತದೆ ಎಂದು ಅವರು ಹೇಳಿದರು. ಆಗ ಕೆಲವು ಜನರು ಹಕೀಮ್ ಫಝ್ಲುದ್ದೀನ್ ಸಾಹಿಬ್‌ರ ಹೆಸರೆತ್ತಿ ಹೀಗೆ ಹೇಳಿದರು: ಅವರು ಹೆಚ್ಚು ಅನುಭವಿಗಳು, ಈ ವ್ಯವಸ್ಥೆಯನ್ನು ಅವರಿಗೆ ವಹಿಸಿಕೊಡಿ, ಅವರು ಉತ್ತಮವಾಗಿ ನಿರ್ವಹಿಸುವರು'. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಯಾವುದೇ ಉತ್ತರ ನೀಡಲಿಲ್ಲ ಮತ್ತು ಚೌಧರಿ ಅಬ್ದುರ್ರಹೀಮ್ ಸಾಹಿಬ್‌ರಿಗೇ ಈ ವ್ಯವಸ್ಥೆಯನ್ನು ನೋಡಿಕೊಳ್ಳಲು ಹೇಳಿದರು. ಅವರು ಹೇಳುತ್ತಾರೆ: ಈ ಮಧ್ಯೆ ಖ್ವಾಜಾ ಕಮಾಲುದ್ದೀನ್ ಸಾಹಿಬ್ ನನ್ನ ಬಳಿ ಬಂದು ಹೀಗೆ ಹೇಳಿದರು: 'ನನಗಾಗಿ ಅನ್ನ ತಯಾರಿಸಿಕೊಡು, ಏಕೆಂದರೆ ಹಝ್ರತ್ ಮಸೀಹ್ ಮೌಊದ್(ಅ) ಊಟದ ವ್ಯವಸ್ಥೆಯನ್ನು ನಿನಗೆ ವಹಿಸಿದ್ದಾರೆ'. ನಾನು ಅವರೊಡನೆ ಹೀಗೆ ಹೇಳಿದೆ: 'ಎಲ್ಲರಿಗೂ ಒಂದೇ ರೀತಿಯ ಊಟ ತಯಾರಿಸಬೇಕು ಎಂದು ಹಝ್ರತ್ ಮಸೀಹ್ ಮೌಊದ್(ಅ)ರ ಆದೇಶವಿದೆ. ಹಾಗಾಗಿ ನೀವು ಅನ್ನ ತಿನ್ನಬೇಕೆಂದಿದ್ದರೆ ಅನುಮತಿ ಪಡೆದುಕೊಂಡು ಬನ್ನಿ'. ಖ್ವಾಜಾ ಸಾಹಿಬ್ ಹೇಳಿದರು: 'ಅನ್ನಕ್ಕಾಗಿ ಏನು ಅನುಮತಿ ಕೇಳಲಿ?' ನಾನು ಹೇಳಿದೆ: 'ಹಾಗಾದರೆ ನಾನು ಕೂಡ ಹಝ್ರತ್ ಮಸೀಹ್ ಮೌಊದ್(ಅ)ರ ಅನುಮತಿಯಿಲ್ಲದೆ ಒಂದು ಅಗುಳು ಅನ್ನವನ್ನೂ ನೀಡಲಾರೆ'. ಆಗ ಅವರು ಬಹಳ ಕೋಪಗೊಂಡರು ಮತ್ತು ಇಲ್ಲಿರುವವರೆಗೂ ನನ್ನ ಮೇಲೆ ಕೋಪಗೊಂಡೇ ಇದ್ದರು. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–2, ಪುಟ–333)

ಏನೇ ಆಗಲಿ, ಅತಿಥಿಗಳು ಸಹ ಈ ವಿಷಯದ ಬಗ್ಗೆ ಕಾಳಜಿ ವಹಿಸಬೇಕು; ಲಂಗರ್‌ನ ವ್ಯವಸ್ಥೆಯ ಅಡಿಯಲ್ಲಿ ಯಾವ ಊಟ ತಯಾರಿದೆಯೋ, ಏನು ಸಿಗುತ್ತದೆಯೋ, ಅದನ್ನು ತಾಳ್ಮೆ ಮತ್ತು ಕೃತಜ್ಞತೆಯಿಂದ ತಿನ್ನಬೇಕು. ನೀವು ಇಲ್ಲಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ಕರೆಗೆ ಓಗೊಟ್ಟು ಬಂದಿರುವಾಗ ಮತ್ತು ಇಲ್ಲಿಂದ ಆಧ್ಯಾತ್ಮಿಕ ಭೋಜನವನ್ನು ಪಡೆಯಬೇಕು ಎಂಬ ಉದ್ದೇಶದಿಂದ ಬಂದಿರುವಾಗ, ಆಧ್ಯಾತ್ಮಿಕ ಭೋಜನದ ಕಡೆಗೆ ಹೆಚ್ಚು ಗಮನವಿರಬೇಕು, ಊಟದಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೂ ಸಹಿಸಿಕೊಳ್ಳಬೇಕು ಮತ್ತು ಯಾವುದೇ ಬೇಡಿಕೆಯನ್ನು ಮುಂದಿಡಬಾರದು. ಕೆಲವು ಜನರು, ಬಹಳ ಬೇಡಿಕೆ ಇಡದಿದ್ದರೂ, ಮಾರುಕಟ್ಟೆಗಳಿಗೆ ಹೋಗಿ ಅಲ್ಲಿ ಊಟ ಮಾಡಲು ಪ್ರಯತ್ನಿಸುತ್ತಾರೆ ಮತ್ತು ಅಲ್ಲಿ ತಡರಾತ್ರಿಯವರೆಗೆ ಅಂಗಡಿಗಳು ತೆರೆದಿರುತ್ತವೆ. ಇದರಿಂದ ಆಡಳಿತ ಮಂಡಳಿಗೆ ತೊಂದರೆಯಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ, ವಿಶೇಷವಾಗಿ ಒಣ ಹವಾಮಾನದಲ್ಲಿ, ಹೊರಗೆ ಊಟ ತಯಾರಿಸುವುದು ಮತ್ತು ತಡರಾತ್ರಿಯವರೆಗೆ ಆಡಳಿತದ ಕೆಲವು ವಿಭಾಗಗಳು ತಮ್ಮ ಕೆಲಸವನ್ನು ಮುಗಿಸಿಕೊಂಡಿರುವಾಗ ಮತ್ತು ಸಂಪೂರ್ಣ ನಿಗಾ ಇಲ್ಲದಿರುವಾಗ, ಕೆಲವೊಮ್ಮೆ ಇದು ಅಸುರಕ್ಷಿತವಾಗುತ್ತದೆ. ಆದ್ದರಿಂದ

ಅತಿಥಿಗಳು ಸಹ, ಈ ಮೂರು ದಿನಗಳಲ್ಲಿ ಏನು ಸಿಗುತ್ತದೆಯೋ ಅದನ್ನು ತಾಳ್ಮೆ ಮತ್ತು ಕೃತಜ್ಞತೆಯಿಂದ ಸ್ವೀಕರಿಸಬೇಕು ಮತ್ತು 'ಇದು ನಮಗೆ ಇಷ್ಟವಿಲ್ಲ' ಮತ್ತು 'ನಾವು ಇದನ್ನು ತಿನ್ನುವುದಿಲ್ಲ' ಎಂಬಂತಹ ಯಾವುದೇ ಭಾವನೆಯನ್ನು ವ್ಯಕ್ತಪಡಿಸಬಾರದು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಜೊತೆಗೆ ಊಟವನ್ನು ಎಂದಿಗೂ ವ್ಯರ್ಥ ಮಾಡಬಾರದು ಎಂದು ಕೂಡ ನಾನು ಹೇಳಲು ಬಯಸುತ್ತೇನೆ. ಎಷ್ಟು ಸಿಗುತ್ತದೆಯೋ ಅಥವಾ ಎಷ್ಟು ತೆಗೆದುಕೊಳ್ಳುತ್ತೀರೋ, ನಿಮಗೆ ಎಷ್ಟು ತಿನ್ನಲು ಸಾಧ್ಯವೋ ಅಷ್ಟನ್ನೇ ತೆಗೆದುಕೊಳ್ಳಿ. ನಾನು ಹೇಳಿದಂತೆ, ನಾವು ಜಲ್ಸಗೆ ಬಂದಿರುವುದು ಆಧ್ಯಾತ್ಮಿಕ ಭೋಜನಕ್ಕಾಗಿ, ಮತ್ತು ನಾವು ನಮ್ಮ ಆಧ್ಯಾತ್ಮಿಕ ಜೀವನವನ್ನು ಸುಧಾರಿಸುವತ್ತ ಹೆಚ್ಚು ಗಮನ ಹರಿಸಬೇಕು. ಆಹಾರವಂತೂ ಅಲ್ಲಾಹನ ಕೃಪೆಯಿಂದ ಸಿಗುತ್ತದೆ, ಅದು ಸಿಕ್ಕೇ ಸಿಗುತ್ತದೆ. ಮೂರು ದಿನಗಳ ಕಾಲ ಮನುಷ್ಯನು ತಾಳ್ಮೆ ಮತ್ತು ಕೃತಜ್ಞತೆಯಿಂದ, ಕಡಿಮೆ ಅಥವಾ ಸ್ವಲ್ಪ ತಿನ್ನುವುದರಿಂದ, ಅಥವಾ ಕೆಲವೊಮ್ಮೆ ಇಷ್ಟವಿಲ್ಲದ ವಸ್ತುವನ್ನು ತಿನ್ನುವುದರಿಂದಲೂ ಹೊಂದಿಸಿಕೊಳ್ಳಬಹುದು.

ಅದೇ ರೀತಿ ಶೇಖ್ ಝೈನುಲ್ ಆಬಿದೀನ್ ಸಾಹಿಬ್ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲಿ ಅತಿಥಿಗಳಿಗೆ ಊಟದ ವಿಶೇಷ ವ್ಯವಸ್ಥೆಯಾಗುತ್ತಿತ್ತು. ಸಾಮಾನ್ಯ ಸಂದರ್ಭಗಳಲ್ಲೂ ಹಝ್ರತ್ ಮಸೀಹ್ ಮೌಊದ್(ಅ) ಅತಿಥಿಗಳ ಸತ್ಕಾರದ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದರು. ಅವರು ಹೇಳುತ್ತಾರೆ: ನನ್ನ ಸಹೋದರ ಹಾಫಿಝ್ ಹಾಮಿದ್ ಅಲಿ ವಿವರಿಸಿದರು: ಒಮ್ಮೆ ಬಹುಶಃ ವಾರ್ಷಿಕ ಜಲ್ಸದ ಸಂದರ್ಭದಲ್ಲಿ ನಾಲ್ಕು ಪಾತ್ರೆಗಳಲ್ಲಿ ಅನ್ನ ತಯಾರಿಸಲಾಗಿತ್ತು. ಆ ಕಾಲದಲ್ಲಿ ನಾಲ್ಕು ಪಾತ್ರೆಗಳೆಂದರೆ ಬಹಳಷ್ಟಾಗಿತ್ತು. ಎರಡು ಝರ್ದಾ ಮತ್ತು ಎರಡು ಪಲಾವ್. ಒಂದು ದಿನ ಬೆಳಿಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಲಂಗರ್‌ಖಾನೆಗೆ ಹೋಗಿ ಅಡುಗೆಯವನೊಡನೆ 'ಮುಚ್ಚಳ ತೆಗೆ, ನಾವು ಅನ್ನ ನೋಡಬೇಕು' ಎಂದರು. ಅವನು ಮುಚ್ಚಳ ತೆಗೆದಾಗ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಅದರ ವಾಸನೆ ಇಷ್ಟವಾಗಲಿಲ್ಲ. ಅದರಲ್ಲಿ ಯಾವುದೋ ಕೊಳೆತ ವಾಸನೆ ಬರುತ್ತಿರುವಂತೆ ಅನಿಸಿತು. ಆಗ ಹಝ್ರತ್ ಮಸೀಹ್ ಮೌಊದ್(ಅ) ಉಳಿದ ಪಾತ್ರೆಗಳನ್ನೂ ನೋಡಿ ಹೀಗೆ ಹೇಳಿದರು: 'ಜರ್ದಾದ ಎರಡೂ ಪಾತ್ರೆಗಳು ಸರಿಯಿಲ್ಲ. ಇವುಗಳನ್ನು ಹಳ್ಳಕ್ಕೆ ಸುರಿಯಿರಿ. ಇವು ಮನುಷ್ಯರು ತಿನ್ನುವಂತಿಲ್ಲ, ನನಗೆ ಇದರ ವಾಸನೆ ಇಷ್ಟವಿಲ್ಲದಿರುವಾಗ, ರುಚಿ ಬದಲಾಗಿರುವಾಗ ಮತ್ತು ಸಹಿಸಲಾಗದಂತಹ ವಾಸನೆ ಬರುತ್ತಿರುವಾಗ, ಅತಿಥಿಗಳಿಗೆ ಹೇಗೆ ಇಷ್ಟವಾಗುವುದು? ಆದ್ದರಿಂದ ನನಗೆ ಇಷ್ಟವಿಲ್ಲದ್ದನ್ನು ನಾನು ಅತಿಥಿಗಳಿಗೆ ಬಡಿಸಲು ಸಾಧ್ಯವಿಲ್ಲ. ಆದ್ದರಿಂದ ಇದನ್ನು ಹಳ್ಳಕ್ಕೆ ಸುರಿಯಿರಿ, ಪ್ರಾಣಿಗಳು ತಿನ್ನುವುವು'. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ–1, ಪುಟ–103)

ಇದು ಹಝ್ರತ್ ಮಸೀಹ್ ಮೌಊದ್(ಅ)ರ ಎಚ್ಚರಿಕೆಯಾಗಿತ್ತು. ಆದ್ದರಿಂದ ಅಡುಗೆ ಮಾಡುವ ಕಾರ್ಯಕರ್ತರು ಕೂಡ ಎಚ್ಚರಿಕೆ ವಹಿಸಬೇಕು. ಈ ದಿನಗಳಲ್ಲಿ ವಿಶೇಷವಾಗಿ ಈಗ ಬೇಸಿಗೆಯಾಗಿರುವುದರಿಂದ, ಊಟವು ಸರಿಯಾಗಿ ಸಂರಕ್ಷಿತವಾಗಿರುವಂತೆ ಮತ್ತು ಬಹಳ ಹೊತ್ತು ಇಡದಂತೆ ಊಟದ ವ್ಯವಸ್ಥೆ ಇರಬೇಕು. ವಿಶೇಷವಾಗಿ ಬೇಳೆಸಾರು ಇತ್ಯಾದಿಗಳು ಬೇಗನೆ ಹಾಳಾಗುತ್ತವೆ, ಅವುಗಳನ್ನು ಬಹಳ ಹೊತ್ತು ಇಟ್ಟು ಅತಿಥಿಗಳಿಗೆ ನೀಡಬಾರದು. ಈ ಬಗ್ಗೆ ಕಾಳಜಿ ವಹಿಸಿ ಮೊದಲು ಊಟವನ್ನು ಸರಿಯಾಗಿ ಪರಿಶೀಲಿಸಿಕೊಳ್ಳಬೇಕು.

ಅದೇ ರೀತಿ ಉಳಿದ ವಿಭಾಗಗಳೂ ಇವೆ. ಅಲ್ಲಿಯೂ ಪ್ರತಿಯೊಂದು ವಿಭಾಗದ ಕಾರ್ಯಕರ್ತರು ಸಾಧ್ಯವಾದಷ್ಟೂ ಅತಿಥಿಗಳ ಆರಾಮದ ಬಗ್ಗೆ ಕಾಳಜಿ ವಹಿಸಲು ಪ್ರಯತ್ನಿಸಬೇಕು. ಸ್ನಾನಗೃಹಗಳ ಸ್ವಚ್ಛತೆಯ ವಿಭಾಗವಾಗಿರಲಿ, ಟ್ರಾಫಿಕ್ ವಿಭಾಗವಾಗಿರಲಿ, ಪಾರ್ಕಿಂಗ್ ವಿಭಾಗವಾಗಿರಲಿ ಅಥವಾ ಭದ್ರತಾ ವಿಭಾಗವಾಗಿರಲಿ. ಭದ್ರತೆ ಇರಬೇಕು, ಆದರೆ ಜನರೊಂದಿಗೆ ಎಚ್ಚರಿಕೆ ಮತ್ತು ಗೌರವದಿಂದ ವರ್ತಿಸಬೇಕು. ಅತಿಥಿಗೆ ತೊಂದರೆಯಾಗುವಂತಹ, ಮತ್ತು ನನ್ನೊಂದಿಗೆ ಕಠೋರವಾಗಿ ವರ್ತಿಸಲಾಯಿತು ಎಂದು ಅವರು ಭಾವಿಸುವಂತಹ ತಪ್ಪು ನಡವಳಿಕೆಯನ್ನು ಅನುಸರಿಸುವುದು ಭದ್ರತಾ ಸಿಬ್ಬಂದಿಯ ಕೆಲಸವಲ್ಲ. ಹಾಗಾಗಿ ನಾವು ಈ ವಿಷಯಗಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಮತ್ತು ಜಲ್ಸಗಾಹ್‌ನ ಒಳಗೆ ಜನರನ್ನು ಸುಮ್ಮನಿರಿಸುವ ವ್ಯವಸ್ಥೆಯಲ್ಲೂ, ಶಿಸ್ತು ಕಾಪಾಡಿಕೊಳ್ಳಲು ಎಚ್ಚರಿಕೆಯಿಂದ ವರ್ತಿಸಬೇಕು, ವಿಶೇಷವಾಗಿ ಮಹಿಳೆಯರ ಕಡೆಗೆ.

ಅದೇ ರೀತಿ ಇಲ್ಲಿ ಸೇರಿರುವ ಅತಿಥಿಗಳಿಗೂ ನಾನು ಹೇಳಲು ಬಯಸುತ್ತೇನೆ. ಪ್ರಯಾಣದ ಕಷ್ಟಗಳನ್ನು ಸಹಿಸಿಕೊಂಡು ನಾವಿಲ್ಲಿ ಸೇರಿರುವಾಗ, ಅದಕ್ಕೊಂದು ಉದ್ದೇಶವಿದೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಇಂದಿನ ಪ್ರಯಾಣದ ಕಷ್ಟಗಳು ಹಳೆಯ ಕಾಲದಷ್ಟಿಲ್ಲ ಎಂಬುದು ನಿಜ, ಆದರೆ ಪ್ರಯಾಣವೆಂದರೆ ಪ್ರಯಾಣವೇ. ಇಲ್ಲಿಗೆ ಬಂದಿರುವವರು ಹಝ್ರತ್ ಮಸೀಹ್ ಮೌಊದ್(ಅ)ರ ಆಶಯಗಳನ್ನು ಗೌರವಿಸುತ್ತಾ, ಜಲ್ಸದ ಉದ್ದೇಶವನ್ನು ಪೂರೈಸಲು ಇಲ್ಲಿಗೆ ಬಂದಿದ್ದಾರೆ ಎಂಬುದನ್ನು ನೆನಪಿನಲ್ಲಿಡಬೇಕು. ಜಲ್ಸದ ಈ ಮೂರು ದಿನಗಳಲ್ಲಿ ಪಾಲ್ಗೊಳ್ಳುವಾಗ, ನಾವು ಜಲ್ಸದ ಕಾರ್ಯಕ್ರಮಗಳನ್ನು ನಿಯಮಿತವಾಗಿ ಆಲಿಸಬೇಕು ಮತ್ತು ಈ ಮೂರು ದಿನಗಳನ್ನು ಸುಮ್ಮನೆ ಕುಳಿತು ಹರಟೆ ಹೊಡೆಯುತ್ತಾ ಅಥವಾ ಅತ್ತಿತ್ತ ತಿರುಗಾಡುತ್ತಾ ಕಳೆಯಬಾರದು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಜಲ್ಸದ ಕಾರ್ಯಕ್ರಮ ಪ್ರಾರಂಭವಾದೊಡನೆ ನಾವು ತಕ್ಷಣ ಜಲ್ಸದ ಮಾರ್ಕಿಯ ಒಳಗೆ ಬರಬೇಕು, ಅಥವಾ ಮಹಿಳೆಯರು, ಪುರುಷರು ಮತ್ತು ಮಕ್ಕಳಿಗಾಗಿ, ಹೆಚ್ಚುವರಿ ಜನರಿಗಾಗಿ ಅಥವಾ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಮಾಡಿರುವ ವ್ಯವಸ್ಥೆಗಳಲ್ಲಿ ಕುಳಿತು ಗೌರವದಿಂದ ಜಲ್ಸವನ್ನು ಆಲಿಸಬೇಕು.

ಅದೇ ರೀತಿ ಮಕ್ಕಳೊಂದಿಗೆ ಕುಳಿತುಕೊಳ್ಳಲು ಮಹಿಳೆಯರಿಗೆ ಪ್ರತ್ಯೇಕ ಜಾಗವನ್ನು ಮಾಡಲಾಗಿದೆ, ಅಲ್ಲಿ ಮಹಿಳೆಯರು ತಮ್ಮ ಮಕ್ಕಳೊಂದಿಗೆ ಶಾಂತವಾಗಿ ಕುಳಿತು ಜಲ್ಸವನ್ನು ಆಲಿಸಬೇಕು. ಮಕ್ಕಳೊಂದಿಗೆ ಕುಳಿತುಕೊಳ್ಳುವುದು ಎಂದರೆ ಮಹಿಳೆಯರು ತಮ್ಮೊಳಗೆ ಮಾತನಾಡಲಾರಂಭಿಸುವುದಲ್ಲ. ಮಗುವನ್ನು ಸುಮ್ಮನಿರಿಸಲು ಅಥವಾ ಸಮಾಧಾನಪಡಿಸಲು ಮಾತನಾಡಬೇಕಾದರೆ ಮಾತ್ರ ಮಾತನಾಡಿ, ಚಿಕ್ಕ ಮಗು ಅಳುತ್ತಿದ್ದರೆ ಅದನ್ನು ಸುಮ್ಮನಾಗಿಸಲು ಯಾವುದಾದರೂ ವಿಧಾನವನ್ನು ಅನುಸರಿಸಿ. ಆದರೆ ತಾಯಂದಿರು ತಮ್ಮೊಳಗೆ ಮಾತನಾಡಲಾರಂಭಿಸಿದರೆ ಗದ್ದಲವಾಗುತ್ತದೆ. ಹೀಗಾಗಬಾರದು, ಏಕೆಂದರೆ ಇದರಿಂದ ಕುಳಿತಿರುವ ಇತರ ಜನರಿಗೆ ತೊಂದರೆಯಾಗುತ್ತದೆ. ಮಕ್ಕಳ ಶಬ್ದ ಕಡಿಮೆ, ಆದರೆ ಮಹಿಳೆಯರು ತಮ್ಮೊಳಗೆ ಮಾತನಾಡಲಾರಂಭಿಸಿ ಉಂಟಾಗುವ ಶಬ್ದ ಜಾಸ್ತಿ  ಎಂಬ ಅನೇಕ ದೂರುಗಳೂ ಬರುತ್ತವೆ. ತಾವು ಮಕ್ಕಳ ಮಾರ್ಕಿಯಲ್ಲಿ ಕುಳಿತಿದ್ದೇವೆ, ಹಾಗಾಗಿ ನಾವು ಮಾತನಾಡುವುದು ಸರಿ ಎಂದು ಅವರು ಭಾವಿಸುತ್ತಾರೆ, ಆದರೆ ಇದು ಸರಿಯಲ್ಲ. ಈ ವ್ಯವಸ್ಥೆಯು, ಜೊತೆಯಲ್ಲಿ ಮಕ್ಕಳಿಲ್ಲದ ಇತರರು ಆರಾಮವಾಗಿ ಜಲ್ಸವನ್ನು ಕೇಳಲು ಮತ್ತು ಮಕ್ಕಳಿರುವ ತಾಯಂದಿರೂ ಆರಾಮವಾಗಿ ಕುಳಿತು ಕೇಳಲು ಮಾಡಲಾಗಿದೆ. ಆದ್ದರಿಂದ ಸಾಧ್ಯವಾದಷ್ಟು ಕಡಿಮೆ ಮಾತನಾಡಿ.

ಅದೇ ರೀತಿ ಜಲ್ಸದ ಕಾರ್ಯಕ್ರಮದ ಸಮಯದಲ್ಲಿ ಮಾರುಕಟ್ಟೆಗಳು ಮುಚ್ಚಿದ್ದರೂ, ಸಾಮಾನ್ಯ ಸಮಯದಲ್ಲಿ ಮಾರುಕಟ್ಟೆಗಳು ತೆರೆದಿರುವಾಗ ಅಲ್ಲಿಯೂ ಅತಿಥಿಗಳು ಶಿಸ್ತನ್ನು ಕಾಪಾಡಿಕೊಳ್ಳಬೇಕು ಮತ್ತು ಎಚ್ಚರಿಕೆ ವಹಿಸಬೇಕು. ಅಲ್ಲಿನ ವಾತಾವರಣವನ್ನು ಹಾಳುಮಾಡುವಂತಹ ಯಾವುದೇ ಘಟನೆ ನಡೆಯಬಾರದು.

ತಾಳ್ಮೆ ಮತ್ತು ಸಂಯಮದಿಂದ ತಮ್ಮ ವಸ್ತುಗಳನ್ನು ಖರೀದಿಸುವ ವ್ಯವಸ್ಥೆ ಮಾಡಿಕೊಳ್ಳಬೇಕು. ಕೆಲವೊಮ್ಮೆ ಅಂಗಡಿ ಒಂದೇ ಇರುತ್ತದೆ, ಸ್ಟಾಲ್ ಒಂದೇ ಇರುತ್ತದೆ ಮತ್ತು ವಿಪರೀತ ಜನದಟ್ಟಣೆ ಉಂಟಾಗಿ ತಡವಾಗುತ್ತದೆ, ಆದರೆ ಇಂತಹ ಪರಿಸ್ಥಿತಿಯಲ್ಲೂ ಜನರು ತಾಳ್ಮೆ ಮತ್ತು ಸಂಯಮದಿಂದ ವರ್ತಿಸಬೇಕು. ಆಗ ಮಾತ್ರ ನೀವು ಜಲ್ಸದ ಉದ್ದೇಶವನ್ನು ಪೂರೈಸುವವರಾಗುತ್ತೀರಿ.

ಹಝ್ರತ್ ಮಸೀಹ್ ಮೌಊದ್(ಅ) ಎಂತಹ ಅಹ್ಮದಿಗಳನ್ನು ಬಯಸುತ್ತಿದ್ದರು? ಈ ಬಗ್ಗೆ ಅವರು ಹೇಳಿದ್ದಾರೆ:

ದೇವಭಯ (ತಖ್ವಾ) ಅಳವಡಿಸಿಕೊಳ್ಳುವವರು ಮತ್ತು ಸತ್ಕಾರ್ಯಗಳನ್ನು ಮಾಡುವವರಾಗಿರಿ, ಏಕೆಂದರೆ ದೇವಭಯವಿಲ್ಲದೆ ಅಲ್ಲಾಹನು ಸಂಪ್ರೀತನಾಗುವುದಿಲ್ಲ. (ಮಲ್‌ಫೂಝಾತ್, ಸಂಪುಟ–6, ಪುಟ–298–299)

ಆದ್ದರಿಂದ ಇಲ್ಲಿಗೆ ಬಂದಿರುವ ನಿಮ್ಮ ಮೂಲ ಉದ್ದೇಶವು ನಾವು ಈ ಗುರಿಯನ್ನು ಸಾಧಿಸಬೇಕು ಮತ್ತು ದೇವಭಯವನ್ನು ಗಳಿಸಬೇಕು ಎಂಬುದಾಗಿರಬೇಕು. ಅದಕ್ಕಾಗಿ ಪುರುಷರು ಮತ್ತು ಮಹಿಳೆಯರಿಬ್ಬರೂ ಶಾಂತವಾಗಿ ಕುಳಿತು ಜಲ್ಸವನ್ನು ಆಲಿಸಬೇಕು. ಈ ಉದ್ದೇಶ ಈಡೇರುವಾಗ ಮಾತ್ರ, ನೀವು ಜಲ್ಸದಲ್ಲಿ ಹೇಳಲಾಗುವ ಮಾತುಗಳಿಂದ ಮತ್ತು ಜಲ್ಸವನ್ನು ಆಯೋಜಿಸುವ ಉದ್ದೇಶದಿಂದ ಪ್ರಯೋಜನ ಪಡೆಯಲು ಸಾಧ್ಯವಾಗುತ್ತದೆ. ಇದಕ್ಕಾಗಿ ಇಲ್ಲಿಗೆ ಬಂದಿರುವ ಪ್ರತಿಯೊಬ್ಬರೂ ಪರಸ್ಪರ ಪ್ರೀತಿಯಿಂದ, ವಿಶ್ವಾಸದಿಂದ ಭೇಟಿಯಾಗಿ. ಜಲ್ಸದಲ್ಲಿ ಎಲ್ಲೆಡೆ 'ಅಸ್ಸಲಾಮು ಅಲೈಕುಮ್' ಎಂದು ಸಲಾಮ್ ಹೇಳುವ ವಾತಾವರಣವಿರಬೇಕು. ಜಲ್ಸದ ಕಾರ್ಯಕ್ರಮ ಮುಗಿದ ನಂತರ ಪರಸ್ಪರ ಭೇಟಿಯಾಗುವಾಗ ಪ್ರೀತಿ ಮತ್ತು ವಿಶ್ವಾಸದಿಂದ ಭೇಟಿಯಾಗಿ. ಯಾರಿಗಾದರೂ ಹಳೆಯ ದ್ವೇಷಗಳಿದ್ದರೆ ಅವುಗಳನ್ನು ದೂರಮಾಡಿ ಮತ್ತು ವಾತಾವರಣವನ್ನು ಹಾಳುಮಾಡುವಂತಹ ಯಾವುದೇ ಕಾರ್ಯವನ್ನು ನಾವು ಮಾಡಬಾರದು ಎಂದು ಸಾಧ್ಯವಾದಷ್ಟೂ ಪ್ರಯತ್ನಿಸಿ.

ಕೆಲವರಿಗೆ ಸಹನೆಯಿರುವುದಿಲ್ಲ. ಇಂತಹವರೂ ಇದ್ದಾರೆ, ನೂರಕ್ಕೆ ನೂರು ಜನರೂ ಬಹಳ ತಾಳ್ಮೆ ಮತ್ತು ಸಂಯಮವುಳ್ಳವರಾಗಿರುತ್ತಾರೆ ಎಂದಲ್ಲ. ಕೆಲವೊಮ್ಮೆ ಜನರಲ್ಲಿ ಸಹನಾ ಶಕ್ತಿ ಬಹಳ ಕಡಿಮೆಯಿರುತ್ತದೆ, ಆದರೆ ಅವರು ಈ ದಿನಗಳಲ್ಲಿ ದೇವಭಯದಿಂದ ವರ್ತಿಸುತ್ತಾ ತಮ್ಮ ಸಹನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ಪ್ರಯತ್ನಿಸಿ ಮತ್ತು ವೈಯಕ್ತಿಕ ದ್ವೇಷಗಳನ್ನು ಕೊನೆಗೊಳಿಸಿ, ಕನಿಷ್ಠ ಪಕ್ಷ ವೈಯಕ್ತಿಕ ದ್ವೇಷಗಳನ್ನು ವಾತಾವರಣವನ್ನು ಹಾಳುಮಾಡುವ ಸಾಧನವನ್ನಾಗಿ ಮಾಡಬೇಡಿ ಮತ್ತು ಆಡಳಿತ ಮಂಡಳಿಗೂ ತೊಂದರೆ ಕೊಡಬೇಡಿ. ನೀವು ಯಾವ ಸದುದ್ದೇಶಕ್ಕಾಗಿ

ಬಂದಿದ್ದೀರೋ, ಅದನ್ನೇ ನೀವು ಪೂರೈಸಬೇಕು ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಿ. ಇದಿಲ್ಲದಿದ್ದರೆ ಯಾವುದೇ ಪ್ರಯೋಜನವಿಲ್ಲ. ಇಲ್ಲಿ ನಮಾಝ್‌ಗಳ ನಿಯಮಿತ ವ್ಯವಸ್ಥೆಯಂತೂ ಇದೆ, ಆದರೆ ದೀರ್ಘಕಾಲ ತಂಗುವವರು, ಜಮಾಅತಿನ ವಸತಿಗೃಹಗಳಲ್ಲಿ ಇರುವವರು, ಜಲ್ಸದ ನಂತರವೂ ನಮಾಝ್‌ಗಳ ಕಡೆಗೆ ನಿಯಮಿತವಾಗಿ ಗಮನ ಹರಿಸಬೇಕು ಮತ್ತು ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕು.

ಈ ದಿನಗಳಲ್ಲಿ ಇಲ್ಲಿ ಟೆಂಟ್‌ಗಳಲ್ಲಿ ಅಥವಾ ಮಾರ್ಕಿಗಳಲ್ಲಿ ತಂಗಿರುವವರೆಲ್ಲರೂ, ಇಲ್ಲಿ ಮೂರು ದಿನಗಳ ಕಾಲ ತಹಜ್ಜುದ್ ಕೂಡ ಇರುತ್ತದೆ. ತಹಜ್ಜುದ್ ಸಮಯಕ್ಕೆ ಎಬ್ಬಿಸಲಾಗುವಾಗ ಏಳಬೇಕು. ಈ ಕಡೆ ವಿಶೇಷ ಗಮನಹರಿಸಬೇಕು ಮತ್ತು ಐದು ಹೊತ್ತಿನ ನಮಾಝ್‌ಗಳ ನಿಯಮಿತ ನಿರ್ವಹಣೆಯಂತೂ ಇದ್ದೇ ಇದೆ. ತಹಜ್ಜುದ್‌ಗಾಗಿಯೂ ವಿಶೇಷವಾಗಿ ಪ್ರಯತ್ನಿಸಬೇಕು, ಏಕೆಂದರೆ ನೀವು ಇಲ್ಲಿಗೆ ಬಂದಿರುವ ಉದ್ದೇಶವೇ ಇದಾಗಿದೆ. ಇದು ಸಿದ್ಧಿಸುವಾಗ, ನೀವು ನಿಮ್ಮ ಮತ್ತು ನಿಮ್ಮ ಮುಂದಿನ ಪೀಳಿಗೆಯ ಜೀವನವನ್ನು ಸುಧಾರಿಸುವವರಾಗುತ್ತೀರಿ.

ಅದೇ ರೀತಿ ಪಾರ್ಕಿಂಗ್ ಇತ್ಯಾದಿಗಳ ಕಡೆಗೂ ಗಮನ ಸೆಳೆಯುತ್ತೇನೆ. ಪಾರ್ಕಿಂಗ್‌ನಲ್ಲಿಯೂ ಆಡಳಿತ ಮಂಡಳಿ ಹೇಗೆ ಮಾರ್ಗದರ್ಶನ ನೀಡುತ್ತದೆಯೋ ಅದರಂತೆ ಕಾರು ಪಾರ್ಕ್ ಮಾಡಿ. ತಪಾಸಣೆಯ ಸಮಯದಲ್ಲಿ, ಕಾರುಗಳ ಇತ್ಯಾದಿಗಳ ತಪಾಸಣೆಯಿರುವಾಗ, ಅಲ್ಲಿ ದೀರ್ಘ ಸರತಿ ಸಾಲುಗಳಿದ್ದರೆ ಎಚ್ಚರಿಕೆ, ತಾಳ್ಮೆ ಮತ್ತು ಸಂಯಮದಿಂದ ನಿಮ್ಮ ಸರದಿಗಾಗಿ ಕಾಯಿರಿ ಮತ್ತು ತಪಾಸಣೆ ಮಾಡಿಸಿಕೊಂಡು ಬನ್ನಿ. ಆತುರಪಡಬೇಡಿ. ಅತಿಥಿಗಳು ಆತಿಥೇಯರಿಗೆ ಅಥವಾ ಆಡಳಿತ ಮಂಡಳಿಗೆ ಯಾವುದೇ ರೀತಿಯ ತೊಂದರೆಗೆ ಕಾರಣರಾಗಬಾರದು. ಅದೇ ರೀತಿ ಅತಿಥಿಗಳು ಮತ್ತು ಕರ್ತವ್ಯ ನಿರ್ವಹಿಸುವವರೂ ಮತ್ತೊಂದು ವಿಷಯದ ಬಗ್ಗೆ ಗಮನಹರಿಸಬೇಕು. ವಿಶೇಷವಾಗಿ ಇಂದಿನ ದೇಶದ ಪರಿಸ್ಥಿತಿಯಲ್ಲಿ ಮತ್ತು ಕೆಲವೊಮ್ಮೆ ಮುಸ್ಲಿಮರ ವಿರುದ್ಧ ಅನ್ಯರಲ್ಲಿ ಕಂಡುಬರುವ ದ್ವೇಷ ಮತ್ತು ಹಗೆತನದ ಕಾರಣದಿಂದಾಗಿ, ವಾತಾವರಣದ ಮೇಲೆ ನಿಗಾ ಇರಿಸಿ ಮತ್ತು ಎಚ್ಚರಿಕೆ ವಹಿಸಿ. ಯಾವುದೇ ಅನುಮಾನಾಸ್ಪದ ವಸ್ತು ಅಥವಾ ವ್ಯಕ್ತಿಯನ್ನು ಕಂಡರೆ ತಕ್ಷಣ ಆಡಳಿತ ಮಂಡಳಿಯನ್ನು ಸಂಪರ್ಕಿಸಿ ಮತ್ತು ಜಲ್ಸದಲ್ಲಿ ಕುಳಿತಾಗಲೂ ಪರಸ್ಪರ ಗಮನವಿರಲಿ.

ಅದೇ ರೀತಿ ಈ ದಿನಗಳಲ್ಲಿ ವಿಶೇಷವಾಗಿ, ಹವಾಮಾನವು ಬಹಳ ಒಣಗಿರುವ ಕಾರಣ, ನಾನು ಮೊದಲೇ ಹೇಳಿದಂತೆ, ಬೆಂಕಿ ಹೊತ್ತಿಕೊಳ್ಳುವ ಅಪಾಯವಿರಬಹುದು. ಆದ್ದರಿಂದ, ವೈಯಕ್ತಿಕ ಅಥವಾ ಸಾಮೂಹಿಕ ವಸತಿಗೃಹಗಳಲ್ಲಿ ಯಾವುದೇ ರೀತಿಯ ಬೆಂಕಿಯನ್ನು ಹೊತ್ತಿಸಬೇಡಿ. ಬೆಂಕಿಕಡ್ಡಿಯನ್ನೂ ಗೀಚಬೇಡಿ. ಅಗತ್ಯವಿದ್ದರೆ ಆಡಳಿತ ಮಂಡಳಿಯನ್ನು ಸಂಪರ್ಕಿಸಿ, ಅವರು ಬೆಂಕಿ ಉರಿಸಲು ವ್ಯವಸ್ಥೆ ಮಾಡಿರುವ ಸ್ಥಳಕ್ಕೆ ಹೋಗಿ, ಅಲ್ಲಿ ಬೆಂಕಿ ಉರಿಸಿದರೆ ಯಾವುದೇ ತೊಂದರೆಯಿಲ್ಲ. ಆದರೆ ಎಲ್ಲೆಂದರಲ್ಲಿ ಕುಳಿತು ಯಾವುದೇ ರೀತಿಯ ಕಿಡಿಯಿಂದ ದೂರವಿರಿ ಮತ್ತು ಎಚ್ಚರಿಕೆ ವಹಿಸಿ, ಏಕೆಂದರೆ ಇದರಿಂದ ಏನಾದರೂ ಅಪಘಾತವೂ ಸಂಭವಿಸಬಹುದು.

ಅದೇ ರೀತಿ ನಿನ್ನೆ ನಾನು ಕಾರ್ಯಕರ್ತರಿಗೂ ಹೇಳಿದ್ದೆ, ಹಳೆಯ ಕಾರುಗಳನ್ನು ಹೊಂದಿರುವವರು ಎಚ್ಚರಿಕೆ ವಹಿಸಬೇಕು. ಅನೇಕ ಅತಿಥಿಗಳು ಹಳೆಯ ಕಾರುಗಳನ್ನು ಹೊಂದಿದ್ದಾರೆ ಮತ್ತು ಅವುಗಳ ಎಂಜಿನ್‌ಗಳು ಬಿಸಿಯಾಗುತ್ತವೆ. ಅವುಗಳನ್ನು ಹುಲ್ಲಿನ ಜಾಗದಲ್ಲಿ ನಿಲ್ಲಿಸಿದರೆ, ಅಲ್ಲಿ ಬೆಂಕಿ ಹೊತ್ತಿಕೊಳ್ಳುವ ಅಪಾಯವಿರುತ್ತದೆ. ಅದೇ ರೀತಿ ಕೆಲವು ಹಳೆಯ ಕಾರುಗಳಿಂದ ಕೆಲವೊಮ್ಮೆ ತೈಲ ಸೋರುತ್ತಿರುತ್ತದೆ. ಆದ್ದರಿಂದ ಅವರೂ ಎಚ್ಚರಿಕೆ ವಹಿಸಬೇಕು ಮತ್ತು ಪಾರ್ಕಿಂಗ್ ಮಾಡುವಾಗ ಆಡಳಿತ ಮಂಡಳಿಗೆ, ನನ್ನ ಕಾರಿನಲ್ಲಿ ಈ ದೋಷವಿದೆ, ಆದ್ದರಿಂದ ಸುರಕ್ಷಿತವಾಗಿರುವ ಜಾಗದಲ್ಲಿ ನಿಲ್ಲಿಸಿ ಎಂದು ಹೇಳಬೇಕು.

ಸ್ವಚ್ಛತೆಯ ಬಗ್ಗೆಯೂ ಕಾಳಜಿ ವಹಿಸಿ. ಆಡಳಿತ ಮಂಡಳಿ ಶೌಚಾಲಯಗಳ ಇತ್ಯಾದಿಗಳ ಸ್ವಚ್ಛತೆ ಕಾಪಾಡಲು ಪ್ರಯತ್ನಿಸುತ್ತದೆ. ಹಾಗೆಯೇ, ನೀವು ಸ್ನಾನಗೃಹಗಳನ್ನು ಬಳಸುವಾಗ, ಸ್ವಚ್ಛಗೊಳಿಸಿ ಬನ್ನಿ. ನೀರು ನೆಲದ ಮೇಲೆ ಹರಿಯುತ್ತಾ, ಗಲೀಜು ಬಿದ್ದಿರುವಂತಾಗದಿರಲಿ. ಹದೀಸ್‌ನ ಪ್ರಕಾರ ಅತಿಥಿಯು ಸ್ವಚ್ಛತೆಯ ಕಡೆಗೆ ವಿಶೇಷ ಗಮನ ಹರಿಸಲು ಪ್ರಯತ್ನಿಸಬೇಕು. ಏಕೆಂದರೆ ಸ್ವಚ್ಛತೆಯು ಈಮಾನಿನ ಒಂದು ಭಾಗವಾಗಿದೆ, ನಾವಿಲ್ಲಿ ಬಂದಿರುವುದೇ ಈಮಾನನ್ನು ಹೆಚ್ಚಿಸಲು. ಆದ್ದರಿಂದ ಸ್ವಚ್ಛತೆಯ ಅಂಶವನ್ನೂ ನಿರ್ಲಕ್ಷಿಸಬಾರದು. ಈ ದಿನಗಳಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತಾವು ಕಾರ್ಯಕರ್ತರೆಂದು ಭಾವಿಸಬೇಕು ಮತ್ತು ಸ್ವಚ್ಛತೆಯ ಬಗ್ಗೆ ವಿಶೇಷ ಗಮನ ಹರಿಸಬೇಕು, ಇದರಿಂದ ವಾತಾವರಣವೂ ಸ್ವಚ್ಛವಾಗಿರಲಿ.

ನಿಮ್ಮ ಈಮಾನಿನ ಗುಣಮಟ್ಟವನ್ನು ಹೆಚ್ಚಿಸುವ ಕಡೆಗೆ ಗಮನಹರಿಸಿ. ಈ ದಿನಗಳಲ್ಲಿ ದೇವಸ್ಮರಣೆಯ ಮೇಲೆ ಹೆಚ್ಚು ಒತ್ತು ನೀಡಿ. ಬಿಡುವಿನ ವೇಳೆಯಲ್ಲಿ ಕುಳಿತಿರುವಾಗ ದುರೂದ್ ಶರೀಫ್, ಪ್ರಾರ್ಥನೆಗಳು ಮತ್ತು ಇಸ್ತಿಗ್ಫಾರ್ (ಕ್ಷಮೆಯಾಚನೆ) ಕಡೆಗೆ ಹೆಚ್ಚು ಗಮನಹರಿಸಿ. ಅನಗತ್ಯ ಮಾತುಗಳನ್ನಾಡುವ ಬದಲು ದೇವಸ್ಮರಣೆ ಅಥವಾ ಧಾರ್ಮಿಕ ಚರ್ಚೆಗಳನ್ನು ಮಾಡಿ. ಅದೇ ರೀತಿ ಈ ದಿನಗಳಲ್ಲಿ ಕೆಲವು ಪ್ರದರ್ಶನಗಳೂ ಇವೆ. ಅವುಗಳನ್ನು ನೋಡಲು ನೀವು ಹೋಗಬೇಕು ಮತ್ತು ಆಸಕ್ತಿ ಹಾಗೂ ಗಮನದಿಂದ ನೋಡಬೇಕು. ಇದು ನಿಮಗೆ ಶೈಕ್ಷಣಿಕ ದೃಷ್ಟಿಯಿಂದಲೂ ಮತ್ತು ಧಾರ್ಮಿಕ ದೃಷ್ಟಿಯಿಂದಲೂ ಲಾಭದಾಯಕವಾಗಲಿದೆ. ಇವುಗಳಿದ್ದರೆ, ಇನ್‌ಶಾ ಅಲ್ಲಾಹ್ ನೀವು ಜಲ್ಸದಿಂದ ಸಂಪೂರ್ಣ ಪ್ರಯೋಜನ ಪಡೆಯುವವರಾಗುತ್ತೀರಿ.

ನಿಮ್ಮಲ್ಲಿ ಪ್ರತಿಯೊಬ್ಬರೂ ಈ ಜಲ್ಸದಿಂದ ಎಲ್ಲ ರೀತಿಯಲ್ಲೂ ಧಾರ್ಮಿಕ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದ, ಶೈಕ್ಷಣಿಕ ದೃಷ್ಟಿಯಿಂದ ಪ್ರಯೋಜನ ಪಡೆಯುವವರಾಗಲು ಮತ್ತು ಜಲ್ಸದ ಅನುಗ್ರಹಗಳು ಸದಾ ನಿಮ್ಮ ಜೀವನದ ಭಾಗವಾಗಿರಲು ಮತ್ತು ಮುಂದಿನ ಪೀಳಿಗೆಗಳಿಗೂ ಜೀವನದ ಭಾಗವಾಗಿರಲು ಅಲ್ಲಾಹನು ಸೌಭಾಗ್ಯ ನೀಡಲಿ. ನೀವು ಹಝ್ರತ್ ಮಸೀಹ್ ಮೌಊದ್(ಅ)ರ ನಿಯೋಗದ ಉದ್ದೇಶವನ್ನು ಪೂರೈಸುವವರೂ ಆಗಲಿ.

ಇನ್‌ಶಾ ಅಲ್ಲಾಹ್ ಸಂಜೆ ಜಲ್ಸದ ಉದ್ಘಾಟನೆಯಾಗಲಿದೆ. ಆ ಭಾಷಣವನ್ನು ಮತ್ತು ಉಳಿದ ಭಾಷಣಕಾರರ ಭಾಷಣಗಳನ್ನೂ ಗಮನವಿಟ್ಟು ಕೇಳಿ ಮತ್ತು ಅದರಂತೆ ಕಾರ್ಯನಿರ್ವಹಿಸಲು ಪ್ರಯತ್ನಿಸಿ. ಅಲ್ಲಾಹನು ಎಲ್ಲರಿಗೂ ಇದರ ಸೌಭಾಗ್ಯವನ್ನು ದಯಪಾಲಿಸಲಿ.

--------------*****--------------

## ಬದರ್ ಪತ್ರಿಕೆಯನ್ನು ನೀವೂ ಓದಿರಿ ಮತ್ತು ನಿಮ್ಮ ಸ್ನೇಹಿತರನ್ನೂ ಓದಲು ಪ್ರೋತ್ಸಾಹಿಸಿ.

ಡಿಸೆಂಬರ್ 2014 ರ ಬದರ್ ಪತ್ರಿಕೆಯ ವಿಶೇಷ ಸಂಚಿಕೆಗಾಗಿ ತಮ್ಮ ಸಂದೇಶವನ್ನು ಕಳುಹಿಸುತ್ತಾ ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಹೀಗೆ ಹೇಳಿದರು:

"ಬದರ್ ವಾರಪತ್ರಿಕೆಯು ಸಂಸ್ಥೆ ಮತ್ತು ಓದುಗರು ಈ ಪತ್ರಿಕೆಯನ್ನು ಜಮಾಅತ್‌ನ ಸದಸ್ಯರ ಆಧ್ಯಾತ್ಮಿಕ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಪ್ರಕಟಿಸಲಾಗಿದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು ಮತ್ತು ನಮ್ಮ ಹಿರಿಯರು ಪ್ರತಿಕೂಲ ಪರಿಸ್ಥಿತಿಗಳ ಹೊರತಾಗಿಯೂ ಅದನ್ನು ತಮ್ಮ ಎಲ್ಲಾ ಶಕ್ತಿಯಿಂದ ಮುಂದುವರಿಸಲು ಪ್ರಯತ್ನಿಸಿದರು ಮತ್ತು ಅವರ ಪ್ರಾರ್ಥನೆ ಮತ್ತು ಶುದ್ಧ ಪ್ರಯತ್ನಗಳ ಅನುಗ್ರಹಗಳಿಂದ ಮಾತ್ರ ಇದು ಇಂದಿಗೂ ಮುಂದುವರೆದಿದೆ ಮತ್ತು ಇದು ಸಾಧ್ಯವಾದಷ್ಟು ಅಹ್ಮದೀಯರು ಇದನ್ನು ಓದಬೇಕು ಮತ್ತು ಅದರಿಂದ ಪ್ರಯೋಜನ ಪಡೆಯಬೇಕು. ಸರ್ವಶಕ್ತನಾದ ಅಲ್ಲಾಹನು ತನ್ನ ಕೃಪೆಯಿಂದ, ವಿಶೇಷವಾಗಿ ಭಾರತದ ಅಹ್ಮದೀಯರಿಗೆ ಮತ್ತು ಸಾಮಾನ್ಯವಾಗಿ ಪ್ರಪಂಚದ ಉಳಿದ ಭಾಗಗಳಲ್ಲಿ ವಾಸಿಸುವ ಅಹ್ಮದೀಯರಿಗೆ ಇದನ್ನು ಅಧ್ಯಯನ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ಅನುಗ್ರಹಗಳನ್ನು ಪಡೆಯುವ ಸಾಮರ್ಥ್ಯವನ್ನು ನೀಡಲಿ. ಆಮೀನ್."

ಸಯ್ಯಿದುನಾ ಹಝ್ರತ್ ಅಖ್ದಸ್ ಅಮೀರ್–ಉಲ್–ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಪ್ರತಿ ಮನೆಯೂ ಬದರ್ ವಾರಪತ್ರಿಕೆಯನ್ನು ಓದುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ಅಹ್ಮದಿಯಾ ಜಮಾಅತ್ತಿಗೆ ಇಲ್ಲಿ ತಿಳಿಸಲಾಗಿದೆ. ಬದರ್ ಪತ್ರಿಕೆಯಲ್ಲಿ, ಪವಿತ್ರ ಖುರ್‌ಆನ್, ಹದೀಸ್ ಶರೀಫ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು, ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಖುತ್‌ಬ ಜುಮುಅಗಳು, ಭಾಷಣಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ವಿವಿಧ ದೇಶಗಳಿಗೆ ಮಾಡಿದ ಅನುಗ್ರಹದಾಯಕ ಭೇಟಿಗಳ ಕುತೂಹಲಕಾರಿ ಮತ್ತು ವಿಶ್ವಾಸವರ್ಧಕ ವರದಿಗಳನ್ನು ಬದರ್ ಪತ್ರಿಕೆಯಲ್ಲಿ ನಿಯಮಿತವಾಗಿ ಪ್ರಕಟಿಸಲಾಗುತ್ತದೆ, ಇದು ಪ್ರತಿಯೊಬ್ಬ ಅಹ್ಮದಿಯೂ ಓದಲೇಬೇಕಾದ ವಿಷಯವಾಗಿದೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರ ಕರುಣೆಯಿಂದ, ಈ ಪತ್ರಿಕೆಯು ಈಗ ಉರ್ದು ಬಾಷೆಯ ಜೊತೆಗೆ ಹಿಂದಿ, ಬಂಗಾಳಿ, ತಮಿಳು, ತೆಲುಗು, ಮಲಯಾಳಂ, ಒರಿಯಾ ಮತ್ತು ಕನ್ನಡ ಭಾಷೆಗಳಲ್ಲಿಯೂ ಪ್ರಕಟವಾಗುತ್ತಿದೆ. ಬದರ್ ಪತ್ರಿಕೆಗೆ ಇನ್ನೂ ಚಂದಾದಾರರಾಗದ ಅಹ್ಮದಿ ಸ್ನೇಹಿತರು ಇದಕ್ಕೆ ಚಂದಾದಾರರಾಗಲು ಮತ್ತು ಅದನ್ನು ಸ್ವತಃ ಓದಲು ಮತ್ತು ಅವರ ಮಕ್ಕಳು ಮತ್ತು ಇತರ ಕುಟುಂಬ ಸದಸ್ಯರಿಗೆ ಅದನ್ನು ಓದಲು ಅವಕಾಶವನ್ನು ಒದಗಿಸುವಂತೆ ವಿನಂತಿಸಲಾಗಿದೆ. ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ಅವರ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಅಲ್ಲಾಹನು ನಮಗೆ ನೀಡಲಿ. ಆಮೀನ್. ಬದರ್ ಪತ್ರಿಕೆ ಸಮಯಕ್ಕೆ ಸರಿಯಾಗಿ ಬರದಿದ್ದರೆ, ಅಥವಾ ದೇಣಿಗೆ ನೀಡಲು ಅಥವಾ ಯಾವುದೇ ರೀತಿಯ ಮಾಹಿತಿಗಾಗಿ, ದಯವಿಟ್ಟು ಬದರ್ ವಾರಪತ್ರಿಕೆಯು ಕಚೇರಿ ವ್ಯವಸ್ಥಾಪಕರಿಗೆ ಸಂಪರ್ಕಿಸಿ. ಜಝಾಕುಮುಲ್ಲಾಹ್. **(ಪತ್ರಿಕಾಂಗ)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

## ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ[ರ]

### ಧರ್ಮಪ್ರಚಾರದಲ್ಲಿ ಉಂಟಾದ ತಡೆಗಳು ಮತ್ತು ಹಝ್ರತ್ ಪೈಗಂಬರರ[ಸ] ತಾಯಿಫ್ ಪ್ರಯಾಣ

ಹಝ್ರತ್ ಪೈಗಂಬರ್[ಸ] ಮತ್ತು ಅವರ ಶಿಷ್ಯರು ಅಬೂತಾಲಿಬರ ಸೌಹಾರ್ದದ ಪ್ರಭಾವದಿಂದ ಈಗ ವಂಚಿತರಾದರು. ಹಝ್ರತ್ ಪೈಗಂಬರರ[ಸ] ಗೃಹಜೀವನದ ಸಂಗಾತಿ ಸಹ ಅವರಿಂದ ಅಗಲಿ ಹೋದರು. ಅವರಿಬ್ಬರ ಜೊತೆಗಿದ್ದ ಬಾಂಧವ್ಯದ ಕಾರಣದಿಂದ ಸಹಜವಾಗಿ ದೌರ್ಜನ್ಯಗಾರರನ್ನು ತಡೆಯುತ್ತಿದ್ದವರ ಸಹಾನುಭೂತಿಗಳೂ ಕಡಿಮೆಯಾದುವು. ಅಬೂತಾಲಿಬರು ನಿಧನ ಹೊಂದಿದುದ ರಿಂದ ಉಂಟಾದ ಶೋಕದ ಕಾರಣದಿಂದ ಮತ್ತು ಅಬೂತಾಲಿಬರ ಮರಣ ಶಾಸನದ ಕಾರಣದಿಂದ ಕೆಲವು ದಿನಗಳವರೆಗೆ ಹಝ್ರತ್ ಪೈಗಂಬರರ[ಸ] ಕಠಿಣ ಶತ್ರುವಾದ, ಅಬೂತಾಲಿಬರ ಕಿರಿಯ ಸಹೋದರ ಅಬೂಲಹಬನು ಹಝ್ರತ್ ಪೈಗಂಬರ್‌ರಿಗೆ[ಸ] ಬೆಂಬಲ ನೀಡಿದ್ದನು. ಆದರೆ ಮಕ್ಕದ ಜನರು "ಮುಹಮ್ಮದ್ ಏಕದೇವನ ಏಕತ್ವದಲ್ಲಿ ನಂಬಿಕೆಯನ್ನು ಹೊಂದದವರನ್ನು ಅಪರಾಧಿಗಳೆಂದೂ ಶಿಕ್ಷಾರ್ಹರೆಂದೂ ಬಗೆದಿರುವರು" ಎಂದು ಹೇಳಿ ಅಬೂಲಹಬನನ್ನು ಉದ್ರೇಕಿಸಿದುದರಿಂದ ಆತನು ತನ್ನ ತಂದೆ ತಾತಂದಿರ ಅಭಿಮಾನದಿಂದ ಭಾವಾವೇಶಗೊಂಡು ಹಝ್ರತ್ ಪೈಗಂಬರ್‌ರಿಗೆ[ಸ] ಬೆಂಬಲ ಕೊಡುವುದನ್ನು ನಿಲ್ಲಿಸಿದನು ಮತ್ತು ಇನ್ನು ಮುಂದೆ ಮೊದಲಿಗಿಂತ ಅವರನ್ನು ಹೆಚ್ಚು ವಿರೋಧಿಸುವೆನೆಂದು ಪ್ರತಿಜ್ಞೆ ಮಾಡಿದನು.

ಬಹಿಷ್ಕೃತ ಮತ್ತು ಪ್ರತಿಬಂಧಕ ಸ್ಥಿತಿಯಲ್ಲಿ ಜೀವಿಸುತ್ತಾ ಇದ್ದುದರಿಂದ ಜನರು ತಮ್ಮ ಸಂಬಂಧಿಕರಿಂದ ದೂರವಿದ್ದ ಕಾರಣ ಬಾಂಧವ್ಯದಲ್ಲಿ (ಹೆಚ್ಚಿನ ಕಾವು ಇರದೆ) ಒಂದು ರೀತಿಯ ಶೈತ್ಯಾವಸ್ಥೆ ತಲೆದೋರಿತ್ತು. ಮಕ್ಕದ ಜನರು ಮುಸ್ಲಿಮರೊಂದಿಗೆ ಮಾತನಾಡುತ್ತಿರಲಿಲ್ಲ. ಆದುದರಿಂದ ಧರ್ಮಪ್ರಚಾರದ ಕ್ಷೇತ್ರ ಸೀಮಿತಗೊಂಡಿತ್ತು. ಹಝ್ರತ್ ಪೈಗಂಬರ್[ಸ] ಈ ಸ್ಥಿತಿಯನ್ನು ನೋಡಿ ಮಕ್ಕದ ಬದಲಿಗೆ ತಾಯಿಫ್ ನಗರಕ್ಕೆ ಹೋಗಿ ಅಲ್ಲಿನ ಜನರಿಗೆ ಇಸ್ಲಾಮಿನ ಸಂದೇಶ ನೀಡಲು ನಿರ್ಧರಿಸಿದರು. ಮಕ್ಕದವರ ವಿರೋಧ ಹೆಚ್ಚಾದಂತೆ ಅವರ ಈ ನಿರ್ಧಾರ ಬಲಯುತವಾಯಿತು. ಮಕ್ಕದ ಜನರು ಅವರ ಮಾತುಗಳನ್ನು ಆಲಿಸುತ್ತಲೇ ಇರಲಿಲ್ಲ. ಅವರು ಮಕ್ಕದ ಮಾರ್ಗಗಳಲ್ಲಿ ನಡೆಯಲು ಅವಿಶ್ವಾಸಿಗಳು ಬಿಡುತ್ತಿರಲಿಲ್ಲ. ಹಝ್ರತ್ ಪೈಗಂಬರ್[ಸ] ಮನೆಯಿಂದ ಹೊರಟಾಗ ಅವರ ತಲೆಗೆ ಮಣ್ಣು ಎಸೆಯಲಾಗುತ್ತಿತ್ತು. ಜನರನ್ನು ಭೇಟಿಯಾಗುವುದು ಅವರಿಗೆ ಅಸಾಧ್ಯವಾಗುತ್ತಿತ್ತು. ಒಮ್ಮೆ ಹಝ್ರತ್ ಪೈಗಂಬರ್[ಸ] ಈ ಸ್ಥಿತಿಯಲ್ಲಿ ಮನೆಗೆ ಹಿಂದಿರುಗಿದಾಗ ಅವರ ಒಬ್ಬ ಪುತ್ರಿ ಅವರ ತಲೆಯಿಂದ ಮಣ್ಣನ್ನು ಕೊಡವಿ ತೆಗೆಯುತ್ತಾ ಅಳಲು ತೊಡಗಿದರು. ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: "ಓ ನನ್ನ ಪ್ರಿಯ ಪುತ್ರೀ, ನೀನು ಅಳಬೇಡ. ಅಲ್ಲಾಹನು ನಿನ್ನ ಪಿತನ ಜೊತೆಗಿದ್ದಾನೆ."

ಹಝ್ರತ್ ಪೈಗಂಬರ್[ಸ] ಸಂಕಷ್ಟಗಳಿಂದ ಗಾಬರಿಗೊಳ್ಳುತ್ತಿರಲಿಲ್ಲ. ಆದರೆ ಜನರು ಅವರ ಮಾತನ್ನು ಆಲಿಸಲು ತಯಾರಾಗದುದು ಅವರಿಗೆ ವ್ಯಸನಕರವಾಗಿತ್ತು. ಕಷ್ಟಗಳ ಬಗ್ಗೆ ಹೇಳುವುದಾದರೆ, ಅವುಗಳು ಆವಶ್ಯಕವೆಂದು ಅವರು ಭಾವಿಸುತ್ತಿದ್ದರು. ಯಾವುದೇ ವ್ಯಕ್ತಿ ಆತ ಗುಲಾಮನಾಗಿರಲಿ, ಸ್ವತಂತ್ರ ವ್ಯಕ್ತಿಯಾಗಿರಲಿ ತನಗೆ ಯಾವುದೇ ಕಷ್ಟಕೊಡದಿದ್ದರೆ ಅದು ಅವರಿಗೆ ಹೆಚ್ಚು ದುಃಖಕರವಾದ ದಿನವಾಗುತ್ತಿತ್ತು. ಅಂತಹ ದಿನಗಳಲ್ಲಿ ಅವರು ದುಃಖದಿಂದಲೂ ವ್ಯಥೆಯಿಂದಲೂ ಮೌನಾವಲಂಬಿಯಾಗಿ ಮಲಗುತ್ತಿದ್ದರು. ಕೊನೆಗೆ ಅಲ್ಲಾಹನು ಅವರನ್ನು ಸಮಾಧಾನಪಡಿಸಿ, "ನೀನು ಹೋಗಿ ಪದೇ ಪದೇ ಆವರ್ತಿಸಿ ಅವರಿಗೆ ಎಚ್ಚರಿಕೆ ನೀಡು. ಅವರ ನಿರ್ಲಕ್ಷ್ಯತೆಯ ಬಗ್ಗೆ ಯೋಚಿಸಬೇಡ" ಎಂದು ಹೇಳಿದನು. ಆದುದರಿಂದ ಜನರು ಹಝ್ರತ್ ಪೈಗಂಬರರಿಗೆ[ಸ] ಕಷ್ಟಕೊಡುವುದು ಅವರಿಗೆ ದುಃಖಕರವಾಗಿರಲಿಲ್ಲ. ಆದರೆ ಲೋಕಕ್ಕೆ ಮಾರ್ಗದರ್ಶನ ನೀಡಲು ನಿಯುಕ್ತರಾದ ಅಲ್ಲಾಹನ ಪ್ರವಾದಿ, ತನ್ನೊಂದಿಗೆ ಜನರು ಮಾತನ್ನೇ ಆಡದಿರುವುದನ್ನು ಮತ್ತು ತನ್ನ ಮಾತನ್ನು ಕೇಳಲು ತಯಾರಾಗದುದನ್ನು ಹೇಗೆ ತಾನೆ ಸಹಿಸಬಲ್ಲರು. ಇಂತಹ ನಿರುಪಯುಕ್ತ ಜೀವಿತ ಅವರಿಗೆ ಅತ್ಯಂತ ದುಃಖಕರವಾಗಿತ್ತು. ಆದುದರಿಂದ ಹಝ್ರತ್ ಪೈಗಂಬರ್[ಸ] ತಾಯಿಫ್ ನಗರಕ್ಕೆ ಹೋಗಲು ಮತ್ತು ಅಲ್ಲಿನ ಜನರಿಗೆ ಅಲ್ಲಾಹನ ಸಂದೇಶ ತಲಪಿಸಲು ನಿರ್ಧರಿಸಿದರು.

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದ ಕಡೆಗೆ ಸಂಚರಿಸುತ್ತಾ ವಿವಿಧ ಜನಾಂಗಗಳಿಗೆ ಬೋಧಿಸುತ್ತಾ ತಿರುಗುವುದು ಅಲ್ಲಾಹನ ಪ್ರವಾದಿಗಳಿಗೆ ನಿರ್ದೇಶಿಸಲಾಗಿರುತ್ತದೆ. ಹಝ್ರತ್ ಮೂಸಾ[ಅ] ಹೀಗೆಯೇ ಮಾಡಿದರು. ಅವರು ಕೆಲವೊಮ್ಮೆ ಫಿರ್‌ಔನನ ಜನಾಂಗದವರನ್ನು ಸಂಬೋಧಿಸಿ ಮಾತನಾಡುತ್ತಿದ್ದರು. ಅವರು ಹಝ್ರತ್ ಇಸ್‌ಹಾಖರ[ಅ] ಸಂತತಿಗಳನ್ನೂ ಮದ್‌ಯನ್ ನಿವಾಸಿಗಳನ್ನೂ ಬೇರೆ ಬೇರೆ ಕಾಲಗಳಲ್ಲಿ ಸಂಬೋಧಿಸಿ ಮಾತನಾಡುತ್ತಿದ್ದರು.

ಹಝ್ರತ್ ಈಸಾ[ಅ] ಧರ್ಮಪ್ರಚಾರದ ಉತ್ಸಾಹದಿಂದ ಕೆಲವೊಮ್ಮೆ ಗಲೀಲದ ಜನರನ್ನೂ ಕೆಲವೊಮ್ಮೆ ಜೋರ್ಡನ್ ನದಿಯ ಆಚೆ ದಡದವರನ್ನೂ ಕೆಲವೊಮ್ಮೆ ಜೆರುಸಲೇಮಿನ ಜನರನ್ನೂ ಸಂಬೋಧಿಸಿ ಉಪದೇಶಿಸುತ್ತಿದ್ದರು. ಕೆಲವು ಸಾರಿ ಬೇರೆಯವರಿಗೂ ಉಪದೇಶಿಸುತ್ತಿದ್ದರು.

ಮಕ್ಕದ ಜನರು ಹಝ್ರತ್ ಪೈಗಂಬರರ[ಸ] ಮಾತುಗಳನ್ನೇ ಕೇಳುವುದನ್ನು ನಿರಾಕರಿಸಿ "ಹೊಡೆಯಿರಿ, ಬಡಿಯಿರಿ. ಮುಹಮ್ಮದನ ಮಾತನ್ನು ಆಲಿಸಬೇಡಿರಿ" ಎಂದು ತೀರ್ಮಾನಿಸಿದಾಗ ಹಝ್ರತ್ ಪೈಗಂಬರರು[ಸ] ತಾಯಿಫ್ ನಗರವನ್ನು ಅಭಿಮುಖೀಕರಿಸಿದರು.

ತಾಯಿಫ್ ಮಕ್ಕದಿಂದ ಅಂದಾಜು 60 ಮೈಲು ದೂರದಲ್ಲಿ ದಕ್ಷಿಣ ಪೂರ್ವದಿಕ್ಕಿನಲ್ಲಿದೆ. ತನ್ನ ಫಲವಸ್ತುಗಳಿಗೂ ಕೃಷಿಗೂ ಪ್ರಸಿದ್ಧಿ ಪಡೆದ ಒಂದು ನಗರ ಅದಾಗಿತ್ತು. ಆ ನಗರ ನಿವಾಸಿಗಳ ವಿಗ್ರಹಾರಾಧನೆ ಮಕ್ಕದವರಿಗಿಂತ ಕಡಿಮೆ ಪ್ರಮಾಣದಲ್ಲಿರಲಿಲ್ಲ. ಕಅ್‌ಬದಲ್ಲಿ ಇರಿಸಲಾದ ವಿಗ್ರಹಗಳ ಹೊರತಾಗಿ "ಲಾತ" ಎಂಬ ವಿಗ್ರಹ ತಾಯಿಫ್ ನಗರದ ಪ್ರಾಮುಖ್ಯಕ್ಕೆ ಕಾರಣವಾಗಿತ್ತು. ಅದರ ದರ್ಶನಕ್ಕಾಗಿ ಅರಬ್ ರಾಜ್ಯದ ಜನರು ದೂರ ದೂರ ಪ್ರದೇಶಗಳಿಂದ ಆಗಮಿಸುತ್ತಿದ್ದರು. ತಾಯಿಫ್ ನಗರದ ಜನರಿಗೆ ಮಕ್ಕದವರೊಂದಿಗೆ ಅನೇಕ ಕೌಟುಂಬಿಕ ಬಾಂಧವ್ಯಗಳೂ ಇದ್ದವು. ಅಲ್ಲದೆ ಮಕ್ಕ ಮತ್ತು ತಾಯಿಫ್‌ಗಳ ನಡುವೆ ಅನೇಕ ಫಲವತ್ತಾದ ಸ್ಥಳಗಳಲ್ಲಿ ಮಕ್ಕದವರ ಆಸ್ತಿಗಳು ಇದ್ದುವು. ಹಝ್ರತ್ ಪೈಗಂಬರ್[ಸ] ತಾಯಿಫ್‌ಗೆ ತಲಪಿದಾಗ ಅಲ್ಲಿನ ಗಣ್ಯ ವ್ಯಕ್ತಿಗಳು ಅವರನ್ನು ಕಾಣಲು ಬರತೊಡಗಿದರು. ಆದರೆ ಯಾರೂ ಸತ್ಯವನ್ನು ಸ್ವೀಕರಿಸಲು ಸಿದ್ಧರಾಗಲಿಲ್ಲ. ಜನಸಾಮಾನ್ಯರು ಸಹ ತಮ್ಮ ಮುಂದಾಳುಗಳನ್ನು ಅನುಸರಣೆ ಮಾಡಿ ಅಲ್ಲಾಹನ ಸಂದೇಶವನ್ನು ತಾತ್ಸಾರ ದೃಷ್ಟಿಯಿಂದ ನೋಡಿದರು. ಯಾವುದೇ ಸಾಧನಸಾಮಗ್ರಿಗಳಿಲ್ಲದ ಮತ್ತು ಸಹಾಯಕರಿಲ್ಲದ ಪ್ರವಾದಿ ಲೌಕಿಕ ದೃಷ್ಟಿಯಲ್ಲಿ ನಿಕೃಷ್ಟರೇ ಆಗಿರುತ್ತಾರೆ. ಜನರಿಗೆ ಆಯುಧಗಳ ಮತ್ತು ಸೇನಾಬಲದ ಶಬ್ದಗಳನ್ನು ಆಲಿಸಲು ಮಾತ್ರ ತಿಳಿದಿದೆ. (ದೈವಿಕ ಸಹಾಯ ಮತ್ತು ದೈವಿಕ ಸೇನಾಬಲದ ಅರಿವು ಅವರಿಗಿಲ್ಲ.)

ಹಝ್ರತ್ ಪೈಗಂಬರರ[ಸ] ಕುರಿತು ಸುದ್ದಿ ಈ ಮೊದಲೇ ತಾಯಿಫ್‌ಗೆ ತಲಪಿತ್ತು. ಹಝ್ರತ್ ಪೈಗಂಬರ್[ಸ] ತಾಯಿಫ್ ತಲಪಿದಾಗ ತಾಯಿಫ್ ನಿವಾಸಿಗಳು ನೋಡಿದರು. ಹಝ್ರತ್ ಪೈಗಂಬರರ[ಸ] ಜೊತೆಗೆ ಸೈನ್ಯ ಅಥವಾ ದಂಡು ಇರುವುದಕ್ಕೆ ಬದಲಾಗಿ ಕೇವಲ ಝೈದ್ ಅವರ ಜೊತೆಗಿದ್ದರು. ಅವರು ತಾಯಿಫ್ ನಗರದ ಪ್ರಸಿದ್ಧ ಸ್ಥಳಗಳಲ್ಲಿ ಧರ್ಮ ಪ್ರಚಾರ ಮಾಡುತ್ತಾ ತಿರುಗುತ್ತಿದ್ದರು. ಆದರೆ ಹೃದಯಾಂಧತೆ ಬಾಧಿಸಿದವರು ತಮ್ಮ ಮುಂದೆ ಅಲ್ಲಾಹನ ಪ್ರವಾದಿ ಬಂದಿರುವುದದನ್ನು ನೋಡಲಿಲ್ಲ. ಅವರು ಒಬ್ಬ ನಿಕೃಷ್ಟ, ತಿರಸ್ಕೃತ ಮನುಷ್ಯನನ್ನಾಗಿ ಅವರನ್ನು ಕಂಡರು. ಪ್ರಾಯಶಃ ಈತನಿಗೆ ಕಷ್ಟಕೊಡುವುದರಿಂದ ಮತ್ತು ಹಿಂಸಿಸುವುದರಿಂದ ತಮ್ಮ ನಾಯಕರ ದೃಷ್ಟಿಯಲ್ಲಿ ತಾವು ಗೌರವಾನ್ವಿತರಾಗುವೆವು ಎಂದು ಆ ಜನರು ಭಾವಿಸಿದರು. ತಾಯಿಫ್ ನಗರದ ಅವಿಶ್ವಾಸಿಗಳು ಒಗ್ಗೂಡಿದರು. ಅವರು ನಾಯಿಗಳನ್ನು ತಮ್ಮ ಜೊತೆ ತೆಗೆದುಕೊಂಡು ಹೋದರು. ಅವರು ಹುಡುಗರಿಗೆ ಹುರಿದುಂಬಿಸಿದರು. ಅವರು ಕಲ್ಲುಗಳಿಂದ ತಮ್ಮ ಚೀಲಗಳನ್ನು ತುಂಬಿಸಿದರು ಮತ್ತು ನಿರ್ದಯವಾಗಿ ಹಝ್ರತ್ ಪೈಗಂಬರರಿಗೆ[ಸ] ಕಲ್ಲೆಸೆಯಲು ತೊಡಗಿದರು. ಅಲ್ಲಿನ ಜನರು ಅವರನ್ನು ನಗರದಿಂದ ತಳ್ಳುತ್ತಾ ನಗರದ ಹೊರಗಡೆಗೆ ನೂಕಿದರು. ಹಝ್ರತ್ ಪೈಗಂಬರರ[ಸ] ಕಾಲುಗಳು ರಕ್ತರಂಜಿತವಾಗಿದ್ದುವು. ಹಝ್ರತ್ ಝೈದ್ ಹಝ್ರತ್ ಪೈಗಂಬರರನ್ನು[ಸ] ರಕ್ಷಿಸುತ್ತಾ ತೀವ್ರವಾಗಿ ಗಾಯಗೊಂಡರು. ಆದರೆ ದೌರ್ಜನ್ಯಗಾರರ ಹೃದಯಗಳು ತಂಪಾಗಲಿಲ್ಲ. ಅವರು ಹಝ್ರತ್ ಪೈಗಂಬರರನ್ನು[ಸ] ಹಿಂಬಾಲಿಸುತ್ತಾ ಹೋದರು. ಹಝ್ರತ್ ಪೈಗಂಬರ್[ಸ] ನಗರದಿಂದ ಅನೇಕ ಮೈಲು ದೂರದಲ್ಲಿ ಗುಡ್ಡಗಳ ತನಕ ತಲಪುವವರೆಗೆ ಆ ಜನರು ಅವರನ್ನು ಬೆಂಬತ್ತದೆ ಬಿಡಲಿಲ್ಲ. ಶತ್ರುಗಳು ಹಝ್ರತ್ ಪೈಗಂಬರರನ್ನು[ಸ] ಬೆನ್ನಟ್ಟುತ್ತಿರುವಾಗ ಅಲ್ಲಾಹನ ಕ್ರೋಧ ಅವರ ಮೇಲೆ ಎರಗುವುದೋ ಎಂಬ ಭಯದಿಂದ ಹಝ್ರತ್ ಪೈಗಂಬರ್[ಸ] ಆಕಾಶದ ಕಡೆಗೆ ದೃಷ್ಟಿಹಾಯಿಸಿ ನೋಡುತ್ತಾ ಹೀಗೆ ಪ್ರಾರ್ಥಿಸುತ್ತಿದ್ದರು: "ಓ ನನ್ನ ಪ್ರಭೂ, ನೀನು ಈ ಜನರನ್ನು ಕ್ಷಮಿಸು. ಈ ಜನರು ತಾವು ಏನು ಮಾಡುತ್ತಿದ್ದೇವೆಂದು ಅರಿತುಕೊಂಡಿಲ್ಲ."

(ಮುಂದುವರಿಯುವುದು)

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

**MUSLIM TELEVISION AHMADIYYA INTERNATIONAL**
**www.mta.tv**

## ಹಝ್ರತ್ ಮಸೀಹ್ ಮೌಊದರ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

**(36) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಹಝ್ರತ್ ವಾಲಿದಾ ಸಾಹಿಬಾ ನನಗೆ ವಿವರಿಸಿದರು: ಆರಂಭದ ದಿನಗಳಲ್ಲಿ ಒಂದು ಸಲ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರಿಗೆ ತೀವ್ರವಾದ ಅಸ್ವಸ್ಥತೆಯ ದಾಳಿ ಉಂಟಾಯಿತು. ಯಾರೋ ಮಿರ್ಝಾ ಸುಲ್ತಾನ್ ಅಹ್ಮದ್ ಮತ್ತು ಮಿರ್ಝಾ ಫಝ್ಲ್ ಅಹ್ಮದ್ ಅವರಿಗೂ ಸುದ್ದಿ ನೀಡಿದರು. ಅವರಿಬ್ಬರೂ ಅಲ್ಲಿಗೆ ಬಂದರು. ಅವರ ಸಮ್ಮುಖದಲ್ಲಿಯೇ ಮತ್ತೊಮ್ಮೆ ಹುಝೂರ್(ಅ) ಅವರಿಗೆ ಆ ಅಸ್ವಸ್ಥತೆಯ ದಾಳಿ ಉಂಟಾಯಿತು. ವಾಲಿದಾ (ತಾಯಿ) ಸಾಹಿಬಾ ಹೇಳುತ್ತಾರೆ: ಆ ಸಮಯದಲ್ಲಿ ನಾನು ಗಮನಿಸಿದುದೇನೆಂದರೆ, ಮಿರ್ಝಾ ಸುಲ್ತಾನ್ ಅಹ್ಮದ್ ಅವರು ಹುಝೂರ್(ಅ) ಅವರ ಮಂಚದ ಬಳಿ ಮೌನವಾಗಿ ಕುಳಿತಿದ್ದರು. ಆದರೆ ಮಿರ್ಝಾ ಫಝ್ಲ್ ಅಹ್ಮದ್ ಅವರ ಮುಖದಲ್ಲಿ ಒಂದೊಮ್ಮೆ ಒಂದು ಬಣ್ಣ, ಮತ್ತೊಮ್ಮೆ ಮತ್ತೊಂದು ಬಣ್ಣ ಕಾಣಿಸುತ್ತಿತ್ತು. ಅವರು ಕೆಲವೊಮ್ಮೆ ಈ ಕಡೆಗೆ, ಕೆಲವೊಮ್ಮೆ ಆ ಕಡೆಗೆ ಓಡಾಡುತ್ತಿದ್ದರು. ಒಮ್ಮೆ ತಮ್ಮ ಪಗಡಿಯನ್ನು ತೆಗೆದು ಹುಝೂರ್(ಅ) ಅವರ ಕಾಲುಗಳನ್ನು ಕಟ್ಟುತ್ತಿದ್ದರು; ಮತ್ತೊಮ್ಮೆ ಅವರ ಪಾದಗಳನ್ನು ಒತ್ತುತ್ತಿದ್ದರು. ಗಾಬರಿಯಿಂದ ಅವರ ಕೈಗಳು ನಡುಗುತ್ತಿದ್ದವು.

**(37) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಹಝ್ರತ್ ವಾಲಿದಾ ಸಾಹಿಬಾ ವಿವರಿಸಿದರು: ಮುಹಮ್ಮದಿ ಬೇಗಂ ಅವರ ವಿವಾಹವು ಬೇರೆಡೆ ನಡೆದಾಗ, ಖಾದಿಯಾನಿನ ಎಲ್ಲಾ ಸಂಬಂಧಿಕರೂ ಹುಝೂರ್(ಅ) ಅವರ ತೀವ್ರ ವಿರೋಧಕ್ಕೆ ನಿಂತರು. ಅವರು ಹುಝೂರ್(ಅ) ಅವರಿಗೆ ವಿರುದ್ಧವಾಗಿ ಪ್ರಯತ್ನಿಸುತ್ತಲೇ ಇದ್ದರು. ಎಲ್ಲರೂ ಅಹ್ಮದ್ ಬೇಗ್ ಅವರ ಪರ ನಿಂತು, ತಮ್ಮ ಪ್ರಯತ್ನದಿಂದಲೇ ಆ ಹುಡುಗಿಯ ವಿವಾಹವನ್ನು ಬೇರೆಡೆ ಮಾಡಿಸಿದರು. ಆಗ ಹುಝೂರ್(ಅ)ರು ಮಿರ್ಝಾ ಸುಲ್ತಾನ್ ಅಹ್ಮದ್ ಮತ್ತು ಮಿರ್ಝಾ ಫಝ್ಲ್ ಅಹ್ಮದ್ ಇವರಿಬ್ಬರಿಗೂ ಪ್ರತ್ಯೇಕವಾಗಿ ಪತ್ರ ಬರೆದು: "ಈ ಎಲ್ಲ ಜನರು ನನ್ನನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಇನ್ನು ಅವರೊಂದಿಗೆ ನಮ್ಮ ಯಾವುದೇ ಸಂಬಂಧ ಉಳಿದಿಲ್ಲ. ಅವರೊಂದಿಗೆ ಈಗ ನಮ್ಮ ಸಮಾಧಿಗಳೂ ಒಂದಾಗಲು ಸಾಧ್ಯವಿಲ್ಲ. ಆದ್ದರಿಂದ ನೀವು ಈಗ ನಿಮ್ಮ ಅಂತಿಮ ನಿರ್ಧಾರವನ್ನು ಮಾಡಿಕೊಳ್ಳಿ. ನನ್ನೊಂದಿಗೆ ಸಂಬಂಧವನ್ನು ಉಳಿಸಿಕೊಳ್ಳಬೇಕೆಂದಿದ್ದರೆ ಅವರೊಂದಿಗೆ ಸಂಬಂಧವನ್ನು ಕಡಿದುಕೊಳ್ಳಬೇಕು. ಅವರೊಂದಿಗೆ ಸಂಬಂಧವನ್ನು ಉಳಿಸಿಕೊಳ್ಳಬೇಕೆಂದಿದ್ದರೆ ನನ್ನೊಂದಿಗೆ ನಿಮ್ಮ ಯಾವುದೇ ಸಂಬಂಧ ಉಳಿಯುವುದಿಲ್ಲ. ಈ ಸಂದರ್ಭದಲ್ಲಿ ನಾನು ನಿಮ್ಮನ್ನು ಆಕೂಕ್ ಮಾಡುತ್ತೇನೆ" ಎಂದು ತಿಳಿಸಿದರು. ವಾಲಿದಾ ಸಾಹಿಬಾ ಹೇಳಿದರು: ಮಿರ್ಝಾ ಸುಲ್ತಾನ್ ಅಹ್ಮದ್ ಅವರ ಉತ್ತರ ಬಂದು, "ತಾಯಿ ಸಾಹಿಬಾ ನನ್ನ ಮೇಲೆ ಬಹಳ ಉಪಕಾರಗಳನ್ನು ಮಾಡಿದ್ದಾರೆ; ಆದ್ದರಿಂದ ನಾನು ಅವರೊಂದಿಗೆ ಸಂಬಂಧವನ್ನು ಕಡಿದುಕೊಳ್ಳಲು ಸಾಧ್ಯವಿಲ್ಲ" ಎಂದು ಬರೆದಿದ್ದರು. ಆದರೆ ಮಿರ್ಝಾ ಫಝ್ಲ್ ಅಹ್ಮದ್ ಅವರು, "ನನ್ನ ಸಂಬಂಧವು ನಿಮ್ಮೊಂದಿಗೇ ಇದೆ; ಅವರೊಂದಿಗೆ ನನಗೆ ಯಾವುದೇ ಸಂಬಂಧವಿಲ್ಲ" ಎಂದು ಬರೆದರು. ಹುಝೂರ್(ಅ) ಅವರು ಉತ್ತರವಾಗಿ, "ಇದು ನಿಜವಾಗಿದ್ದರೆ, ನಿಮ್ಮ ಪತ್ನಿ ಬಿಂತ್ ಮಿರ್ಝಾ ಅಲಿ ಶೇರ್ ಅವರನ್ನು (ಅವರು ತೀವ್ರ ವಿರೋಧಿಯಾಗಿದ್ದು, ಮಿರ್ಝಾ ಅಹ್ಮದ್ ಬೇಗ್ ಅವರ ಸೋದರಳಿಯೆಯಾಗಿದ್ದರು) ತಲಾಖ್ ನೀಡಿ" ಎಂದು ಹೇಳಿದರು. ಮಿರ್ಝಾ ಫಝ್ಲ್ ಅಹ್ಮದ್ ಅವರು ತಕ್ಷಣವೇ ತಲಾಖ್‌ನಾಮಾ ಬರೆದು ಹುಝೂರ್(ಅ) ಅವರ ಬಳಿಗೆ ಕಳುಹಿಸಿದರು. ವಾಲಿದಾ ಸಾಹಿಬಾ ಹೇಳುತ್ತಾರೆ: ನಂತರ ಫಝ್ಲ್ ಅಹ್ಮದ್ ಹೊರಗಿನಿಂದ ಬಂದು ನಮ್ಮ ಬಳಿಯೇ ತಂಗುತ್ತಿದ್ದರು. ಆದರೆ ಅವರ ಎರಡನೇ ಪತ್ನಿಯ ಕಪಟ ಪ್ರಭಾವದಿಂದ ಕ್ರಮೇಣ ಮತ್ತೆ ಆ ಕಡೆಗೆ ಸೇರಿಕೊಂಡರು. ವಾಲಿದಾ ಸಾಹಿಬಾ ಹೇಳುತ್ತಿದ್ದರು: ಫಝ್ಲ್ ಅಹ್ಮದ್ ಬಹಳ ಸಂಕೋಚಸ್ವಭಾವದವರಾಗಿದ್ದರು. ಹುಝೂರ್(ಅ) ಅವರ ಮುಂದೆ ಕಣ್ಣೆತ್ತಿ ನೋಡುತ್ತಿರಲಿಲ್ಲ. ಹುಝೂರ್(ಅ) ಅವರು ಅವರ ಬಗ್ಗೆ, "ಫಝ್ಲ್ ಅಹ್ಮದ್ ನೇರ ಸ್ವಭಾವದವನು; ಅವನಲ್ಲಿ ಪ್ರೀತಿಯ ಗುಣವಿದೆ. ಆದರೆ ಇತರರ ಪ್ರಚೋದನೆಯಿಂದ ಆ ಕಡೆಗೆ ಸೇರಿಕೊಂಡಿದ್ದಾನೆ" ಎಂದು ಹೇಳುತ್ತಿದ್ದರು. ಮುಂದೆ ವಾಲಿದಾ ಸಾಹಿಬಾ ಹೇಳಿದರು: ಫಝ್ಲ್ ಅಹ್ಮದ್ ಅವರ ನಿಧನದ ಸುದ್ದಿ ಬಂದಾಗ, ಆ ರಾತ್ರಿ ಹುಝೂರ್(ಅ) ಅವರು ಬಹುತೇಕ ಇಡೀ ರಾತ್ರಿ ನಿದ್ರೆ ಮಾಡಲಿಲ್ಲ. ಎರಡು–ಮೂರು ದಿನಗಳವರೆಗೆ ದುಃಖಭರಿತರಾಗಿದ್ದರು. ಈ ವಿನೀತನು ಕೇಳಿದನು: "ಹುಝೂರ್(ಅ) ಅವರು ಏನಾದರೂ ಹೇಳಿದರೇ?" ವಾಲಿದಾ ಸಾಹಿಬಾ ಹೇಳಿದರು: "ಅವರು ಇಷ್ಟೇ ಹೇಳಿದರು: 'ಅವನೊಂದಿಗೆ ನಮ್ಮ ಸಂಬಂಧ ಇರಲಿಲ್ಲ; ಆದರೆ ವಿರೋಧಿಗಳು ಅವನ ಮರಣವನ್ನೂ ಆಕ್ಷೇಪಣೆಯ ವಿಷಯವನ್ನಾಗಿ ಮಾಡುತ್ತಾರೆ.'" ಈ ವಿನೀತನು ಹೇಳುತ್ತಾನೆ: ಮುಹಮ್ಮದಿ ಬೇಗಂ ಅವರು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ತಂದೆಯ ಸಹೋದರಿಯ ಮಗಳು ಉಮ್ರುನ್ನಿಸಾ ಅವರ ಪುತ್ರಿಯಾಗಿದ್ದರು. ಅಂದರೆ ಮಿರ್ಝಾ ನಿಝಾಮುದ್ದೀನ್, ಮಿರ್ಝಾ ಇಮಾಮುದ್ದೀನ್ ಮುಂತಾದವರ ಸ್ವಂತ ಸೋದರಳಿಯೆಯಾಗಿದ್ದರು. ನಮ್ಮ ತಾಯಿ ಸಾಹಿಬಾ, ಅಂದರೆ ಮಿರ್ಝಾ ಗುಲಾಮ್ ಖಾದಿರ್ ಸಾಹಿಬರ ವಿಧವೆ, ಮುಹಮ್ಮದಿ ಬೇಗಂ ಅವರ ಸ್ವಂತ ಖಾಲಾ ಆಗಿದ್ದರು. ಮಿರ್ಝಾ ಅಹ್ಮದ್ ಬೇಗ್ (ಮುಹಮ್ಮದಿ ಬೇಗಂ ಅವರ ತಂದೆ) ಮಿರ್ಝಾ ಇಮಾಮುದ್ದೀನ್ ಮುಂತಾದವರ ಭಾವನಾಗಿದ್ದರು. ಇದಲ್ಲದೆ ಇನ್ನೂ ಅನೇಕ ಕುಟುಂಬ ಸಂಬಂಧಗಳಿದ್ದವು. ಉದಾಹರಣೆಗೆ, ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಸ್ವಂತ ಸಹೋದರಿ ಮಿರ್ಝಾ ಅಹ್ಮದ್ ಬೇಗ್ ಅವರ ಹಿರಿಯ ಸಹೋದರ ಮಿರ್ಜಾ ಗುಲಾಮ್ ಗೌಸ್ ಸಾಹಿಬರೊಂದಿಗೆ ವಿವಾಹವಾಗಿದ್ದರು. ಇದು ಬಹಳ ಹಳೆಯ ಸಂಗತಿಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಈ ಎಲ್ಲಾ ಸಂಬಂಧಿಕರು ಅತ್ಯಂತ ಧರ್ಮವಿಮುಖರಾಗಿದ್ದರು ಮತ್ತು ಇಸ್ಲಾಮಿನೊಂದಿಗೆ ಅವರಿಗೆ ಯಾವುದೇ ಸಂಬಂಧವಿರಲಿಲ್ಲ. ಅವರು ಶರೀಯತ್‌ಗೆ ಅವಮಾನ ಮಾಡುತ್ತಿದ್ದರು. ಅವರ ಈ ಸ್ಥಿತಿಯನ್ನು ಕಂಡು ಹುಝೂರ್(ಅ) ಅವರು ಅಲ್ಲಾಹನ ಕಡೆಗೆ ತವಜ್ಜು ಮಾಡಿದರು ಅವರ ಸುಧಾರಣೆಗಾಗಿ ಅಥವಾ ಒಂದು ನಿರ್ಣಾಯಕ ನಿಶಾನಿನ ಪ್ರಕಟಣೆಗಾಗಿ. ಆ ಸಂದರ್ಭದಲ್ಲಿ ಅಲ್ಲಾಹ್‌ನಿಂದ ಇಲ್ಹಾಮ್ (ದೈವವಾಣಿ) ಆಯಿತು: ಅಹ್ಮದ್ ಬೇಗ್ ಅವರ ಪುತ್ರಿ ಮುಹಮ್ಮದಿ ಬೇಗಂ ಅವರೊಂದಿಗೆ ವಿವಾಹದ ಪ್ರಸ್ತಾಪ ಮಾಡು. ಅವರು ಒಪ್ಪಿಕೊಂಡು ಆ ಹುಡುಗಿಯ ವಿವಾಹವನ್ನು ನಿನ್ನೊಂದಿಗೆ ಮಾಡಿದರೆ, ಈ ಜನರು ಬರಕತ್‌ಗಳಲ್ಲಿ ಪಾಲು ಪಡೆಯುತ್ತಾರೆ. ಅವರು ನಿರಾಕರಿಸಿದರೆ, ಅವರ ಮೇಲೆ ಅಲ್ಲಾಹನ ಅಝಾಬ್ ಇಳಿಯುತ್ತದೆ ಮತ್ತು ಅವರ ಮನೆಗಳು ವಿಧವೆಯರಿಂದ ತುಂಬುತ್ತವೆ. ಮುಖ್ಯವಾಗಿ ಆ ಹುಡುಗಿಯ ತಂದೆಯ ಕುರಿತು, ಅವರು ಮೂರು ವರ್ಷಗಳೊಳಗೆ, ವಾಸ್ತವವಾಗಿ ಬಹಳ ಬೇಗನೆ ಮರಣಹೊಂದುವರು ಎಂದು ತಿಳಿಸಲಾಯಿತು. ಮತ್ತು ಆ ಹುಡುಗಿಯೊಂದಿಗೆ ವಿವಾಹವಾಗುವ ವ್ಯಕ್ತಿಯೂ ಎರಡೂವರೆ ವರ್ಷಗಳೊಳಗೆ ಮರಣಹೊಂದುವನು ಎಂದು ತಿಳಿಸಲಾಯಿತು. ಈ ನಂತರದ ಇಬ್ಬರು ವ್ಯಕ್ತಿಗಳ ವಿಷಯದಲ್ಲಿ ಅಲ್ಲಾಹನ ದೃಷ್ಟಾಂತವು ಯಾವ ರೀತಿಯಲ್ಲಿ ಪೂರ್ಣಗೊಂಡಿತೋ, ಅದು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಕೃತಿಗಳಲ್ಲಿ ಅನೇಕ ಕಡೆ ದಾಖಲಿಸಲಾಗಿದೆ. ಅಂದರೆ, ಅಹ್ಮದ್ ಬೇಗ್ ತಮ್ಮ ಪುತ್ರಿಯ ವಿವಾಹವಾದ ಕೆಲವೇ ತಿಂಗಳ ನಂತರ ಈ ಲೋಕದಿಂದ ವಿಧಿವಶರಾದರು. ಮುಹಮ್ಮದಿ ಬೇಗಂ ಅವರನ್ನು ಯಾರೊಂದಿಗೆ ವಿವಾಹ ಮಾಡಲಾಗಿತ್ತೋ ಆ ಮಿರ್ಝಾ ಸುಲ್ತಾನ್ ಮುಹಮ್ಮದ್ ಅವರು ಅಲ್ಲಾಹನ ಅಝಾಬ್‌ನ ಭಯದಿಂದ ಪ್ರಭಾವಿತರಾದರು. ಅವರ ಅನೇಕ ಸಂಬಂಧಿಕರಿಂದ ಹುಝೂರ್(ಅ) ಅವರ ಬಳಿಗೆ ಅಜ್ಜು–ನಿಯಾಜ್‌ಪೂರ್ವಕ ಪತ್ರಗಳು ಬಂದವು. ಅವರ ಸ್ವಂತ ಪತ್ರವೂ, ಅದರಲ್ಲಿ ಹಝ್ರತ್ ಅವರ ಬಗ್ಗೆ ಭಕ್ತಿಭಾವ ವ್ಯಕ್ತಪಡಿಸಲಾಗಿತ್ತು, 'ತಶ್ಹೀಝುಲ್ ಅಝ್ಹಾನ್' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆದ್ದರಿಂದ ಸುನ್ನತುಲ್ಲಾಹ್‌ಗೆ ಅನುಸಾರವಾಗಿ ಅವರ ಮೇಲಿನ ಅಝಾಬ್ ತಪ್ಪಿಸಲ್ಪಟ್ಟಿತು. ಉಳಿದ ಸಂಬಂಧಿಕರ ಕುರಿತು ಸಾಮಾನ್ಯ ಭವಿಷ್ಯವಾಣಿಯಾಗಿತ್ತು. ಅದರ ಪರಿಣಾಮವಾಗಿ, ಭವಿಷ್ಯವಾಣಿ ಪ್ರಕಟವಾದಾಗ ಜನರಿಂದ ತುಂಬಿದ್ದ ಅವರ ಮನೆಗಳು ಸಂಪೂರ್ಣವಾಗಿ ಖಾಲಿಯಾದವು. ಈಗ ಆ ಸಂಪೂರ್ಣ ಕುಟುಂಬದಲ್ಲಿ ಒಬ್ಬ ಬಾಲಕನ ಹೊರತು ಬೇರೆ ಯಾವುದೇ ಪುರುಷನಿಲ್ಲ; ಆ ಬಾಲಕನೂ ಅಹ್ಮದಿಯಾಗಿದ್ದಾನೆ. ಇದಲ್ಲದೆ, ಮಿರ್ಝಾ ಇಮಾಮುದ್ದೀನ್ ಅವರ ಪುತ್ರಿಯೂ ಬಹಳ ಹಿಂದೆಯೇ ಅಹ್ಮದಿಯಾಗಿದ್ದಾರೆ. ಮುಹಮ್ಮದಿ ಬೇಗಂ ಅವರ ತಾಯಿ (ಅಂದರೆ ಮಿರ್ಝಾ ಅಹ್ಮದ್ ಬೇಗ್ ಅವರ ವಿಧವೆ) ಮತ್ತು ಮಿರ್ಝಾ ಅಹ್ಮದ್ ಬೇಗ್ ಅವರ ಮೊಮ್ಮಗ, ಹಾಗೆಯೇ ನಮ್ಮ ತಾಯಿ ಸಾಹಿಬಾ, ಅಂದರೆ ಮುಹಮ್ಮದಿ ಬೇಗಂ ಅವರ ಖಾಲಾ ಇವರೆಲ್ಲರೂ ಬೈಅತ್‌ನ ಸಿಲ್ಸಿಲೆಯಲ್ಲಿ ಪ್ರವೇಶಿಸಿದ್ದಾರೆ. ಮುಹಮ್ಮದಿ ಬೇಗಂ ಅವರ ಸ್ವಂತ ಸಹೋದರಿಯೂ ಅಹ್ಮದಿಯಾಗಿದ್ದರು; ಆದರೆ ಈಗ ಅವರು ನಿಧನರಾಗಿದ್ದಾರೆ. ಇವರ ಹೊರತಾಗಿಯೂ ಇನ್ನೂ ಅನೇಕ ಸಂಬಂಧಿಕರು ಅಹ್ಮದಿಗಳಾಗಿದ್ದಾರೆ. ಸಿಲ್ಸಿಲೆಯಲ್ಲಿ ಇನ್ನೂ ಪ್ರವೇಶಿಸದವರೂ ಸಹ ವಿರೋಧವನ್ನು ತ್ಯಜಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಈ ಇಲ್ಹಾಮ್ "ನಾವು ಈ ಮನೆಯಲ್ಲಿ ಕೆಲವರು ಹಸನಿ ರೀತಿಯಲ್ಲಿ ಮತ್ತು ಕೆಲವರು ಹುಸೈನಿ ರೀತಿಯಲ್ಲಿ ಪ್ರವೇಶಿಸುವೆವು" ತನ್ನ ಸಂಪೂರ್ಣ ಶೋಭೆಯಲ್ಲಿ ಪೂರ್ಣಗೊಂಡಿದೆ.

**(ಮುಂದುವರಿಯುವುದು)**

**ಪ್ರೀತಿ ಎಲ್ಲರಲ್ಲೂ, ದ್ವೇಷವಿಲ್ಲ ಯಾರಲ್ಲೂ**

**Love for All, Hatred for None**

**"ಎಲ್ಲ ಮುಸ್ಲಿಮ್ ಪುರುಷರು ಮತ್ತು ಮುಸ್ಲಿಮ್ ಮಹಿಳೆಯರು ವಿದ್ಯೆ ಕಲಿಯುವುದು ಕಡ್ಡಾಯವಾಗಿದೆ"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed Saheb & Family, Bengaluru, Karnataka**

**"ಯಾರು ಜನರಿಗೆ ಮೊದಲು ಸಲಾಂ ಹೇಳುತ್ತಾನೋ ಅವನು ಜನರಲ್ಲಿ ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವನು."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Late S.R Abdur Rauf Saheb & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2026-28 Vol No.07, Thursday, 10-17 September 2026, Issue No. 37-38

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹರ್ಝ್‌ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

* ಕಿರ್ಗಿಸ್ತಾನ್‌ನ ಜಲಾಲುದ್ದೀನ್ ಸಾಹಿಬ್ ಬರೆಯುತ್ತಾರೆ: ಜಲ್ಸ ಸಾಲಾನದಲ್ಲಿ ಭಾಗವಹಿಸಲು ನನಗೆ ಅವಕಾಶ ಸಿಕ್ಕಿದ್ದು ಇದೇ ಮೊದಲು. ಅದೇ ರೀತಿ, ಹುಝೂರ್ ಅನ್ವರ್(ಅತಬಿಅ) ಅವರ ನೇತೃತ್ವದಲ್ಲಿ ನಮಾಝನ್ನು ನಿರ್ವಹಿಸುವಾಗ, ನಾನು ಹಿಂದೆಂದೂ ಅನುಭವಿಸದ ಆಧ್ಯಾತ್ಮಿಕ ಆನಂದವನ್ನು ಅನುಭವಿಸಿದೆ. ಇಷ್ಟೊಂದು ಜನರು ಇರುತ್ತಾರೆ ಎಂದು ನನಗೆ ತಿಳಿದಿರಲಿಲ್ಲ. ಈ ಜಲ್ಸದಲ್ಲಿ ಭಾಗವಹಿಸಲು ನನಗೆ ಅವಕಾಶ ನೀಡಿದ್ದಕ್ಕಾಗಿ ನಾನು ಸರ್ವಶಕ್ತನಾದ ಅಲ್ಲಾಹನಿಗೆ ತುಂಬಾ ಕೃತಜ್ಞನಾಗಿದ್ದೇನೆ. ಅದೇ ರೀತಿ, ನನ್ನ ನಂಬಿಕೆ ಮತ್ತು ಧರ್ಮನಿಷ್ಠೆಯಲ್ಲಿ ನಾನು ಬಲಶಾಲಿಯಾಗಿದ್ದೇನೆ. ಅಲ್ಹಮ್ದುಲಿಲ್ಲಾಹ್.

* ಕಿರ್ಗಿಸ್ತಾನ್‌ನ ಇಲ್ಯಾಸ್ ವಹಿದೋವ್ ಸಾಹಿಬ್ ಬರೆಯುತ್ತಾರೆ: ವಿನೀತನು ಕಿರ್ಗಿಸ್ತಾನ್‌ನಿಂದ ಜರ್ಮನಿಯಲ್ಲಿ ಜಲ್ಸ ಸಾಲಾನದಲ್ಲಿ ಭಾಗವಹಿಸಿದ್ದೆ. ಜಲ್ಸ ಸಾಲಾನದಲ್ಲಿ ಭಾಗವಹಿಸಿದ ನಂತರ, ಸರ್ವಶಕ್ತನಾದ ಅಲ್ಲಾಹನು ಹರ್ಝ್‌ರತ್ ಇಮಾಮ್ ಮಹದಿ ಅಲೈಹಿಸ್ಸಲಾಮ್ ರವರ ಜಮಾಅತ್ ಅನ್ನು ಬೆಂಬಲಿಸುತ್ತಿದ್ದಾನೆ ಎಂದು ನನಗೆ ಮತ್ತೊಮ್ಮೆ ಮನವರಿಕೆಯಾಗಿದೆ. ವಾರ್ಷಿಕ ಸಮ್ಮೇಳನದಲ್ಲಿ ನನ್ನ ಆತ್ಮವನ್ನು ಹೆಚ್ಚು ಪ್ರಭಾವಿಸಿದ ವಿಷಯವೆಂದರೆ ನಾನು ಹುಝೂರ್ ಅನ್ವರ್(ಅತಬಿಅ) ಅವರ ನೇತೃತ್ವದಲ್ಲಿ ಪ್ರಾರ್ಥಿಸಿದಾಗ, ಅಲ್ಲಾ ತಾಲಾ ನನ್ನನ್ನು ನೋಡುತ್ತಿರುವಂತೆ ಭಾಸವಾಯಿತು.

* ಕಿರ್ಗಿಸ್ತಾನ್‌ನ ವಖಿದೋವ್ ಆಶಿರಾಲಿ ಬರೆಯುತ್ತಾರೆ: ಹತ್ತು ವರ್ಷಗಳ ಹಿಂದೆ, ನಾನು ಜರ್ಮನಿಯಲ್ಲಿ ನಡೆದ ಜಲ್ಸ ದಾಲಾನದಲ್ಲಿ ಭಾಗವಹಿಸಿದ್ದೆ. ಆ ಸಮಯದಲ್ಲಿ, ಮೂರು ಮಸೀದಿಗಳ ಉದ್ಘಾಟನೆಗೆ ಹಾಜರಾಗಲು ನನಗೆ ಅದೃಷ್ಟ ಸಿಕ್ಕಿತು. ಅದಕ್ಕಾಗಿ ನಾನು ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ವರ್ಷ ಜರ್ಮನಿಯಲ್ಲಿ ನಡೆಯುವ ಜಲ್ಸ ಸಾಲಾನದಲ್ಲಿ ಭಾಗವಹಿಸಲು ಸರ್ವಶಕ್ತನಾದ ಅಲ್ಲಾಹನು ಮತ್ತೊಮ್ಮೆ ನನಗೆ ಅವಕಾಶ ನೀಡಿದ್ದಾನೆ. ಕಳೆದ ಹತ್ತು ವರ್ಷಗಳಲ್ಲಿ ಜರ್ಮನಿಯಲ್ಲಿ ಅಹ್ಮದಿಯಾ ಜಮಾಅತ್ತಿನ ಪ್ರಗತಿಯನ್ನು ನೋಡಿದಾಗ, ಈ ರಹಸ್ಯದ ಹಿಂದೆ ಹುಝೂರ್ ಅನ್ವರ್(ಅತಬಿಅ) ಅವರ ಪ್ರಾರ್ಥನೆಗಳು ಮತ್ತು ಆಶೀರ್ವಾದದ ಉಪಸ್ಥಿತಿ ಇದೆ ಮತ್ತು ಅಲ್ಲಾಹನ ಬೆಂಬಲ ಅಹ್ಮದಿಯಾ ಸಮುದಾಯದೊಂದಿಗಿದೆ ಎಂದು ನನಗೆ ತಿಳಿದು ಬಂದಿದೆ. ಈ ಹತ್ತು ವರ್ಷಗಳ ವ್ಯತ್ಯಾಸದಲ್ಲಿ, ಈ ಸಮುದಾಯವು ಹರ್ಝ್‌ರತ್ ಪೈಗಂಬರ್(ಸ)ರು ಭವಿಷ್ಯ ನುಡಿದಿದ್ದ ಅದೇ ಸಮುದಾಯವಾಗಿದೆ ಎಂದು ಕಂಡುಬರುತ್ತದೆ. ಮತ್ತು ಆ ಭವಿಷ್ಯವಾಣಿಗಳು ಅಹ್ಮದಿಯಾ ಸಮುದಾಯದ ಮೇಲೆ ನೆರವೇರುತ್ತಿವೆ. ಮತ್ತು ಈ ಎಲ್ಲಾ ಅಭಿವೃದ್ಧಿಗಳು ಹುಝೂರ್ ಅನ್ವರ್(ಅತಬಿಅ) ಅವರ ಪ್ರಾರ್ಥನೆ ಮತ್ತು ಖಿಲಾಫತ್‌ನ ಅನುಗ್ರಹದಿಂದಾಗಿ ನಡೆಯುತ್ತಿವೆ. ಹುಝೂರ್ ಅನ್ವರ್(ಅತಬಿಅ) ಅವರ ಭಾಷಣವನ್ನು ಕೇಳಿದಾಗ, ನನ್ನ ನ್ಯೂನತೆಗಳನ್ನು ನಾನು ಅರಿತುಕೊಂಡೆ. ಹರ್ಝ್‌ರತ್ ಇಮಾಮ್ ಮಹದಿ(ಅ) ರವರ ಸಂದೇಶವನ್ನು ಇತರರಿಗೆ ತಿಳಿಸಲು ಮತ್ತಷ್ಟು ಉತ್ಸಾಹ ಹೆಚ್ಚಾಯಿತು.

## ಅಲ್ಬೇನಿಯಾದ ನಿಯೋಗದ ಭೇಟಿ

ತದನಂತರ, ಬೆಳಿಗ್ಗೆ 11:58 ಕ್ಕೆ, ಅಲ್ಬೇನಿಯಾದ ನಿಯೋಗವು ಹುಝೂರ್ ಅನ್ವರ್(ಅತಬಿಅ) ಅವರನ್ನು ಭೇಟಿ ಮಾಡುವ ಗೌರವವನ್ನು ಹೊಂದಿತ್ತು. ಅಲ್ಬೇನಿಯಾದ 20 ಜನರ ನಿಯೋಗವು ಸಭೆಗೆ ಸೇರಿತ್ತು.

ಹುಝೂರ್ ಅನ್ವರ್(ಅತಬಿಅ) ವಿಚಾರಿಸಿದಾಗ, ಮೊದಲ ಬಾರಿಗೆ ಐದು ಜನರು ಬಂದಿದ್ದಾರೆಂದು ಹೇಳಲಾಯಿತು. ಹುಝೂರ್ ಅನ್ವರ್(ಅತಬಿಅ) ಅವರನ್ನು ನೀವು ಜಲ್ಸವನ್ನು ಹೇಗೆ ಇಷ್ಟಪಟ್ಟಿದ್ದೀರಿ ಎಂದು ಕೇಳಿದರು. ಜಲ್ಸವು ತುಂಬಾ ಅದ್ಭುತ ಮತ್ತು ಉತ್ತಮವಾಗಿ ಸಂಘಟಿತವಾಗಿದೆ ಎಂದು ಎಲ್ಲರೂ ವ್ಯಕ್ತಪಡಿಸಿದರು.

ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರು ತಾವು ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಬೋಧಿಸುತ್ತಿದ್ದೇವೆ ಮತ್ತು ಸಂಶೋಧನೆಯನ್ನೂ ಮಾಡುತ್ತಿದ್ದೇವೆ ಎಂದು ಹೇಳಿದರು. ಹುಝೂರ್ ಅನ್ವರ್(ಅತಬಿಅ) ಅವರು ಯಾವ ರೀತಿಯ ಸಂಶೋಧನೆ ಮಾಡುತ್ತಿದ್ದಾರೆ ಎಂದು ವಿಚಾರಿಸಿದಾಗ, ವಿಶೇಷವಾಗಿ ಮಕ್ಕಳ ಕಾಯಿಲೆಗಳಿಗೆ ಸಂಬಂಧಿಸಿದ ಸಂಶೋಧನೆ ಇದೆ ಮತ್ತು ಗರ್ಭಾವಸ್ಥೆಯಲ್ಲಿ ಮಕ್ಕಳಿಗೆ ಬರುವ ಕಾಯಿಲೆಗಳು ಸಹ ನನ್ನ ಸಂಶೋಧನೆಯಲ್ಲಿ ಸೇರಿವೆ ಎಂದು ಹೇಳಿದರು.

ನಮ್ಮ ಆಧ್ಯಾತ್ಮಿಕ ಸ್ಥಿತಿ ಕ್ಷೀಣಿಸುತ್ತಿದೆ ಎಂದು ಅಹ್ಮದಿ ಸ್ನೇಹಿತರೊಬ್ಬರು ಹೇಳಿದರು. ಕಳೆದ ಕೆಲವು ವರ್ಷಗಳಿಂದ ಯಾವುದೇ ಜಲ್ಸ ನಡೆದಿಲ್ಲ. ಜಲ್ಸಕ್ಕೆ ಬರುವುದು ತುಂಬಾ ಸಂತೋಷ ತಂದಿದೆ. ನಾವು ಇಲ್ಲಿಂದ ವರ್ಷಪೂರ್ತಿ ನಮ್ಮ ಬ್ಯಾಟರಿಗಳನ್ನು ಚಾರ್ಜ್ ಮಾಡಲು ಹೋಗುತ್ತೇವೆ. ನಮಗೆ ಹುಝೂರ್ ಅನ್ವರ್(ಅತಬಿಅ) ರ ಮೇಲೆ ಅಪಾರ ಪ್ರೀತಿ ಇದೆ. ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ.

ಒಬ್ಬ ಅತಿಥಿ ನಮಾಝಿನ ಸಮಯದಲ್ಲಿ ವಿವಿಧ ಆಲೋಚನೆಗಳು ಮನಸ್ಸಿಗೆ ಬರುತ್ತವೆಯೇ ಎಂದು ಕೇಳಿದಾಗ, ಹುಝೂರ್ ಅನ್ವರ್(ಅತಬಿಅ) ಹೇಳಿದರು: **ಆವುದು ಬಿಲ್ಲಾಹಿ** ಮತ್ತು **ಲಾಹೌಲ್ ವಲಾ ಖುವತಾ ಇಲ್ಲಾ ಬಿಲ್ಲಾಹಿ ಅಲ್–'ಅಲಿ ಅಲ್–'ಅಜೀಮ್** ಪಠಿಸಿ ನಂತರ ನಮಾಝಿನ ಮೇಲೆ ಗಮನಹರಿಸಿ.

ಹರ್ಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮಾಝಿನ ಸಮಯದಲ್ಲಿ ನಮಾಝ್ ತಪ್ಪಿಸಲಾಗುತ್ತಿದೆ ಎಂಬ ಆಲೋಚನೆಗಳು ಪದೇ ಪದೇ ಮನಸ್ಸಿಗೆ ಬಂದರೆ, ಸರ್ವಶಕ್ತ ಅಲ್ಲಾಹನ ಕಡೆಗೆ ಸುಆವಿನೊಂದಿಗೆ ಪ್ರಾರ್ಥನೆಯ ಮೇಲೆ ಗಮನಹರಿಸಿರಿ. **ಲಾಹೌಲ್ ವಲಾ ಖುವತಾ, ಆವುದು ಬಿಲ್ಲಾಹ್** ಅನ್ನು ಪಠಿಸಿರಿ.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಇದು ನಿರಂತರ ಹೋರಾಟ ಮತ್ತು ಪ್ರಯತ್ನವಾಗಿದೆ. ಇದನ್ನು ಒಮ್ಮೆಯಾದರೂ ಬರುವುದರಿಂದ ಗುಣಪಡಿಸಬಹುದು.

ಅಲ್ಬೇನಿಯನ್ ಜಮಾಅತ್‌ನ ಉಪಾಧ್ಯಕ್ಷರು ತಾವು ಹಲವು ಬಾರಿ ಸಭೆಗೆ ಬಂದಿರುವುದಾಗಿ ಹೇಳಿದರು. ಹುಝೂರ್ ಅನ್ವರ್(ಅತಬಿಅ) ಪದಾಧಿಕಾರಿಗಳ ಬಗ್ಗೆ ಧರ್ಮೋಪದೇಶ ನೀಡಿದ್ದರು. ಹುಝೂರ್ ಅನ್ವರ್(ಅತಬಿಅ) ಹೇಳಿದರು: ನಿನ್ನೆ ನನ್ನ ಭಾಷಣದಲ್ಲಿ ನಾನು ನಿಮಗೆ ಹೇಳಿದ್ದೆ, ನಿಜವಾದ ಇಸ್ಲಾಂ ಧರ್ಮವನ್ನು ಬೋಧಿಸುವ ನಿಮ್ಮ ಸ್ವಂತ ಉದಾಹರಣೆಯನ್ನು ನೀವು ಪ್ರಸ್ತುತಪಡಿಸಬೇಕು. ನಿಮ್ಮ ಈ ಪ್ರಾಯೋಗಿಕ ಉದಾಹರಣೆ ಮೌನ ಧರ್ಮೋಪದೇಶ. ಹುಝೂರ್ ಅನ್ವರ್(ಅತಬಿಅ) ಹೇಳಿದರು: ಪದಾಧಿಕಾರಿಗಳ ಬಗ್ಗೆ ಧರ್ಮೋಪದೇಶವು ನಿಮಗಾಗಿಯೂ ಆಗಿದೆ.

ನಾವು ಮಸೀದಿಯ ಆವರಣದಲ್ಲಿ 220 ಆಲಿವ್ ಮರಗಳನ್ನು ನೆಟ್ಟಿದ್ದೇವೆ, ನಾವು ನಮ್ಮದೇ ಆದ ಎಣ್ಣೆಯನ್ನು ತಂದಿದ್ದೇವೆ ಎಂದು ಸ್ನೇಹಿತರೊಬ್ಬರು ಹೇಳಿದರು. ಹುಝೂರ್ ಅನ್ವರ್(ಅತಬಿಅ) ಅವರನ್ನು ವಿಚಾರಿಸಿದಾಗ, ನಾವೇ ಹೋಗಿ ನಮ್ಮ ಮುಂದೆ ಈ ಎಣ್ಣೆಯನ್ನು ಹೊರತೆಗೆದಿದ್ದೇವೆ ಎಂದು ಅವರು ಹೇಳಿದರು.

* ಅಲ್ಬೇನಿಯನ್ ಅಹ್ಮದಿ, ಗೆಜಿಮ್ ಮುಝಾಕಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ ಹೇಳಿದರು: ಈ ಜಲ್ಸವು ಅವರಿಗೆ ಅಸಾಮಾನ್ಯವಾಗಿ ಭವ್ಯವಾಗಿ ಕಾಣುತ್ತಿತ್ತು. ವ್ಯವಸ್ಥೆಗಳು ತುಂಬಾ ಹೆಚ್ಚಾಗಿದ್ದವು. ಮತ್ತು ಅವರು ಕಣ್ಣೀರಿನ ಕಣ್ಣುಗಳಿಂದ ಹೇಳಿದರು: ಕೊರೊನಾದಿಂದಾಗಿ ವರ್ಷಗಳ ಅಂತರದಿಂದಾಗಿ, ನಮ್ಮ ಆತ್ಮವು ಅಗತ್ಯವಾಗಿತ್ತು. ಜಲ್ಸ ಮತ್ತು ಹುಝೂರ್ ಅವರೊಂದಿಗಿನ ಭೇಟಿಯಿಂದಾಗಿ, ಆತ್ಮವು ಒಂದು ವರ್ಷದವರೆಗೆ ಚಾರ್ಜ್ ಆಗುತ್ತಿದ್ದಂತೆ.

**(ಮುಂದುವರಿಯುವುದು)**

**'ಬದರ್' ವಾರಪತ್ರಿಕೆಯನ್ನು Online**
**ಮುಖಾಂತರ**
**ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**
**https://akhbarbadr.in/Kannada/#gsc.tab=0**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.